ಐಕ್ಯರಂಗ



ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ

ಸಂಪುಟ 19 ಸಂಚಿಕೆ 29 ಜುಲೈ 14-20, 1997 ಬೆಲೆ ರೂ. 2.00

ಜನತಾದಳದಲ್ಲಿ ಮತ್ತೊಂದು ಹೋಳು

ಮತ್ತೊಮ್ಮೆ ವ್ಯಕ್ತಿಪ್ರತಿಷ್ಠೆಯ ಕ್ಷುದ್ರ ರಾಜಕೀಯ

ಎಸ್.ಕೆ.ಉಪಾಧ್ಯಾಯ

ರಾಷ್ಟ್ರದ ಜನತಾದಳ ಎರಡು ಹೋಳಾಗಿದೆ. ಯಾವುದೇ ಸೈದ್ಧಾಂತಿಕ ನೆಲೆಗಟ್ಟಿನಿಂದಾಗಿ ಅದಾದುದಲ್ಲ. ಕಳೆದ ಏಳು ವರ್ಷಗಳಿಂದ ತಮ್ಮ ಪಕ್ಷದ ಸಾಂಸ್ಥಿಕ ಚುನಾವಣೆ ನಡೆಸದೆ ಕೊನೆಗೆ ಚುನಾವಣಾ ಆಯೋಗದ ಆದೇಶ ಪಾಲನೆಯಲ್ಲೂ ಹಿಂದೇಟು ಹಾಕುತ್ತಿದ್ದ ಜನತಾದಳದ ಮುಖಂಡತ್ವ ಕೋರ್ಟಿನ ಆದೇಶಕ್ಕೆ ಮಣಿದು ಚುನಾವಣಾ ಪ್ರಕ್ರಿಯೆ ಪ್ರಾರಂಭ ಮಾಡಿದಾಗ ಯಾರು ಅಧ್ಯಕ್ಷರಾಗಬೇಕೆಂಬ ಒಂದೇ ಒಂದು ಕಾರಣಕ್ಕಾಗಿ ಪಕ್ಷ ಒಡೆಯುವಂತೆ ಹುನ್ನಾರ ನಡೆಸಿ ಈಗ ಎರಡು ಪಕ್ಷಗಳಾಗಿವೆ. ಒಂದು ಜನತಾಪಕ್ಷ ಮತ್ತೊಂದು ರಾಷ್ಟ್ರೀಯ ಜನತಾ ಪಕ್ಷ. ಲಲ್ಲೂ ಪ್ರಸಾದ್ ಅವರ ಹಠಮಾರಿತನದಿಂದಾಗಿ ಸಂಯುಕ್ತ ರಂಗದಲ್ಲಿ ಒಂದು ಪ್ರಧಾನ ಪಕ್ಷವಾಗಿ, ಕೇಂದ್ರದಲ್ಲಿ ಪ್ರಧಾನ ಮಂತ್ರಿ ಸ್ಥಾನ ಗಿಟ್ಟಿಸಿರುವ ಜನತಾದಳ ಇಬ್ಭಾಗವಾಗುವಂತಹ ಅಹಿತಕರ ಘಟನೆ ನಡೆದು ಹೋಯಿತು. ಇದು ದೇಶದ ರಾಜಕೀಯದ ಮೇಲೆ ಕೆಟ್ಟ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನೊಳಗೊಂಡು ಎಡ ಪಕ್ಷಗಳ ಸತತ ಪ್ರಯತ್ನದಿಂದಾಗಿ ಬಿಜೆಪಿ-ಕಾಂಗ್ರೆ ಪಕ್ಷಗಳನ್ನು ಹೊರತುಪಡಿಸಿ ಎಡಜಾತ್ಯಾತೀತ ಪ್ರಜಾಪ್ರಭುತ್ವ ಪಕ್ಷಗಳನ್ನೆಲ್ಲ ಸೇರಿಸಿ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಸಂಯುಕ್ತ ರಂಗ ರಚಿಸಿ ಜನತಾದಳದವರನ್ನೇ ಪ್ರಧಾನ ಮಂತ್ರಿಯಾಗಿ ಆರಿಸಿ ಒಂದೂವರೆ ವರ್ಷಗಳಿಂದಲೂ ಆಡಳಿತೆ ನಡೆಸಲು, ಕನಿಷ್ಟ ಕಾರ್ಯಕ್ರಮದ ಕೆಲವು ಅಂಶಗಳನ್ನು ಕಾರ್ಯರೂಪದಲ್ಲಿ ಇಳಿಸಲು ಸಾಧ್ಯವಾಗಿದೆ. ಕನಿಷ್ಟ ಕಾರ್ಯಕ್ರಮಗಳಲ್ಲಿರುವ ಇನ್ನೂ ಹಲವಾರು ಅಂಶಗಳನ್ನು ಜಾರಿಗೊಳಿಸುವ ಸಾಧ್ಯತೆಯಿದೆ. ಹಾಗೆಯೇ ಸಂಯುಕ್ತ ರಂಗವನ್ನು ಇನ್ನಷ್ಟು ಬಲಿಷ್ಟಗೊಳಿಸಿ ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧ ಮತ್ತೊಂದು ಪರ್ಯಾಯ ವ್ಯವಸ್ಥೆಯನ್ನು ಜನರ ಮುಂದಿಟ್ಟು ಅವರ ವಿಶ್ವಾಸಗಳಿಸುವ ಸಾಧ್ಯತೆಗಳಿವೆ. ಹಾಗಿರುವಾಗ ಮೇವು ಹಗರಣದಲ್ಲಿ ಆರೋಪಿಯಾಗಿ ಗುರುತಿಸಲ್ಪಟ್ಟಿರುವ ಬಿಹಾರದ ಮುಖ್ಯಮಂತ್ರಿ, ಲಲ್ಲೂ ಪ್ರಸಾದ್ ಯಾದವ ಅವರು ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು, ಜನತಾದಳದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವುದನ್ನು ಬಿಟ್ಟುಬಿಡಬೇಕೆಂದು ಬಂದ ಒತ್ತಾಯಕ್ಕೆ ಮಣಿಯದೆ ಕೋರ್ಟಿನ ಆದೇಶದಂತೆ ನಡೆಯುವ ಚುನಾವಣೆಯನ್ನೇ ಬಹಿಷ್ಕರಿಸಿ, ತನ್ನದೇ ಪಕ್ಷವನ್ನು ಕಟ್ಟಿ ಜನತಾದಳವನ್ನು ಇಬ್ಭಾಗಿಸಿರುವುದು ನಿಜವಾಗಿಯೂ ಖಂಡನೀಯ. ಇಂಥವರಿಗೆ ತಮ್ಮ ಸ್ವಂತ ಪ್ರತಿಷ್ಟೆ ಮಾತ್ರ ಪ್ರಧಾನವಲ್ಲದೆ ಬಿಜೆಪಿ-ಕಾಂಗ್ರೆಸ್ ವಿರೋಧಿ ಶಕ್ತಿಗಳನ್ನು ಬಲಗೊಳಿಸಿ, ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಸಂಯುಕ್ತ ರಂಗ ಸರಕಾರವನ್ನು ಪೂರ್ಣಾವಧಿಯವರೆಗೆ ಮುಂದುವರಿಸಿ ಕೊಂಡು ಹೋಗುವ ಇಚ್ಛೆ ಇಲ್ಲದಂತೆ ಕಂಡುಬರುತ್ತದೆ.

ಹಾಗೆ ನೋಡಿದರೆ ಲಲ್ಲೂ ಪ್ರಸಾದ್ ಯಾದವ ಅವರು, ತಮ್ಮ ಪಕ್ಷವನ್ನು ಸ್ವಂತ ಪ್ರತಿಷ್ಠೆಯ ನೆಲೆಯಲ್ಲಿ ಇಬ್ಭಾಗಿಸುವ ಕ್ರಮ, ಜನತಾದಳಕ್ಕೆ ಹೊಸದೇನಲ್ಲ. 1990 ರಲ್ಲಿ ವಿ.ಪಿ.ಸಿಂಗ್ ಅವರ ಜನತಾದಳದ ಮುಖಂಡತ್ವದ ರಾಷ್ಟ್ರೀಯ ರಂಗ ಸರಕಾರದಿಂದ ಚಂದ್ರಶೇಖರ್ ಅವರ ಮುಖಂಡತ್ವದಲ್ಲಿ 54 ಎಂಪಿಗಳು ಪ್ರತ್ಯೇಕಗೊಂಡು ಸಿಂಗ್ ಸರಕಾರವನ್ನು ಉರುಳಿಸಿದರು. 1991 ರಲ್ಲಿ ಅಜಿತ್ ಸಿಂಗ್ ಅವರನ್ನು ಪಕ್ಷದಿಂದ ಹೊರಗೆ ಹಾಕಿದರಿಂದ ಅಲ್ಲಿಯ ಪಕ್ಷ ಒಡೆಯಿತು. 1992-93 ರಲ್ಲಿ ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಯಾದವ ಅವರು ಸಮಾಜವಾದಿ ಪಾರ್ಟಿ ಕಟ್ಟುವ ಮೂಲಕ ದಳ ಒಡೆಯಿತು.. 1994 ರಲ್ಲಿ ಬಿಹಾರ ಮತ್ತು ಒರಿಸ್ಸಾದಲ್ಲಿ ಸಮತಾ ಪಾರ್ಟಿ ರಚಿಸುವ ಮೂಲಕ ಜಾರ್ಜ್ ಫರ್ನಾಂಡೀಸ್ ಅವರು ಪಕ್ಷ ಒಡೆದರು. ಪಕ್ಷ ಸ್ಥಾಪನೆಯಾದ 1988 ರಿಂದಲೂ ಜನತಾಪಕ್ಷ-ಜನತಾದಳ ಮುಖಂಡರ ಸ್ವಪ್ರತಿಷ್ಟೆಯ ಕಾರಣಗಳಿಂದಾಗಿಯೂ ಮುಖಂಡರ ಅಧಿಕಾರದ ಮದದಿಂದಾಗಿಯೂ ಪಕ್ಷ ಹೋಳಾಗುತ್ತಲೇ, ಕ್ಷೀಣಿಸುತ್ತಲೇ ಬಂದಿದೆ. ಮೊನ್ನೆ ನಡೆದ ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕ ಮತ್ತು ಬಿಹಾರಗಳಲ್ಲಿ ಮಾತ್ರ ಅದು ತನ್ನ ಪ್ರಭಾವವನ್ನು ಉಳಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಕಳೆದ ಏಳೆಂಟು ವರ್ಷಗಳಲ್ಲಿ ತಮ್ಮ ಪಕ್ಷದಲ್ಲಿ ಉಂಟಾಗಿರುವ ವೈಯಕ್ತಿಕ ಭಿನ್ನಾಭಿಪ್ರಾಯದ ಪರಿಣಾಮವಾಗಿ ದೇಶದಲ್ಲಿ ತಮ್ಮ ಪಕ್ಷ ದುರ್ಬಲಗೊಂಡಿರುವ ವಿಷಯ ಜನತಾದಳದ ಮುಖಂಡರ ಮೇಲೆ ಯಾವುದೇ ಪರಿಣಾಮ ಬೀರಿದಂತೆ ಕಂಡುಬರುವುದಿಲ್ಲ.

ಜನತಾಪಕ್ಷದ ಹಿಂದಿನ ಒಡಕಿಗೂ ಈಗಿನ ಒಡಕಿಗೂ ಅಜಗಜಾಂತರವಿದೆ. ಈಗ ಕಾಂಗ್ರೆಸ್ ಪ್ರಭಾವ ಕಳಕೊಂಡಿದೆ. ಬಿಜೆಪಿ ಮೇಲೆ ಬರಲು ಪ್ರಯತ್ನ ನಡೆಸುತ್ತಿದೆ. ಎಡಪಕ್ಷಗಳ ಪ್ರಯತ್ನದಿಂದ ಸಂಯುಕ್ತ ರಂಗ ಹುಟ್ಟಿಕೊಂಡು ಅಧಿಕಾರ ನಡೆಸುತ್ತಿದೆ. ಈಗಿನ ಜನತಾದಳದ ಒಡಕು ಈ ಎಲ್ಲ ಪ್ರಯತ್ನಕ್ಕೆ ಮಾರಕವಾಗಿದೆ. ○

ಲಲ್ಲೂ ಪಕ್ಷಕ್ಕೆ ಸಂಯುಕ್ತ ರಂಗದಲ್ಲಿ ಸ್ಥಾನವಿಲ್ಲ

ಲಲ್ಲೂ ಪ್ರಸಾದ್ ಯಾದವ್ ಸಿಡಿದು ಹೋಗಿ ರಚಿಸಿಕೊಂಡ ರಾಷ್ಟ್ರೀಯ ಜನತಾದಳಕ್ಕೆ ಸಂಯುಕ್ತ ರಂಗವನ್ನು ಪ್ರವೇಶಿಸಲು ಬಿಡಬಾರದು, ಆ ಪಕ್ಷಕ್ಕೆ ಸೇರಿದ ಮೂವರು ಕೇಂದ್ರ ಮಂತ್ರಿಗಳನ್ನು ತಕ್ಷಣ ಸಂಪುಟದಿಂದ ಕೈಬಿಡಬೇಕು ಎಂದು ಎಡಪಕ್ಷಗಳ ಮುಖಂಡರು ಸ್ಪಷ್ಟವಾಗಿ ಹೇಳಿದ್ದಾರೆ. ಸಂಯುಕ್ತ ರಂಗ ಒಂದು ಪರ್ಯಾಯ ಒದಗಿಸುವ ಉದ್ದೇಶದಿಂದ ರಚನೆಯಾಯಿತು. ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಅದರೊಳಗೆ ಸಂಪೂರ್ಣ ಐಕ್ಯತೆ ಇತ್ತು. ಲಲ್ಲೂ ಪ್ರಸಾದ್ ಯಾದವ್‌ರವರು ತನ್ನನ್ನು ಉಳಿಸಿಕೊಳ್ಳಲಿಕ್ಕೆ ಜನತಾದಳವನ್ನು ಒಡೆದಿದ್ದಾರೆ ಎಂದ ಸುರ್ಜಿತ್‌ರವರು "ವಿಭಜಕ ನಿಲುವು ತಳೆದ ಅವರನ್ನು ಸಂಯುಕ್ತ ರಂಗದಲ್ಲಿ ಪ್ರವೇಶಿಸಲು ಬಿಡಬಾರದು" ಎಂದಿದ್ದಾರೆ. ಅವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಬಿಹಾರದಲ್ಲಿ ಎಡಪಕ್ಷಗಳ ನೇತೃತ್ವದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಬಂಧನಕ್ಕೊಳಗಾಗಲಿದ್ದಾರೆ ಎಂದು ಸುರ್ಜಿತ್ ಹೇಳಿದರು.

ಕರ್ನಾಟಕದ ಮೇಲೂ ಕರಿಛಾಯೆ!

ಜನತಾದಳದಲ್ಲಿಯ ಒಡಕು ರಾಜ್ಯದಲ್ಲಿ ಯಾವ ಪ್ರಭಾವ ಬೀರುವುದಿಲ್ಲವೆಂದು ಮುಖ್ಯಮಂತ್ರಿಯವರನ್ನೊಳಗೊಂಡು ಹಲವಾರು ಜನತಾದಳ ಮುಖಂಡರು ಹೇಳುತ್ತಿದ್ದಾರೆ. ಆದರೆ ಮುಂದಿನ ದಿನಗಳಲ್ಲಿ ಏನಾಗಬಹುದೆಂದು ಊಹಿಸಲು ಅಸಾಧ್ಯವಾಗಲಾರದು. ಕೇಂದ್ರದ ಜವಳಿ ಸಚಿವ ಆರ್.ಎಲ್.ಜಾಲಪ್ಪ ನವರನ್ನೊಳಗೊಂಡು ರಾಜ್ಯದ ಲೋಕಸಭೆ ಸದಸ್ಯರುಗಳಾದ ಬಸವರಾಜ ರಾಯರೆಡ್ಡಿ, ಕಮರುಲ್ ಇಸ್ಲಾಂ, ಎಚ್.ವೈ.ಮೇಟಿ, ಕೋದಂಡರಾಮಯ್ಯನವರೂ ಕರ್ನಾಟಕ ಸರಕಾರದ ಮಂತ್ರಿಗಳಾದ ಆರ್.ವಿ.ದೇಶಪಾಂಡೆ, ಸಿಂಧ್ಯಾ, ಸಿದ್ರಾಮಯ್ಯ, ರಮೇಶ್ ಜಿಗಜಿಣಗಿ, ಎಲ್.ಸಿ.ಮಹಾದೇವಪ್ಪ, ಗುರುಪಾದಪ್ಪ ನಾಗಮಾರಪಲ್ಲಿ, ಡಾ॥ ಶಂಕರ ನಾಯಕ, ಲೀಲಾದೇವಿ ಪ್ರಸಾದ್, ಬಸವರಾಜ ಶಿವಣ್ಣನವರ ಮೊದಲಾದ ಮಂತ್ರಿಗಳು ಬಹಿರಂಗವಾಗಿಯೇ ಲಲ್ಲೂ ಪ್ರಸಾದ್ ಯಾದವರನ್ನು ಬೆಂಬಲಿಸುವ ಹೇಳಿಕೆ ನೀಡಿದರು. ಇವರಲ್ಲದೆ ಶಾಸಕರುಗಳಾದ ವೈಜಯಂತ ಪಾಟೀಲ, ಬಿ.ಆರ್.ಯಾದಗಿರಿ, ವಿ.ಎಸ್.ಉಗ್ರಪ್ಪನವರು ಹಾಗೆಯೇ ಲಕ್ಷ್ಮಿಸಾಗರ ಅವರೆಲ್ಲರೂ ಲಲ್ಲೂ ಪ್ರಸಾದ್ ಯಾದವ ಅವರ ಪರವಾಗಿದ್ದೆವೆಂದೇ ಹೇಳಿದ್ದಾರೆ. ಇನ್ನೂ ಕೆಲವರು ಕಾರಣಾಂತರಗಳಿಂದ ತಮ್ಮ ನಿಲುಮೆಯನ್ನು ಬಹಿರಂಗಗೊಳಿಸಿರಲಿಕ್ಕಿಲ್ಲ. ಕೇಂದ್ರದಲ್ಲಿಯ ಮಾನವ ಸಂಪನ್ಮೂಲ ಮಂತ್ರಿ ಎಸ್.ಆರ್.ಬೊಮ್ಮಾಯಿಯವರು ಲಲ್ಲೂ ಪ್ರಸಾದ್ ಪರವಾಗಿದ್ದು ಎರಡೂ ದಂಡೆಯ ಮೇಲೆ ಕಾಲಿಟ್ಟು ಮಾತಾಡುತ್ತಿದ್ದಾರೆ. ಮೇಲ್ಕಾಣಿಸಿದ ಕೇಂದ್ರ ಮಂತ್ರಿಗಳೂ, ಲೋಕಸಭಾ ಸದಸ್ಯರೆಲ್ಲ ಜನತಾದಳದ ಅಧ್ಯಕ್ಷರ ಚುನಾವಣೆಯಲ್ಲಿ ಮತಚಲಾಯಿಸಲಿಲ್ಲ. ರಾಜ್ಯದ ಏಳು ಮಂತ್ರಿಗಳೂ ಚುನಾವಣೆ ಬಹಿಷ್ಕರಿಸುವ ನಿಲುಮೆ ತಾಳಿದ್ದರು. ಪ್ರಾರಂಭದಲ್ಲಿ ತಂತಮ್ಮ ಮನಸಾಕ್ಷಿಯಂತೆ ಮತ ನೀಡಬಹುದೆಂದು ಹೇಳಿದ್ದ ಮುಖ್ಯ ಮಂತ್ರಿ ಜೆ.ಹೆಚ್.ಪಟೇಲರು, ಅನಂತರ ಬೆಳೆದು ಬಂದ ಘಟನೆಗಳ ಹಿನ್ನೆಲೆಯಲ್ಲಿ(ರಾಜ್ಯಕ್ಕೆ ದೇವೇಗೌಡರ ಸಂದರ್ಶನದ ನಂತರ) ಆತ್ಮಸಾಕ್ಷಿ ನಿಲುಮೆಯನ್ನು ಬಿಟ್ಟುಕೊಟ್ಟು ತಮ್ಮ ಮಂತ್ರಿಮಂಡಲದ ಸದಸ್ಯರಿಗೆ ಒತ್ತಡ ತರುವ ದೃಷ್ಟಿಯಲ್ಲಿ ಮತದಾನದಲ್ಲಿ ಭಾಗವಹಿಸದಿದ್ದರೆ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದರು. ಲಲ್ಲೂ ಪ್ರಸಾದ್ ಯಾದವ ಅವರನ್ನೊಳಗೊಂಡು ರಾಜ್ಯದ ಮಂತ್ರಿಗಳವರೆಗೆ ಎಲ್ಲರೂ ಸಂಯುಕ್ತ ರಂಗ ಸರಕಾರಕ್ಕೆ ಅಪಾಯವಿಲ್ಲವೆಂದೂ ಜೆ.ಹೆಚ್.ಪಟೇಲ ಸರಕಾರಕ್ಕೂ ಅಪಾಯವಿಲ್ಲೆಂದು ಘೋಷಿಸುತ್ತಲೇ ಇದ್ದಾರೆ.

ಆರ್.ಎಲ್.ಜಾಲಪ್ಪ, ಎಸ್.ಆರ್.ಬೊಮ್ಮಾಯಿ ಇವರೆಲ್ಲ ಯಾವ ಆಧಾರದಲ್ಲಿ ಲಲ್ಲೂ ಪ್ರಸಾದ್ ಯಾದವ ಅವರಿಗೆ ಬೆಂಬಲ ಕೊಡುತ್ತಿದ್ದಾರೆ? ದನಗಳ ಮೇವನ್ನು ತಾನು ತಿಂದು ಲಕ್ಷಾವಧಿ ದನಕರುಗಳನ್ನು ಎಲುಬು ಗೂಡುಗಳನ್ನಾಗಿ ಮಾಡಿದ್ದಕ್ಕಾಗಿಯೇ ಅಥವಾ ಯಾವುದಾದರೊಂದು ಸೈದ್ಧಾಂತಿಕ ತಳಹದಿಯಲ್ಲಿ ಜನಪರ ಕಾರ್ಯಕ್ರಮ ರೂಪಿಸುತ್ತಿದ್ದಾರಂತಲೋ ಎಂಬುದನ್ನು ತಮ್ಮ ಮತದಾರರಿಗೆ ತಿಳಿಸುವುದು ಅಗತ್ಯ. ಪಕ್ಷದ ಸಂವಿಧಾನಕ್ಕೆ ವಿರುದ್ಧವಾಗಿ, ಭ್ರಷ್ಟಾಚಾರದಲ್ಲಿ ಸಿಲುಕಿಕೊಂಡು ಲಲ್ಲೂ ಪ್ರಸಾದ ಯಾದವ ಅವರಿಗೆ ಆರ್.ಎಲ್.ಜಾಲಪ್ಪ ಮತ್ತಿನ್ನಿತರ ಎಂ.ಪಿ. ಮತ್ತು ಮಂತ್ರಿಗಳ ಬೆಂಬಲ ನಾಚಿಕೆಗೇಡು ವರ್ತನೆ. ಇಂಥವರಿಗೆ ಜನ ಸರಿಯಾಗಿ ಬುದ್ಧಿ ಕಲಿಸುವುದು ಅಗತ್ಯ.

ಕರ್ನಾಟಕದಲ್ಲಿ ಜನತಾದಳವನ್ನು ಬಲಹೀನಗೊಳಿಸುವ ಪ್ರಯತ್ನವನ್ನು ಲೋಕಶಕ್ತಿ ಅಧ್ಯಕ್ಷ ರಾಮಕೃಷ್ಣ ಹೆಗಡೆಯವರೂ ಮಾಡುತ್ತಿದ್ದಾರೆ. ಅವರ ಪರ ಮಂತ್ರಿಗಳೂ, ಶಾಸಕರೂ ಲಲ್ಲೂ ಪ್ರಸಾದ್ ಯಾದವರಿಗೆ ಬೆಂಬಲ ಸೂಚಿಸುತ್ತಿದ್ದಾರೆ. ತನ್ನ ಪರ ಮಂತ್ರಿಗಳೂ, ಶಾಸಕರು ಜನತಾದಳ ಬಿಟ್ಟು ಬರುವಂತೆ ಜೂನ್ ಕೊನೆಯೊಳಗೆ ಕರೆ ಕೊಡುತ್ತೇನೆಂಬ ಅವರ ಘೋಷಣೆ ಕಾಗದಲ್ಲೇ ಉಳಿದಿದೆ. ಹೆಗಡೆಯವರು ಅಂಥ ಧೈರ್ಯ ಮಾಡಲು ಹಿಂಜರಿದಂತೆ ಕಂಡುಬರುತ್ತದೆ.

ಜಾಲಪ್ಪ, ಬೊಮ್ಮಾಯಿ ಹಾಗೆಯೇ ದೇಶಪಾಂಡೆ, ಸಿಂಧ್ಯಾ, ಸಿದ್ರಾಮಯ್ಯ ಮೊದಲಾದವರ ಅಂತರಂಗ ಬಯಲಾಗಲೇ ಬೇಕಾಗಿದೆ. ಲಲ್ಲೂ ಪ್ರಸಾದ್ ಯಾದವ ಅವರ ರಾಷ್ಟ್ರೀಯ ಜನತಾದಳ ಸಂಯುಕ್ತ ರಂಗದಲ್ಲಿರಬೇಕೆ, ಆ ಪಕ್ಷದ ಮೂವರು ಮಂತ್ರಿಗಳು ಕೇಂದ್ರ ಮಂತ್ರಿಮಂಡಲದಲ್ಲಿ ಉಳಿಯಬೇಕೆ ಎಂಬ ಪ್ರಶ್ನೆಯನ್ನವಲಂಬಿಸಿದೆ ಈ ಪುಢಾರಿಗಳ ನಿರ್ಧಾರ.

ಆದ್ದರಿಂದ ಎಲ್ಲವೂ ಸರಿಯಿದೆ, ಎಲ್ಲ ಸರಿಯಾಗುತ್ತದೆ, ರಾಜ್ಯದ ಜೆಹೆಚ್.ಪಟೇಲ ಸರಕಾರಕ್ಕೆ ಭಯವಿಲ್ಲೆಂಬ ಮಾತುಗಳಿಗೆಲ್ಲ ಹುರುಳಿಲ್ಲ, ಲಲ್ಲೂ ಪ್ರಸಾದ ಬೆಂಕಿ ಹಚ್ಚಿದ್ದಾರೆ. ಆರ್.ಎಲ್.ಜಾಲಪ್ಪ, ಬೊಮ್ಮಾಯಿ, ಕೋದಂಡರಾಮಯ್ಯನವರೆಲ್ಲ ಎಣ್ಣೆ ಸುರಿಯುತ್ತಿದ್ದಾರೆ. ಗಡಿಗೆ ಒಡೆದು ಬಿಸಿ ನೀರು ಯಾವಾಗ ಸುರಿಯುತ್ತದೆ, ಜೆ.ಹೆಚ್.ಪಟೇಲರಿಗೆ ಅಭ್ಯಂಗ ಸ್ನಾನ ಯಾವಾಗ ಮಾಡಿಸುತ್ತಾರೆಂದು ಹೇಳುವುದೂ ಕಷ್ಟ

ಒಂದೆಡೆ ಪಶ್ಚಿಮಬಂಗಾಳದಲ್ಲಿ ಎಡರಂಗ ಸರಕಾರ ನಿರಂತರವಾಗಿ ೨೦ ವರ್ಷ ಆಳ್ವಿಕೆ ನಡೆಸಿ ೨೧ ನೇ ವರ್ಷಕ್ಕೆ ಕಾಲಿಟ್ಟಿರುವಾಗ, ಇನ್ನೊಂದೆಡೆ ಅದೇ ೨೦ ವರ್ಷಗಳಲ್ಲಿ ಜನತಾಪಕ್ಷ ಜನತಾದಳವಾಗಿ ಹಲವು ಹೋಳುಗಳಾಗಿ, ಈಗ ಮತ್ತೊಮ್ಮೆ ಹೋಳಾಗಿರುವುದು ಏನನ್ನು ಸೂಚಿಸುತ್ತದೆ.



1. ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯವನ್ನು ಕಳಚಿಹಾಕುವುದನ್ನು ನಿಲ್ಲಿಸಬೇಕು.
2. ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನ ಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
3. ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನದ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.
4. ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.
5. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಇರುವ ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಪ್ರಯೋಜನಕ್ಕೆ ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.
6. ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು.
7. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು ತರಬೇಕು.
8. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕು.

ರಾಷ್ಟ್ರೀಯ ಪ್ರಚಾರಾಂದೋಲನ ಜುಲೈ 15-31, 1997

ಆರ್ಥಿಕ "ಸುಧಾರಣೆ"ಗಳ ವಿರುದ್ಧ ದೇಶವ್ಯಾಪಿ ಕಾರ್ಯಾಚರಣೆ

ಡಿಸೆಂಬರ್ 9ರಂದು ಸಂಸತ್ತಿನ ಮುಂದೆ ಬೃಹತ್ ಧರಣಿ

ರಾಷ್ಟ್ರೀಯ ವೇದಿಕೆ ಕರೆ

ಜೂನ್ 27ರಂದು ನವದೆಹಲಿಯಲ್ಲಿ ಸಭೆ ಸೇರಿದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಭಾರತ ಸರಕಾರದ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ದೇಶ ವ್ಯಾಪಿ ಕಾರ್ಯಾಚರಣೆಗಳನ್ನು ನಡೆಸಲು ನಿರ್ಧರಿಸಿದೆ. ಈ ಕಾರ್ಯಾಚರಣೆಗಳ ಕೊನೆ ಯಲ್ಲಿ ಡಿಸೆಂಬರ್ 9ರಂದು ರಾಜಧಾನಿ ದೆಹಲಿಯಲ್ಲಿ ಸಂಸತ್ತಿನ ಎದುರು ಒಂದು ಬೃಹತ್ ಧರಣಿ ನಡೆಸಲು ಅದು ನಿರ್ಧರಿಸಿದೆ.

ಎಐಟಿಯುಸಿಯ ಉಪಾಧ್ಯಕ್ಷ ಎ.ಬಿ.ಬರ್ಧನ್ ಅಧ್ಯಕ್ಷತೆ ವಹಿಸಿದ್ದ ಈ ಸಭೆ ಯಲ್ಲಿ ಪ್ರಧಾನ ಕೇಂದ್ರ ಕಾರ್ಮಿಕ ಸಂಘಟನೆಗಳು, ಕೈಗಾರಿಕಾ ಒಕ್ಕೂಟಗಳು, ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿ ಗಳು, ಯುವಜನರು ಹಾಗೂ ಮಹಿಳೆಯರ ಸಂಘಟನೆಗಳಲ್ಲದೆ ಪೇಟೆಂಟ್ ಕುರಿತು ಅಧ್ಯಯನ ನಡೆಸುತ್ತಿರುವ ರಾಷ್ಟ್ರೀಯ ಕಾರ್ಯಕಾರಿ ಗುಂಪು ಕೂಡಾ ಭಾಗವಹಿಸಿತ್ತು.

ಆರಂಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಯಮುನಾಪ್ರಸಾದ್ ಶಾಸ್ತ್ರಿ ಮತ್ತು ಪ್ರಸಿದ್ಧ ಮಾಧ್ಯಮ ವ್ಯಕ್ತಿಯಾಗಿದ್ದ ಸುರೇಂದ್ರಪ್ರತಾಪ್ ಸಿಂಗ್‌ರ ಆಕಸ್ಮಿಕ ನಿಧನಕ್ಕೆ ಸಭೆ ಸಂತಾಪ ಸೂಚಿಸಿತು.

ಉದಾರೀಕರಣ ಎಂದು ಹೇಳಿಕೊಂಡ ಆರ್ಥಿಕ ನೀತಿಗಳನ್ನು ಸಂಯುಕ್ತ ರಂಗ ಸರಕಾರವೂ ಭರದಿಂದ ಮುಂದುವರೆಸು ತ್ತಿರುವುದರಿಂದ ದೇಶದ ಆರ್ಥಿಕ ಮತ್ತು ಜನಸಾಮಾನ್ಯರ ಬದುಕಿನ ಮೇಲೆ ಆಗುತ್ತಿ ರುವ ತೀವ್ರ ದುಷ್ಪರಿಣಾಮಗಳ ಬಗ್ಗೆ ಸಭೆ ತೀವ್ರ ಆತಂಕ ವ್ಯಕ್ತಪಡಿಸಿತು.

ಬೆಲೆಏರಿಕೆ ನಿರಂತರವಾಗಿ ಸಾಗಿದೆ. ಪೆಟ್ರೋಲಿಯಂ ಬೆಲೆಯೇರಿಕೆಯೇನಾದರೂ ಮಾಡಿದರೆ ಅದು ಇನ್ನಷ್ಟು ಉಲ್ಬಣ ಗೊಳ್ಳುತ್ತದೆ. ಸರಕಾರ ಏನೇ ಹೇಳಿ ಕೊಂಡರೂ 1996-97ರಲ್ಲಿ ಕೈಗಾರಿಕಾ ಬೆಳವಣಿಗೆ ಇಳಿಮುಖವಾಗಿದೆ. ನಿರು ದ್ಯೋಗ, ಉದ್ಯೋಗ ನಷ್ಟ ಇನ್ನಷ್ಟು ವೇಗ ವಾಗಿ ಹೆಚ್ಚುತ್ತಿವೆ. ಸಾರ್ವಜನಿಕ ವಲಯದ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನ ಗೊಳಿಸುವುದಾಗಿ "ಸಮಾನ ಕನಿಷ್ಠ ಕಾರ್ಯಕ್ರಮ"ದಲ್ಲಿ ಹೇಳಿದರೂ ಅವುಗಳನ್ನು ಮುಚ್ಚುವ ಕ್ರಮಗಳನ್ನೇ ಕೈಗೊಳ್ಳಲಾಗುತ್ತಿದೆ, ಈ ಮೂಲಕ ಸಾವಿರಾರು ಕಾರ್ಮಿಕರನ್ನು ಹೊರಗೆಸೆಯಲಾಗುತ್ತಿದೆ.

ಕಳೆದ ಸಂಸತ್ ಅಧಿವೇಶನದಲ್ಲಿ ಮಂಡಿಸಿದ ಸಿಕಾ(SICA) ತಿದ್ದುಪಡಿ ಮಸೂದೆ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನಗೊಳಿಸುವ ಬದಲು ಅವನ್ನು ಬೇಗನೇ ಮುಗಿಸಿ ಬಿಡುವ ರೀತಿಯಲ್ಲೇ ರೂಪಿತವಾಗಿದೆ. ಎನ್.ಟಿ.ಸಿ., ರಸಗೊಬ್ಬರ ಇತ್ಯಾದಿ ವಲಯಗಳಲ್ಲಿ ಸರಕಾರ ಈ ಹಿಂದೆ ಸಿದ್ಧಪಡಿಸಿದ ಪುನರುಜ್ಜೀವನ ಕ್ರಮಗಳಿಂದ ಹಿಂದೇಟು ಹಾಕುತ್ತಿದೆ.

ಕಾರ್ಮಿಕ ಸಂಘಗಳಿಗೆ ಗುಪ್ತ ಮತದಾನ ದ ಮೂಲಕ ಮಾನ್ಯತೆ ಕುರಿತಾದ ಮಸೂದೆ ಯನ್ನು ಸಂಯುಕ್ತ ರಂಗ ಸರಕಾರ ಮಂಡಿಸು ವಲ್ಲಿ ವಿಫಲವಾಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಸಭೆ ಮಹಿಳೆಯರಿಗೆ 33% ಮೀಸಲಾತಿಯ ಮಸೂದೆ ಕೂಡಾ ಆಳುವ ಪಕ್ಷಗಳ ಕೆಲವು ಸದಸ್ಯರೂ ಸೇರಿದಂತೆ ಕೆಲವು ಪಕ್ಷಗಳಿಂದಾಗಿ ಇನ್ನೂ ಪಾಸಾಗಿಲ್ಲ ಎಂದು ಖೇದ ವ್ಯಕ್ತಪಡಿಸುತ್ತಿದೆ.

ಇಡೀ ಕಾರ್ಮಿಕ ಆಂದೋಲನ ವಿರೋಧಿಸಿದರೂ, ಪ್ರತಿಭಟಿಸಿದರೂ ಸರಕಾರ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಯನ್ನು ಪಾಸು ಮಾಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ, ಬ್ಯಾಂಕಿಂಗ್ ವಲಯ, ವಿಮೆ, ವಿದ್ಯುತ್, ದೂರಸಂಪರ್ಕ ಇತ್ಯಾದಿ ಗಳ ಪ್ರಧಾನ ಭಾಗಗಳನ್ನು ಖಾಸಗೀಕರಿಸುವ ತನ್ನ ದುಷ್ಟ ತಂತ್ರವನ್ನು ಮುಂದುವರೆಸುತ್ತಿದೆ. ಪ್ರಧಾನವಲ್ಲದ, ಆಯಕಟ್ಟಿನದಲ್ಲದ ವಲಯ ಗಳಿಂದ ಸಾರ್ವಜನಿಕ ವಲಯವನ್ನು ಹಿಂತೆಗೆದುಕೊಂಡು 74% ಇಕ್ವಿಟಿಗಳನ್ನು ಖಾಸಗಿಯವರಿಗೆ ತೆರೆದುಕೊಡುವ ಒಂದು ದುಷ್ಟ ಸನ್ನಾಹ ನಡೆದಿದೆ. ಸರಕಾರ ಮತ್ತು ಸಾರ್ವಜನಿಕ ವಲಯಗಳ ಕಾಂಟ್ರಾಕ್ಟ್ ವ್ಯವಸ್ಥೆಯನ್ನು ತರುವ ಬಲವಾದ ಪ್ರಯತ್ನ ನಡೆದಿದೆ.

ಶಿಕ್ಷಣ, ಆರೋಗ್ಯ ಸೇವೆಗಳ ಖಾಸಗೀ ಕರಣ, ವಾಣಿಜ್ಯೀಕರಣದತ್ತ ಸರಕಾರದ ಪ್ರಯತ್ನಗಳೂ ಅಷ್ಟೇ ಆತಂಕಕಾರಿ ಎಂದು ಸಭೆ ಅಭಿಪ್ರಾಯಪಟ್ಟಿತು. ಇದರಿಂದಾಗಿ ಆರೋಗ್ಯ, ಶಿಕ್ಷಣ ಇತ್ಯಾದಿಗಳೆಲ್ಲಾ ದೇಶದ ಬಡಜನರ ಕೈಗೆಟುಕದಂತಾಗುತ್ತದೆ.

ಕಾರ್ಮಿಕ ವರ್ಗ, ರೈತಾಪಿ ವರ್ಗಗಳು, ಕೃಷಿ ಕೂಲಿಕಾರರು ಮತ್ತು ಜನಸಾಮಾನ್ಯರಿಗೆ ಪ್ರಯೋಜನ ತರುವ ಸಕಾರಾತ್ಮಕ ಕ್ರಮ ಗಳೊಂದನ್ನು ಕೈಗೊಳ್ಳದ ಸರಕಾರ ಗುತ್ತೇದಾರಿ ಬಂಡವಾಳಶಾಹಿ ಗುಂಪುಗಳು, ವಿದೇಶೀ ಬಂಡವಾಳಿಗರ ಇಚ್ಛೆ ಪೂರೈಸಲು ತುದಿಗಾಲ ಮೇಲೆ ನಿಂತಿದೆ.

ಐದನೇ ವೇತನ ಆಯೋಗದ ಪ್ರತಿಗಾಮಿ ಶಿಫಾರಸುಗಳನ್ನು ಸ್ವೀಕರಿಸ ಬಾರದು ಹಾಗೂ ಕೇಂದ್ರ ಸರಕಾರದ ನೌಕರರ ಸಂಘಗಳು/ ಒಕ್ಕೂಟಗಳೊಂದಿಗೆ ಸಮಾಲೋಚಿಸಿ ವೇತನ ಪರಿಷ್ಕರಣೆಯನ್ನು ಅಂತಿಮಗೊಳಿಸಬೇಕು ಎಂದೂ ರಾಷ್ಟ್ರೀಯ ವೇದಿಕೆ ಸರಕಾರವನ್ನು ಆಗ್ರಹಪಡಿಸಿದೆ.

ಮುಂದಿನ ಸಂಸತ್ ಅಧಿವೇಶನದಲ್ಲಿ ಕೃಷಿ ಕಾರ್ಮಿಕರ ಮಸೂದೆಯನ್ನು ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳ ಮಾನ್ಯತೆಯ ಮಸೂದೆಯನ್ನು ಮಂಡಿಸಿ ಪಾಸು ಮಾಡಬೇಕು, ಮಹಿಳೆಯರಿಗೆ ಮೀಸಲಾತಿಯ ಮಸೂದೆಯನ್ನು ಇನ್ನಷ್ಟು ವಿಳಂಬ ಮಾಡದೆ ಅಂಗೀಕರಿಸಬೇಕು ಎಂದೂ ರಾಷ್ಟ್ರೀಯ ವೇದಿಕೆ ಆಗ್ರಹ ಪಡಿಸಿದೆ. ಇಲ್ಲವಾದರೆ ಸರಕಾರ ದೇಶಾ ದ್ಯಂತ ತೀವ್ರ ಅಸಂತೃಪ್ತಿಯನ್ನು ಎದುರಿಸಬೇಕಾಗುತ್ತದೆ ಎಂದು ಅದು ಎಚ್ಚರಿಸಿದೆ.

ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು, ಗ್ರಾಮೀಣ ಪ್ರದೇಶಗಳಲ್ಲೂ ಸೇರಿದಂತೆ ಬ್ಯಾಂಕಿಂಗ್ ವಲಯದ ಖಾಸಗೀಕರಣ ಮಾಡುವ ನಿರ್ಧಾರವನ್ನು ಬದಲಿಸಬೇಕು ಎಂದೂ ರಾಷ್ಟ್ರೀಯ ವೇದಿಕೆ ಸರಕಾರವನ್ನು ಒತ್ತಾಯಿಸಿದೆ. ಅಂಗನವಾಡಿ ಕಾರ್ಯ ಕರ್ತರು ಮತ್ತು ಸಹಾಯಕರಿಗೆ ನೀಡಿದ ವಚನವನ್ನು ಈಡೇರಿಸುವಲ್ಲಿನ ವಿಫಲತೆ ಯನ್ನು ಖಂಡಿಸಿದ ಅದು ತಕ್ಷಣವೇ ಅವರ ಗೌರವ ಧನದಲ್ಲಿ ಗೌರವಾರ್ಹ ಹೆಚ್ಚಳ ಮಾಡಬೇಕು ಎಂದು ಆಗ್ರಹಪಡಿಸಿದೆ.

ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ವರ್ಷದಲ್ಲಿ ಸಂವಿಧಾನದ ನಿರ್ದೇಶಕ ಸೂತ್ರಗಳಲ್ಲಿ ಹೇಳಿದ ಮೂಲಭೂತ ಧೋರಣಾ ಹೇಳಿಕೆಯನ್ನು ಎತ್ತಿ ಹಿಡಿಯುತ್ತೇ ವೆನ್ನುವ ಸರಕಾರ ಆ ಪ್ರಕಾರ ಕಡ್ಡಾಯ ಪುಕ್ಕಟೆ ಪ್ರಾಥಮಿಕ ಶಿಕ್ಷಣ ಒದಗಿಸುವ ಮಸೂದೆ ಯನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ಮಂಡಿಸಬೇಕು ಎಂದೂ ರಾಷ್ಟ್ರೀಯ ವೇದಿಕೆ ಒತ್ತಾಯಿಸಿದೆ.

ಈಗ ನಡೆಯುತ್ತಿರುವ "ಆರ್ಥಿಕ ಸುಧಾರಣೆ"ಗಳನ್ನು ವಿರೋಧಿಸಲು ಹಾಗೂ ಅವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಲು ರಾಷ್ಟ್ರೀಯ ವೇದಿಕೆ ಈ ಕೆಳಗಿನ ಕಾರ್ಯಕ್ರಮವನ್ನು ಅಂಗೀಕರಿಸಿತು.

1. **ಸೆಪ್ಟೆಂಬರ್ 1997ರೊಳಗೆ ಜಿಲ್ಲಾ/ ಪ್ರಾದೇಶಿಕ ಮಟ್ಟದ ಸಮಾವೇಶಗಳು, ರ್‍ಯಾಲಿಗಳು.**
2. **ಅಕ್ಟೋಬರ್/ನವಂಬರ್ 1997 ರೊಳಗೆ ರಾಜ್ಯಮಟ್ಟದ ಸಮಾವೇಶಗಳು ಮತ್ತು ರ್‍ಯಾಲಿಗಳು.**
3. **ಡಿಸೆಂಬರ್ 9, 1997ರಂದು ಸಂಸತ್ತಿನೆದುರು ದಿನವಿಡೀ ಬೃಹತ್ ಧರಣಿ.**

ಎಲ್ಲಾ ಸಾಮೂಹಿಕ ಸಂಘಟನೆಗಳ ಕೇಂದ್ರೀಯ ಮುಖಂಡತ್ವ ಜಿಲ್ಲಾ/ರಾಜ್ಯ ಮಟ್ಟದ ಹಾಗೂ ಡಿಸೆಂಬರ್ 9ರ ಧರಣಿ ಉಸ್ತುವಾರಿ ನಡೆಸಬೇಕು ಹಾಗೂ ಭಾಗವಹಿ ಸಬೇಕು ಎಂದೂ ಸಭೆ ನಿರ್ಧರಿಸಿತು.

ಆಗಸ್ಟ್ 29ರಂದು ಒಂದು ಸಭೆ ನಡೆಸಿ ಸ್ವಾತಂತ್ರ್ಯ ಹೋರಾಟದಲ್ಲಿ ದುಡಿಯುವ ಜನಗಳ ಪಾತ್ರವನ್ನು ಭಾರತದ ಸ್ವಾತಂತ್ರ್ಯದ ಮಹತ್ವವನ್ನು ಹಾಗೂ ದೇಶದ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದಲ್ಲಿ ಅದರ ಸಾರ್ವಭೌಮತೆಯನ್ನು ರಕ್ಷಿಸುವ ಅಗತ್ಯವನ್ನು ವಿವರಿಸಲು ಕೂಡಾ ರಾಷ್ಟ್ರೀಯ ವೇದಿಕೆ ನಿರ್ಧರಿಸಿತು.

ಮೇಲೆ ಹೇಳಿದ ಕಾರ್ಯಕ್ರಮಗಳ ನಂತರದ ಘಟ್ಟದಲ್ಲಿ ದೇಶದ ಸಾರ್ವಭೌಮ ತೆಯ ರಕ್ಷಣೆಗೆ ಒಂದು ದಿನದ ದೇಶವ್ಯಾಪಿ ಮುಷ್ಕರ ನಡೆಸಲು ಸಿದ್ಧರಾಗಬೇಕೆಂದೂ ಎಲ್ಲಾ ಸಾಮೂಹಿಕ ಸಂಘಟನೆಗಳಿಗೆ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಕರೆ ನೀಡಿದೆ.

ಇದು ಸ್ವಚ್ಛ ಆಡಳಿತ ನೀಡುವ ಪರಿಯಲ್ಲ : ಸಿಐಟಿಯು ಖಂಡನೆ

ಸರ್ಕಾರಿ ಕ್ವಾರ್ಟರ್ಸ್‌ಗಳನ್ನು ಸರದಿ ಪ್ರಕಾರ ನೀಡದೆ ಸರದಿ ತಪ್ಪಿಸಿ ನಿಯಮ ಬಾಹಿರವಾಗಿ ನೀಡಿದ್ದನ್ನು ಕಾನೂನುಬದ್ಧ ಗೊಳಿಸುವ, ರಾಷ್ಟ್ರಪತಿಗಳ ಸುಗ್ರೀವಾಜ್ಞೆ ಯನ್ನು ಸಿಐಟಿಯು ಖಂಡಿಸಿದೆ. ಅದನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹ ಪಡಿಸಿದೆ. ಈ ರೀತಿ ಸರದಿ ತಪ್ಪಿಸಿ ನೀಡುವುದನ್ನು ವಿರೋಧಿಸಿ ಸುಪ್ರಿಂ ಕೋರ್ಟ್ ಆದೇಶ ನೀಡಿತ್ತು. ಹಾಗಿದ್ದರೂ ಈ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ.

'ನರಸಿಂಹರಾವ್ ಆಳ್ವಿಕೆಯ ಭ್ರಷ್ಟ ಆಡಳಿತವನ್ನು ಬಯಲಿಗೆಳೆದಿರುವ ಹಲವು ಹಗರಣಗಳಲ್ಲಿ ಒಂದಾದ ವಸತಿ ಹಗರಣ ಅತ್ಯಂತ ಸಂವೇದನಾ ಶೀಲವಾಗಿದ್ದು, ಸಂಬಂಧಪಟ್ಟ ಸರಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಯಾವ ಪ್ರಪಾತಕ್ಕೆ ಇಳಿದಿತ್ತು ಎಂಬುದನ್ನು ಅದಕ್ಕೆ ಮಂತ್ರಿಗಳ, ಅಧಿಕಾರಿ ಗಳ ನೇರ ಪೋಷಣೆಯನ್ನು ಬಯಲಿಗೆಳೆ ಯುವಂತದ್ದು. ಸರ್ಕಾರಿ ಕ್ವಾರ್ಟರ್ಸ್‌ಗಳಿಗಾಗಿ ಸಾವಿರಾರು ಸರಕಾರಿ ನೌಕರರು ಕಾಯುತ್ತಿ ರುವಾಗ ಲಂಚ ತಿಂದು ಸರದಿ ಬಿಟ್ಟು ಕ್ವಾ ರ್ಟರ್ಸ್ ಪಡೆಯುವುದು ಸರ್ಕಾರಿ ಇಲಾಖೆ ಗಳಲ್ಲಿ ಒಂದು ಸಾಮಾನ್ಯ ಸಂಗತಿ ಯಾಗಿ ಬಿಟ್ಟಿದೆ. ಇದರಿಂದಾಗಿ ದೇಶದ ಅತ್ಯುನ್ನತ ನ್ಯಾಯಾಲಯ ಇದರಲ್ಲಿ ಮಧ್ಯ ಪ್ರವೇಶಿಸಿ ದ್ದನ್ನು ಜನ ಹಾರ್ದಿಕವಾಗಿ ಸ್ವಾಗತಿ ಸಿದ್ದರು" ಎಂದು ಸಿಐಟಿಯು ಹೇಳಿಕೆ ನೆನಪಿಸಿದೆ.

"ತನ್ನ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಒಂದು ಸ್ವಚ್ಛ ಸರಕಾರ ನೀಡುವ ವಚನ ನೀಡಿದ ಸಂಯುಕ್ತ ರಂಗ ಸರ್ಕಾರ ವಸತಿ ನೀಡಿಕೆಯಲ್ಲಿ ತನ್ನ ಹಿಂದಿನ ಸರ್ಕಾರ ಎಸಗಿದ ಅಸ್ವಚ್ಛ ಹಾಗೂ ನಿಯಮ ಬಾಹಿರ ಕೃತ್ಯವನ್ನು ಸುಗ್ರೀವಾಜ್ಞೆಯ ಮೂಲಕ ಕಾನೂನು ಬದ್ಧಗೊಳಿಸಲು ಅದು ಕೂಡಾ ದೇಶದ ಸರ್ವೋಚ್ಚ ನ್ಯಾಯಾಲಯ ಅದನ್ನೆಲ್ಲಾ ಸರಿಪಡಿಸಬೇಕು ಎಂದು ನೀಡಿದ ಆದೇಶವನ್ನು ವಿಫಲಗೊಳಿಸಲಿಕ್ಕಾಗಿ ಮಾಡಿ ರುವುದು ಆಘಾತಕರ ಸಂಗತಿ. ಸಂಬಂಧಪಟ್ಟ ಮಂತ್ರಿ ಹಾಗೂ ಅಧಿಕಾರಶಾಹಿಗಳ ಮೋಸದ ಪಾತ್ರದ ಬಗ್ಗೆ ಹಾಗೂ ಆ ಇಲಾಖೆಯ ಕೆಲಸದ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಕಟು ಟೀಕೆ ಮಾಡಿರುವ ಹಿನ್ನೆಲೆಯಲ್ಲಿ ನಿಯಮ ಬಾಹಿರ ಕೃತ್ಯದ ಪ್ರಮುಖ ಭಾಗವನ್ನು ಎತ್ತಿಹಿಡಿಯುವ ಸರಕಾರದ ಇತ್ತೀಚಿನ ಕ್ರಮ ನಿಜಕ್ಕೂ ದುರ ದೃಷ್ಟಕರ ಹಾಗೂ ಖಂಡನೀಯ" ಎಂದು ಹೇಳಿರುವ ಸಿಐಟಿಯು ಎಲ್ಲೆಡೆ ಯಿಂದ ಇದಕ್ಕೆ ಬಂದಿರುವ ಪ್ರತಿಭಟನೆಗಳನ್ನು ಗಮನಿಸಿ ಸೂಕ್ತತೆ ಮತ್ತು ನ್ಯಾಯ ಸಮ್ಮತ ತೆಯ ಭಾವನೆಯನ್ನು ಎತ್ತಿ ಹಿಡಿಯಲು ಹಾಗೂ ಒಂದು ಸ್ವಚ್ಛ ಆಡಳಿತ ನೀಡುವ ತನ್ನ ವಚನವನ್ನು ಈಡೇರಿಸಲು ಈ ಸುಗ್ರೀ ವಾಜ್ಞೆಯನ್ನು ಹಿಂತೆಗೆದುಕೊಳ್ಳ ಬೇಕೆಂದು ಆಗ್ರಹಪಡಿಸಿದೆ.

ಐದನೇ ವೇತನ ಆಯೋಗದ ಮೇಲೆ ಶೀಘ್ರ ನಿರ್ಣಯ: ಸಿಪಿಐ(ಎಂ) ಆಗ್ರಹ

ಐದನೇ ವೇತನ ಆಯೋಗದ ವರದಿ ಕೇಂದ್ರ ಸರಕಾರದ ಪರಿಶೀಲನೆಯಲ್ಲಿದೆ. ಈ ಶಿಫಾರಸುಗಳ ಒಟ್ಟಾರೆ ಒತ್ತಿನ ಬಗ್ಗೆ ಸಿಪಿಐ(ಎಂ) ತನ್ನ ಅಭಿಪ್ರಾಯವನ್ನು ಈಗಾಗಲೇ ಹೇಳಿದೆ.

ಸರಕಾರ ಶಿಫಾರಸುಗಳನ್ನು ಅಂತಿಮ ಗೊಳಿಸಿದ ನಂತರ ಅದನ್ನು ಜಾರಿಗೆ ತರಲಾಗುವುದೆಂದು ನೌಕರರು ಕಾತುರರಾಗಿದ್ದಾರೆ, ಆದ್ದರಿಂದ ಜೆ.ಸಿ.ಎಂ. (ಜಂಟಿ ಸಲಹಾ ಮಂಡಳಿ)ನಲ್ಲಿ ಪ್ರಾತಿನಿಧ್ಯ ಹೊಂದಿರುವ ನೌಕರರ ಒಕ್ಕೂಟ ಗಳೊಂದಿಗೆ ಸರಕಾರ ಮಾತುಕತೆಗಳನ್ನು ಬೇಗನೇ ಪೂರ್ಣಗೊಳಿಸುವುದು ಅಗತ್ಯ, ಈ ಮೂಲಕ ಹೀಗೆ ವಚನ ನೀಡಿದಂತೆ ನೌಕರರು ವೇತನ ಆಯೋಗದ ವರದಿ ಹೇಳುವ ಸೌಲಭ್ಯಗಳನ್ನು ಇನ್ನಷ್ಟು ವಿಳಂಬವಿಲ್ಲದೆ ಪಡೆಯುವಂತಾಗ ಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹ ಪಡಿಸಿದೆ.

ಖಾಸಗಿ ಬಂಡವಾಳಶಾಹಿಗಳಿಗೆ ಮಾರಿಕೊಳ್ಳುವ ಕರಡು ನಾಗರಿಕ ವಿಮಾನಯಾನ ಧೋರಣೆ: ಸಿಪಿಐ(ಎಂ) ಖಂಡನೆ

ಸಂಯುಕ್ತ ರಂಗ ಸರಕಾರ ಮುಂದಿಟ್ಟಿರುವ ಕರಡು ನಾಗರಿಕ ವಿಮಾನಯಾನ ಧೋರಣೆ ಒಂದು ಪ್ರತಿಗಾಮಿ ಕ್ರಮ, ಇದು ದೇಶದ ಹಿತಾಸಕ್ತಿಗಳಿಗೆ ಮಾರಕ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ನಾಗರಿಕ ವಿಮಾನಯಾನ ವಲಯವನ್ನು ಮಾರುಕಟ್ಟೆ ಶಕ್ತಿಗಳಿಗೆ ತೆರೆದುಕೊಡುವುದು ಈ ಧೋರಣೆಯ ಮುಖ್ಯ ಒತ್ತು. ಸಾರ್ವಜನಿಕ ಮತ್ತು ಖಾಸಗಿ ವಲಯದ ಪಾಲು 50% ಇರಬೇಕು ಎಂದು ಈ ನೀತಿ ನಿರ್ದಿಷ್ಟಪಡಿಸಿದೆ. ಖಾಸಗಿ ವಿಮಾನ ಕಂಪನಿಗಳು ಹಲವು ಮುಚ್ಚಿ ಕೊಂಡು ಹೋದ ಇತ್ತೀಚಿನ ಶೋಚನೀಯ ಅನುಭವ ಕಂಡು ಕೂಡಾ ನಾಗರಿಕ ವಿಮಾನ ಯಾನ ಇಲಾಖೆ ಅಂತಹ ಪ್ರಯತ್ನ ನಡೆಸಿದೆ. ಖಾಸಗಿ ವಲಯಕ್ಕೆ ಇನ್ನಷ್ಟು ರಿಯಾಯ್ತಿಗಳನ್ನು ಸೂಚಿಸಲು ಹಿಂಜರಿದಿಲ್ಲ.

ದೇವೇಗೌಡರ ಸರಕಾರದ ಕಾಲದಲ್ಲಿ ವಿದೇಶಿ ಏರ್‌ಲೈನ್ಸ್‌ಗಳ ಪ್ರವೇಶಕ್ಕೆ ಬಲವಾದ ವಿರೋಧ ವ್ಯಕ್ತಪಟ್ಟಿದ್ದರೂ, ಈಗಿನ ಕರಡು ಧೋರಣೆ ವಿದೇಶಿ ಏರ್‌ಲೈನ್ಸ್‌ಗಳು 40% ಇಕ್ವಿಟಿ ಹೊಂದಲು ಅವಕಾಶ ನೀಡುತ್ತದೆ. ಕೆಲವೇ ತಿಂಗಳ ಹಿಂದೆ ದೇವೇಗೌಡರ ಸರಕಾರ ದಲ್ಲಿ ಮಂತ್ರಿಮಂಡಲ ಅಂಗೀಕರಿಸಿದ ಧೋರ ಣೆಯನ್ನು ತಿರುವು ಮುರುವು ಗೊಳಿಸುವ ಕ್ರಮ ಇದು ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ. ವಿಮಾನ ನಿಲ್ದಾಣಗಳ ರಚನೆ ಹಾಗೂ ಸೌಲಭ್ಯಗಳಲ್ಲಿ ವಿದೇಶಿ ಹಣಹೂಡಿಕೆಗೆ ಅವಕಾಶ ನೀಡಲಾಗುತ್ತಿದೆ.

ನಾಗರಿಕ ವಿಮಾನ ಯಾನ ಇಲಾಖೆ ನಾಗರಿಕ ವಿಮಾನ ಯಾನ ಕುರಿತಂತೆ ಮಾರುಕಟ್ಟೆ ನೀತಿಯನ್ನು ಪ್ರತಿಪಾದಿಸುತ್ತಿದೆ. ಈಶಾನ್ಯ ಭಾರತ ಮತ್ತು ಇತರ ಈ ರೀತಿಯ ದೂರದ ರೂಟ್‌ಗಳಲ್ಲಿ ಕಡಿಮೆ ದರಗಳಿಂದಾಗಿ ಅದು ವಾಣಿಜ್ಯ ದೃಷ್ಟಿಯಿಂದ ಆಕರ್ಷಕವಾಗಿಲ್ಲ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ನಿಯಮವನ್ನು ಸಡಿಲಿಸಿ, ಖಾಸಗಿ ಏರ್‌ಲೈನ್ಸ್ ಗಳಿಗೆ ಪ್ರಯೋಜನವಾಗುವ ರೀತಿಯಲ್ಲಿ ದರ ಏರಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದು ಈಶಾನ್ಯ ಭಾರತ ಮತ್ತು ಇತರ ದೂರದ ಪ್ರದೇಶಗಳ ಜನಗಳ ಮೇಲೆ ದುಷ್ಪರಿಣಾಮ ಬೀರಲಿದೆ.

ಇವು ಮಂದದೃಷ್ಟಿಯ, ದುರುದ್ದೇಶಪೂರಿತ ಪ್ರಸ್ತಾವಗಳು ಎಂದು ಬಲವಾದ ವಿರೋಧವನ್ನು ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಕರಡು ಧೋರಣೆಯನ್ನು ಅಂಗೀಕರಿಸಿದರೆ ದೊಡ್ಡ ಬಂಡವಾಳಿಗರ ಲಾಭಿಗೆ ಈ ವಲಯವನ್ನು ಸಂಪೂರ್ಣವಾಗಿ ಮಾರಿಕೊಂಡಂತಾಗುತ್ತದೆ ಎಂದು ಹೇಳಿದೆ. ಗುಜ್ರಾಲ್ ಸರಕಾರ ಇಂತಹ ಒಂದು ಮಾರಕ ಪ್ರಸ್ತಾವವನ್ನು ಮುಂದುವರಿಸದೆ ಒಂದು ಅಂತಿಮ ನಿರ್ಧಾರಕ್ಕೆ ಬರುವ ಮೊದಲು ಸಂಸತ್ತಿನಲ್ಲಿ ಮತ್ತುಸಂಬಂಧಪಟ್ಟ ಎಲ್ಲಾ ವೇದಿಕೆಗಳಲ್ಲಿ ಒಂದು ಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಡಬೇಕಾದ್ದು ಅಗತ್ಯ ಎಂದು ಸಿಪಿಐ(ಎಂ) ಹೇಳಿದೆ.

ಕೃಷಿ ಕಾರ್ಮಿಕರಿಗೆ ಸಮಗ್ರ ಕೇಂದ್ರೀಯ ಶಾಸನದಲ್ಲಿ ಸಲ್ಲದ ವಿಳಂಬ

ಸಾಮೂಹಿಕ ನೇರ ಕಾರ್ಯಾಚರಣೆ ನಡೆಸುವುದಾಗಿ ಕೃಷಿ ಕಾರ್ಮಿಕರ ಎಚ್ಚರಿಕೆ

ಜೂನ್ 21 ಹಾಗೂ 22ರಂದು ಸಭೆ ಸೇರಿದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿ ಸಂಯುಕ್ತ ರಂಗ ಸರಕಾರ ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಶಾಸನವನ್ನು ತರಬೇಕೆಂಬ ದೀರ್ಘ ಕಾಲದ ಬೇಡಿಕೆಯನ್ನು ಮೂಲೆಗೊತ್ತಲು ಪ್ರಯತ್ನಿಸುತ್ತಿರುವ ಬಗೆಯನ್ನು ಬಲವಾಗಿ ಖಂಡಿಸಿ ಎಲ್ಲಾ ರಾಜ್ಯ ಘಟಕಗಳು ತಮ್ಮ ರಾಜ್ಯಗಳ ಕಾರ್ಮಿಕ ಮಂತ್ರಿಗಳನ್ನು ಭೇಟಿ ಮಾಡಿ ಈ ಬೇಡಿಕೆಯ ಈಡೇರಿಕೆಗೆ ಒತ್ತಾಯಿಸಬೇಕು ಹಾಗೂ ಈ ಮಸೂದೆಯನ್ನು ತಕ್ಷಣ ಅಂಗೀಕರಿಸುವಂತೆ ಮಾಡಲು ಒಂದು ಸಾಮೂಹಿಕ ಆಂದೋಲನವನ್ನು ಹರಿಯಬಿಡಬೇಕು ಎಂದು ಕರೆ ನೀಡಿದೆ.

ತನ್ನ 'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ ಸಂಯುಕ್ತ ರಂಗ ಈಗಾಗಲೇ ಈ ಬಗ್ಗೆ ವಚನ ನೀಡಿದೆ. ಈ ವಿಷಯದಲ್ಲಿ ಮತ್ತೆ ರಾಜ್ಯಗಳನ್ನು ಕೇಳುವ ಅಗತ್ಯವೇ ಇಲ್ಲ. "ಈ ಕ್ರಮವನ್ನು ವಿರೋಧಿಸುವ ರಾಜ್ಯಗಳು ಅವನ್ನು ಬಹಿರಂಗವಾಗಿಯೇ ಮಾಡಿ ಜನಗಳೆದುರು ತಮ್ಮ ನಿಜ ಸ್ವರೂಪವನ್ನು ಬಯಲು ಮಾಡಿಕೊಳ್ಳಲಿ. ಪ್ರಧಾನ ಮಂತ್ರಿಗಳು ತಮ್ಮ ಸಹ ನಾಗರೀಕರನ್ನು ಗುಲಾಮರಾಗಿ ಕಾಣುವ ಭಾರತೀಯರ ದುಷ್ಟ ವಿಭಾಗಗಳನ್ನೇಕೆ ರಕ್ಷಿಸ ಬಯಸುತ್ತಾರೆ?" ಎಂದು ಪ್ರಶ್ನಿಸಿರುವ ಸಂಘ ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಸಾರಿದೆ. ಸಂಸತ್ತಿನಲ್ಲಿ ಈ ಮಸೂದೆಯನ್ನು ಮಂಡಿಸದಿದ್ದರೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಒಂದು ಸಾಮೂಹಿಕ ಆಂದೋಲನವನ್ನು ಹರಿಯಬಿಡುತ್ತದೆ ಎಂದು ಅದು ಎಚ್ಚರಿಸಿದೆ.

ಬಡತನ ರೇಖೆಯ ಕೆಳಗಿರುವವರಿಗೆ ಆರಂಭಿಸಿದ ವಿಶೇಷ ಪಡಿತರ ಯೋಜನೆಯನ್ನು ಜ್ಯಾರಿಗೆ ತರದ ಬಿಜೆಪಿ ನೇತೃತ್ವದ ಉತ್ತರ ಭಾರತದ ರಾಜ್ಯ ಸರಕಾರಗಳ ವಿರುದ್ಧ ಹಾಗೂ "ಹಿಂದಿನ ಕಾಂಗ್ರೆಸ್(ಐ) ಸರಕಾರ ಅಂಗೀಕರಿಸಿದ, ಈಗಿನ ಹಣಕಾಸು ಮಂತ್ರಿ ಪಿ.ಚಿದಂಬರಂ ಮುಂದುವರೆಸುತ್ತಿರುವ ನೀತಿಗಳಿಂದಾಗಿ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಬೆಲೆಯೇರಿಕೆಯ ವಿರುದ್ಧ"ವೂ ಒಂದು ಸಾಮೂಹಿಕ ಆಂದೋಲನವನ್ನು ನಡೆಸಲಾಗುವುದು ಎಂದು ಸಂಘ ಪ್ರಕಟಿಸಿದೆ.

"ಜನಗಳಿಗೆ ಮಹತ್ವಪೂರ್ವಕವಾದ ಪ್ರಶ್ನೆಗಳಲ್ಲಿ ಸಂಯುಕ್ತ ರಂಗದ ಸರಕಾರ ವಿಳಂಬ ನಿಲುವಿನಿಂದಾಗಿ ನಾವು ನೇರ ಕಾರ್ಯಾಚರಣೆಯನ್ನು ಪ್ರಕಟಿಸಬೇಕಾಗಿ ಬಂದಿದೆ. ನಾವು ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಸಂಯುಕ್ತ ರಂಗ ಸರಕಾರಕ್ಕೆ ದೃಢ ಬೆಂಬಲ ನೀಡುತ್ತೇವೆ, ಆದರೆ ಈ ಬೆಂಬಲವನ್ನು ಜನಗಳನ್ನು ದಮನ ಮಾಡಲು, ಲೂಟಿ ಮಾಡಲು ಬಳಸಿಕೊಳ್ಳಲು ಬಿಡುವುದಿಲ್ಲ" ಎಂದು ಎಐಎಡಬ್ಲ್ಯುಯು ಹೇಳಿಕೆ ಸಾರಿದೆ.

(ಐಎನ್‌ಎನ್)

ಗ್ರಾಮ ಪಂಚಾಯತ್ ನೌಕರರ ಸೇವಾ ಸೌಲಭ್ಯಗಳ ಅಧ್ಯಯನಕ್ಕಾಗಿ ಪ.ಬಂಗಾಳಕ್ಕೆ ನಿಯೋಗದ ಭೇಟಿ

ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಉಪಕಾರ್ಯದರ್ಶಿ ಬಸಪ್ಪ ಮತ್ತು ಸಿಪಿಐ(ಎಂ) ನ ವಿಧಾನಸಭಾ ಸದಸ್ಯರಾದ ಶ್ರೀರಾಮರೆಡ್ಡಿ ಇರುವ ಒಂದು ನಿಯೋಗವು ಜುಲೈ 5 ರಿಂದ 12 ರವರೆಗೆ ಪ.ಬಂಗಾಳಕ್ಕೆ ಭೇಟಿ ನೀಡಿ, ಅಲ್ಲಿನ ಗ್ರಾಮ ಪಂಚಾಯತ್ ನೌಕರರ ಸೇವಾ ಸೌಲಭ್ಯಗಳ ಕುರಿತು ಅಧ್ಯಯನ ನಡೆಸಿಕೊಂಡು ಬರಲಿದೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾಧ್ಯಕ್ಷ ಸಿ.ಆರ್.ಭಟ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇತ್ತೀಚೆಗೆ ನೌಕರರ ಸಂಘದ ಗೌರವಾಧ್ಯಕ್ಷ ಎಸ್.ಕೆ.ಉಪಾಧ್ಯಾಯ, ಅಧ್ಯಕ್ಷ ಮಾರುತಿ ಮಾನ್‌ಪಡೆ ಮತ್ತು ಪ್ರಧಾನ ಕಾರ್ಯದರ್ಶಿ ಪಿ.ಪಿ.ಕುಲಕರ್ಣಿ ಬೆಂಗಳೂರಿನಲ್ಲಿ ಹಲವು ದಿನಗಳ ಕಾಲ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದೊಂದಿಗೆ ಸತತ ಸಂಪರ್ಕ ಬೆಳೆಸಿ, ಸಂಬಂಧಪಟ್ಟ ಸಚಿವರಾದ ಎಂ.ಪಿ.ಪ್ರಕಾಶ್ ಅವರು ಈ ಕುರಿತು ಹಿಂದೆ ನೀಡಿದ ಆಶ್ವಾಸನೆಯನ್ನು ನೆನಪಿಸಿ, ಮೊದಲ ಹೆಜ್ಜೆಯಾಗಿ ಈ ದ್ವಿಸದಸ್ಯರ ನಿಯೋಗ ಪ.ಬಂಗಾಳಕ್ಕೆ ಹೋಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಡಳಿತದಲ್ಲಿ ಸಿಪಿಐ(ಎಂ) ನೇತೃತ್ವದ ಪ.ಬಂಗಾಳದ ಎಡರಂಗ ಸರಕಾರವು ಕಳೆದ 20 ವರ್ಷಗಳ ದೀರ್ಘ ಕಾಲದಲ್ಲಿ ದೇಶದಲ್ಲಿಯೇ ಒಂದು ಯಶಸ್ವಿ ಮಾದರಿ ದಾಖಲಿಸಿದೆ. ಇಲ್ಲಿ ರಾಜ್ಯದ ಶೇ 50 ರಷ್ಟು ಸಂಪನ್ಮೂಲಗಳನ್ನು ಪಂಚಾಯತ್‌ರಾಜ್ ಮೂಲಕವೇ ವಿನಿಯೋಗಿಸಲಾಗುತ್ತಿದೆ. ಪಂಚಾಯತ್ ನೌಕರರಿಗೆ ಸರಕಾರಿ ಹಾಗೂ ಪುರಸಭಾ ನೌಕರರಿಗೆ ಸರಿಸಮಾನವಾದ ವೇತನ ಶ್ರೇಣಿ ಮತ್ತಿತರ ಸೇವಾ ಸೌಲಭ್ಯಗಳಿವೆ.

ಕರ್ನಾಟಕದಲ್ಲಿ 5700 ಗ್ರಾ. ಪಂ:ಗಳಲ್ಲಿ 30000 ನೌಕರರು ಹತ್ತಾರು ವರ್ಷಗಳಿಂದ ಜೀತದಾಳುಗಳಂತೆ ಯಾವ ಸೇವಾ ಸೌಲಭ್ಯಗಳಿಲ್ಲದೆ ದುಡಿಯುತ್ತಿದ್ದಾರೆ. ಸರಕಾರಿ/ಪುರಸಭಾ ನೌಕರರಿಗೆ ಸರಿಸಮಾನವಾಗಿ ವೇತನ ಶ್ರೇಣಿ ಮತ್ತು ಇತರ ಸೇವಾ ಸೌಲಭ್ಯಗಳಿಗಾಗಿ ಈ ವರ್ಷ ಫೆಬ್ರವರಿ ಕೊನೆಯಲ್ಲಿ ಮಂತ್ರಿಗಳ ಮನೆಗಳ ಮುಂದೆ ಬೆಂಗಳೂರಿನಲ್ಲಿ ಮೂರು ದಿನಗಳ ಧರಣಿ ಸತ್ಯಾಗ್ರಹ ನಡೆಸಿದರು. ನಂತರ ಮೇ 22 ರಂದು ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಿದರು. ಪ.ಬಂಗಾಳಕ್ಕೆ ಹೋಗಿ ಬರಲಿರುವ ನಿಯೋಗದ ವರದಿಯ ಆಧಾರದಲ್ಲಿಯಾದರೂ ಸಚಿವರ ಹಿಂದಿನ ಆಶ್ವಾಸನೆಗಳಂತೆ, ಕರ್ನಾಟಕ ಗ್ರಾಮ ಪಂಚಾಯತ್ ನೌಕರರಿಗೆ ಕೆಲಸದ ಖಾಯಮಾತಿ, ವೇತನಶ್ರೇಣಿ, ಭಡ್ತಿಗೆ ಅವಕಾಶ, ಇತರ ಸೌಲಭ್ಯಗಳ ಕುರಿತು ಸಮಾನ ಸೇವಾ ನಿಯಮಗಳನ್ನು ರೂಪಿಸಿ ಜಾರಿಗೊಳಿಸುವ ನಿರೀಕ್ಷೆ ಇದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಚಾರಾಂದೋಲನಕ್ಕೆ ಸಿದ್ಧತೆ

ಜುಲೈ 15 ರಿಂದ ನಡೆಯಲಿರುವ ರಾಷ್ಟ್ರೀಯ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ಸಿಪಿಐ(ಎಂ) ಜಿಲ್ಲಾ ಸಮಿತಿ ನಿರ್ಧರಿಸಿದೆ. ಜೂನ್27 ಮತ್ತು 28 ರಂದು ಶಿರ್ಸಿಯಲ್ಲಿ ನಡೆದ ಪಕ್ಷದ ಜಿಲ್ಲಾ ಸಮಿತಿಯು ಈ ಬಗ್ಗೆ ವಿವರವಾಗಿ ಚರ್ಚಿಸಿ ಜುಲೈ 15 ರಂದು ದಾಂಡೇಲಿಯಲ್ಲಿ ಚಳುವಳಿ ಕಾರ್ಯಕ್ರಮವನ್ನು ಉದ್ಘಾಟಿಸವುದೆಂದು ನಿರ್ಧರಿಸಿದೆ. ಪ್ರಚಾರ ಕಾರ್ಯಕ್ರಮದ ಅಂಗವಾಗಿ ದಾಂಡೇಲಿ ನಗರದ ವಿವಿಧ ವಾರ್ಡುಗಳಲ್ಲಿ ಅಲ್ಲದೆ ಶಿರ್ಸಿ, ಮುಂಡಗೋಡ, ಹೊನ್ನಾವರ, ಅಂಕೋಲ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಗ್ರಾಮ ಮಟ್ಟದ ಸಭೆಗಳನ್ನು ನಡೆಸಲು ನಿರ್ಧರಿಸಲಾಗಿದ್ದು ಪ್ರಚಾರದ ಅಂಗವಾಗಿ ಪಕ್ಷದ ಕಾರ್ಯಕರ್ತರು ಮನೆ ಮನೆಗಳಿಗೆ ತೆರಳಿ ಕರಪತ್ರಗಳನ್ನು ಹಂಚಲಿದ್ದಾರೆ.

ಚಳುವಳಿಯ ಕೊನೆಯಲ್ಲಿ ಅಂದರೆ 22.7.97 ರಂದು ಕಾರವಾರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಮತ ಪ್ರದರ್ಶನ ನಡೆಸಿ ಸಾರ್ವಜನಿಕ ಸಭೆಯನ್ನು ನಡೆಸಲು ನಿರ್ಧರಿಸಲಾಗಿದೆ. ಸಿಪಿಐ(ಎಂ)ನ ಜಿಲ್ಲಾ ಸಮಿತಿಯು ನೂತನ ಜಿಲ್ಲಾ ಕಾರ್ಯದರ್ಶಿ ಮಂಡಳಿಗೆ ಮೂವರನ್ನು ಆಯ್ಕೆ ಮಾಡಿತು. ಜಿಲ್ಲಾ ಕಾರ್ಯದರ್ಶಿ ಟಿ.ಎಸ್.ನಾಯ್ಕ, ಶಾಂತರಾಮ ನಾಯಕ್ ಮತ್ತು ಮಂಜುನಾಥ ಪುಲಕರ ಆಯ್ಕೆಗೊಂಡಿದ್ದಾರೆ.

ಕೇಂದ್ರ ಸರಕಾರದಿಂದ ಅಂಗನವಾಡಿ ನೌಕರರಿಗೆ ವಂಚನೆ:

ಅಂಗನವಾಡಿ ನೌಕರರ ಸಂಘಟದ ಖಂಡನೆ

ಕಳೆದ ನವಂಬರ್‌ನಲ್ಲಿ ಅಖಿಲ ಭಾರತ ಅಂಗನವಾಡಿ ನೌಕರರ ಫೆಡರೇಷನ್ ನೇತೃತ್ವದಲ್ಲಿ ದೆಹಲಿ ಚಲೋ ಕಾರ್ಯಕ್ರಮ ನಡೆದ ಸಂದರ್ಭದಲ್ಲಿ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಮಂತ್ರಿ ಬೊಮ್ಮಾಯಿ ಅಂಗನವಾಡಿ ನೌಕರರಿಗೆ ಕನಿಷ್ಠ ರೂ. 1,000 ಮಾಸಿಕ ವೇತನ ನೀಡಲು ಒಪ್ಪಿಕೊಂಡಿದ್ದರು.

ಇತ್ತೀಚೆಗೆ ಈ ಬಗ್ಗೆ ಕೇಂದ್ರ ಸರಕಾರವು ಅಂಗನವಾಡಿ ಶಿಕ್ಷಕಿಯರಿಗೆ ಶೇ 25 ಹಾಗೂ ಸಹಾಯಕಿಯರಿಗೆ ಶೇ 3 ವೇತನ ಹೆಚ್ಚಳದ ಪ್ರಕಟಣೆ ನೀಡಿದೆ. ಕೇಂದ್ರ ಸರಕಾರದ ಈ ಪ್ರಕಟಣೆ ಆಘಾತಕಾರಿಯಾಗಿದ್ದು, ಅಂಗನವಾಡಿ ನೌಕರರಿಗೆ ವಿಶ್ವಾಸಘಾತ ಮಾಡಿದಂತಾಗಿದೆ ಎಂದು ಅಂಗನವಾಡಿ ನೌಕರರ ಸಂಘದ ರಾಮದುರ್ಗ ತಾಲ್ಲೂಕು ಸಮಿತಿ ಖಂಡಿಸಿದೆ.

ಅತ್ಯಂತ ಕಡಿಮೆ ಸಂಬಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಶೋಚನೀಯ ಪರಿಸ್ಥಿತಿಯಲ್ಲಿರುವ ಅಂಗನವಾಡಿ ನೌಕರರಿಗೆ ಈ ವೇತನ ಹೆಚ್ಚಳ ಸ್ವಲ್ಪ ಫಲಕಾರಿಯಾಗುವುದಿಲ್ಲ. ಕೇಂದ್ರ ಸರಕಾರದ ಈ ವಂಚನೆಯ ವಿರುದ್ಧ ತೀವ್ರ ಸಂಘಟಿತ ಹೋರಾಟಕ್ಕೆ ಮುಂದಾಗಬೇಕೆಂದು ಬೆಳಗಾವಿ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಹಾಗೂ ಅಂಗನವಾಡಿ ನೌಕರರ ರಾಮದುರ್ಗ ತಾಲ್ಲೂಕು ಗೌರವ ಅಧ್ಯಕ್ಷರಾದ ಪಿ.ಪಿ.ಕುಲಕರ್ಣಿ ಅವರು ಜಿಲ್ಲೆಯ ಅಂಗನವಾಡಿ ನೌಕರರಿಗೆ ಮನವಿ ಮಾಡಿದ್ದಾರೆ.

ರೇಷನ್ ಕಡಿತ ವಿರೋಧಿಸಿ ರಸ್ತೆ ತಡೆ

ಪಡಿತರ ಕಾರ್ಡುಗಳಲ್ಲಿ ಅಕ್ಕಿ, ಗೋಧಿಯ ಪ್ರಮಾಣವನ್ನು ಕಡಿತ ಮಾಡಿರುವುದನ್ನು ಪ್ರತಿಭಟಿಸಿ ಡಿವೈಎಫ್‌ಐ ನ ನೂರೈವತ್ತಕ್ಕೂ ಹೆಚ್ಚು ಕಾರ್ಯಕರ್ತರು ಜುಲೈ 7 ರಂದು ಮೈಸೂರು ಬ್ಯಾಂಕ್ ಚೌಕದಲ್ಲಿ ಸುಮಾರು ಅರ್ಧ ಗಂಟೆ ಕಾಲ ರಸ್ತೆ ತಡೆ ನಡೆಸಿ ಬಂಧನಕ್ಕೊಳಗಾದರು.

ರಸ್ತೆ ತಡೆಗೆ ಮುಂಚೆ ಕಾರ್ಯಕರ್ತರನ್ನು ಉದ್ದೇಶಿಸಿ ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಮಾತನಾಡಿ ಸರಕಾರದ ನೀತಿಯನ್ನು ಖಂಡಿಸಿದರು. ಸರಕಾರಿ ಲೆವಿ ಮುಖಾಂತರ ಅಕ್ಕಿ ಸಂಗ್ರಹಿಸಿ ಜನರಿಗೆ ಕಡಿತ ಮಾಡದೆ ನೀಡಬೇಕು. ಸಬ್ಸಿಡಿ ನೀಡಬೇಕು ಎಂದು ಒತ್ತಾಯಿಸಿದರು. ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಶಾಂತರಾಮ್ ನಾಯಕ್‌ರವರು ಮಾತನಾಡಿ ಕೇಂದ್ರ ಸಂಯುಕ್ತ ರಂಗ ಸರ್ಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೇಳಿರುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಜಾರಿಮಾಡಬೇಕು. ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಒತ್ತಾಯಿಸಿದರು. ಕಡಿತ ಮಾಡುವ ರಾಜ್ಯ ಸರಕಾರದ ನೀತಿಯನ್ನು ಅವರು ತೀವ್ರವಾಗಿ ಖಂಡಿಸಿದರು. ಜಿಲ್ಲಾ ಉಪಾಧ್ಯಕ್ಷರುಗಳಾದ ಬಿ.ಜಿ.ಹೇಮಂತರಾಜ್, ಎ.ಎಂ.ರವಿ ಚಂದ್ರನ್, ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ಶ್ರೀನಿವಾಸ, ಅಂಗನವಾಡಿ ಸಂಘದ ರಾಜ್ಯ ಅಧ್ಯಕ್ಷೆ ಪ್ರಭಾರವರು ಹೋರಾಟಕ್ಕೆ ಬೆಂಬಲಿಸಿ ಮಾತನಾಡಿದರು.

ಸರ್ಕಾರ ಕೂಡಲೆ ಅಕ್ಕಿ, ಗೋಧಿ ಕಡಿತ ನಿಲ್ಲಿಸಬೇಕು. ಇಲ್ಲದಿದ್ದರೆ ಡಿವೈಎಫ್‌ಐ ಸಂಘಟನೆ ಸ್ಥಳೀಯವಾಗಿ ಸಹಿ ಸಂಗ್ರಹ ಮಾಡುವುದಾಗಿ ಆಹಾರ ಸರಬರಾಜು ಇಲಾಖೆಗಳ ಮುಂದೆ ಪ್ರತಿಭಟನೆ ನಡೆಸುವುದಾಗಿ ನಿರ್ಧರಿಸಿದೆ.

ಅಪಪ್ರಚಾರಕ್ಕೆ ಮೈಕೋ ಕಾರ್ಮಿಕರ ಸಂಘದ ಖಂಡನೆ

ಜೂನ್ 28 ರಂದು ಸೇರಿದ್ದ ಮೈಕೋ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿ ಹಾಗೂ ಜನರಲ್ ಕೌನ್ಸಿಲ್‌ನ ಜಂಟಿ ಸಭೆ, ಸಂಘದ ಚುನಾಯಿತ ಅಧ್ಯಕ್ಷರಾದ ಸೂರ್ಯ ನಾರಾಯಣ ರಾವ್ ರವರು ಕರ್ತವ್ಯಚ್ಯುತರಾಗಿದ್ದಾರೆ ಎಂಬ ಆರೋಪವನ್ನು ತೀವ್ರವಾಗಿ ಪ್ರತಿಭಟಿಸಿ ಸರ್ವಾನುಮತದಿಂದ ಖಂಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಜೂನ್ 28 ರಂದು 'ಜಂಕಿ ತಂಡ' ದ ಹೆಸರಿನಲ್ಲಿ ಕರಪತ್ರ ಪ್ರಕಟಣೆ ಸಂಘವಿರೋಧಿ ಕೃತ್ಯ ಹಾಗೂ ಸಂಘದ ಸಂವಿಧಾನವನ್ನು ಸಂಘಟನೆಯ ಶಿಸ್ತನ್ನು ಉಲ್ಲಂಘಿಸಿ ಸುಮಾರು ಒಂದು ನೂರು ಕಾರ್ಮಿಕರ ರ್‍ಯಾಲಿ, ಮೆರವಣಿಗೆ ಹಾಗೂ ಧರಣಿಯನ್ನು ಸಂಘಟಿಸಿದ್ದುದಕ್ಕಾಗಿ ಶಿಸ್ತನ್ನು ತಾಗೂ ಇತರ ಜಂಕಿ ತಂಡದ ಸಂಚಾಲಕರಿಗೆ ಶೋಕಾಸ್ ನೋಟೀಸ್ ಜಾರಿ ಮಾಡಬೇಕೆಂದು ಬಹುಮತ ದಿಂದ ತೀರ್ಮಾನಿಸಲಾಯಿತು.

ಬಳ್ಳಾರಿ: ಡಿವೈಎಫ್‌ಐ ಘಟಕ ಸಭೆ

ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮದಲ್ಲಿ ಡಿವೈಎಫ್‌ಐ ಸರ್ವಸದಸ್ಯರ ಸಭೆ ಇತ್ತೀಚೆಗೆ ನಡೆಯಿತು. ಈ ಸಭೆಗೆ ಮುಖ್ಯ ಅತಿಥಿಯಾಗಿ ಡಿವೈಎಫ್‌ಐ ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎಸ್.ರಾಮಾಂಜನೇಯ ಮಾತನಾಡಿ ನಿರುದ್ಯೋಗ, ಜಾತೀಯತೆ, ಮಹಿಳಾ ಶೋಷಣೆ, ರಾಜಕೀಯ ಭ್ರಷ್ಟಾಚಾರ ಮುಂತಾದ ಸಮಸ್ಯೆಗಳ ವಿರುದ್ಧ ಯುವಜನರು ಸಂಘಟಿತ, ಸಂಘಟನಾತ್ಮಕ ಹೋರಾಟವೊಂದೇ ಉಳಿದಿರುವ ಮಾರ್ಗವಾಗಿ ಇನ್ನೂ ಹೆಚ್ಚಿನ ಹೋರಾಟವನ್ನು ಹಾಕಿಕೊಂಡು, ವಿವಿಧ ಬಗೆಯ ಸಾಂಸ್ಕೃತಿಕ - ಕ್ರೀಡಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಡಿವೈಎಫ್‌ಐಯನ್ನು ಬಲಿಷ್ಠವಾಗಿ ಕಟ್ಟಬೇಕು ಎಂದು ಕರೆ ನೀಡಿದರು.

ಸಭೆಯ ಆರಂಭದಲ್ಲಿ ಕೊಳಗಲ್ಲು ಡಿವೈಎಫ್‌ಐ ಘಟಕದ ಕಾರ್ಯದರ್ಶಿ ಮಹೇಶ್ ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆ ಯನ್ನು ಯು.ಶಿವರಾಂ ವಹಿಸಿದ್ದರು. ಈ ಸಭೆಯಲ್ಲಿ ಅಂಗನವಾಡಿ ನೌಕರರ ಸಂಘದ ರಾಜ್ಯ ಸಹ ಕಾರ್ಯದರ್ಶಿ ಕೆ.ವನಜ ಮತ್ತು ಎಂ.ಅನ್ನಪೂರ್ಣ ಭಾಗವಹಿಸಿ ಮಹಿಳೆಯರನ್ನು ಸಂಘಟನೆ ಮಾಡಿ ಅವರು ಎಚ್ಚೆತ್ತುಕೊಂಡು ಹೋರಾಟ ಮಾಡುವಂತೆ ಮಾಡಬೇಕು ಎಂದರು. ಈ ಸಭೆಯಲ್ಲಿ 82 ಜನ ಸದಸ್ಯರು ಭಾಗವಹಿಸಿದ್ದರು.

ರೇಶನ್ ಕಡಿತ ವಿರುದ್ಧ ಉಡುಪಿಯಲ್ಲಿ ಸಿಪಿಐ(ಎಂ)ನ ಪ್ರತಿಭಟನಾ ಪ್ರದರ್ಶನ

ರಾಜ್ಯ ಸರಕಾರವು ರೇಶನ್ ಮೂಲಕ ವಿತರಿಸುವ ಅಕ್ಕಿಯ ಪ್ರಮಾಣವನ್ನು ಜೂನ್ ತಿಂಗಳಿಂದ ವಿಪರೀತವಾಗಿ ಕಡಿಮೆ ಮಾಡಿರುವುದನ್ನು ಪ್ರತಿಭಟಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಉಡುಪಿ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಯಿತು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಡೇವಿಡ್ ಎ.ಕರ್ಕಡರು ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡುತ್ತ ರಾಜ್ಯ ಸರಕಾರವು ಜನ ಸಾಮಾನ್ಯರಿಗೆ ನೀಡುವ ಪಡಿತರ ಅಕ್ಕಿಯ ಪ್ರಮಾಣವನ್ನು ಎರಡೂವರೆ ಕೆ.ಜಿಗೆ ಇಳಿಸಿರುವುದು ಮತ್ತು ಬೆಲೆಯನ್ನು ಏರಿಸಿರುವುದು ಅನ್ಯಾಯ ಮಾತ್ರವಲ್ಲದೆ ಅವಮಾನವಾಗಿದೆ, ಜನರ ಸಂಕಷ್ಟಗಳಿಗೆ ಸ್ಪಂದಿಸುವ ಬದಲು ಸಂಕಷ್ಟವನ್ನುಂಟು ಮಾಡುತ್ತಿರುವ ಸರಕಾರದ ನೀತಿಗಳ ವಿರುದ್ಧ ಸಿಪಿಐ(ಎಂ) ದೇಶಾದ್ಯಂತ ಜನಜಾಗೃತಿ ಪ್ರಚಾರಾಂದೋಲನ ನಡೆಸಲಿದೆ ಎಂದರು.

ಉಡುಪಿ ತಾಲ್ಲೂಕು ತಹಶೀಲ್ದಾರರ ಮೂಲಕ ಸರಕಾರಕ್ಕೆ ಮನವಿಯನ್ನು ಅರ್ಪಿಸಲಾಯಿತು. ಈ ಪ್ರತಿಭಟನಾ ಪ್ರದರ್ಶನದಲ್ಲಿ ಎನ್.ಸಾಧುಅಮೀನ್, ಗುರುರಾಜ ಸೆಟ್ಟಿಗಾರ್, ದೋಗುಸುವರ್ಣ, ಸಂಜೀವ ನಾಯಕ್, ರಮೇಶ್ ಮೆಂಡನ್ ಗೊಡ್ವಾನ್ ಫರ್ನಾಂಡಿಸ್ ಭಾಗವಹಿಸಿದ್ದರು.

ಉಡುಪಿ ಇ.ಎಸ್.ಐ. ಡಿಸ್ಪೆನ್ಸರಿಗೆ ಔಷಧ ಒದಗಿಸುವಂತೆ ಜನರಲ್ ವರ್ಕರ್ಸ್ ಯೂನಿಯನ್‌ನ ಒತ್ತಾಯ

ಉಡುಪಿ ತಾಲ್ಲೂಕು ಜನರಲ್ ವರ್ಕರ್ಸ್ ಯೂನಿಯನ್(ಸಿಐಟಿಯು)ನ ಮಹಾಸಭೆಯು ಜುಲೈ 6 ರಂದು ಎಸ್.ಜಿ.ಓ. ಸಭಾಭವನದಲ್ಲಿ ಜರುಗಿತು. ಈ ಸಭೆಯಲ್ಲಿ ಉಡುಪಿ ಇಎಸ್‌ಐ ಡಿಸ್ಪೆನ್ಸರಿಗೆ ಸಾಕಷ್ಟು ಔಷಧ ಒದಗಿಸುವಂತೆ ಒತ್ತಾಯಪಡಿಸುವ, ರೇಶನ್ ಕಾರ್ಡಿನಲ್ಲಿ ವಿತರಿಸುವ ಅಕ್ಕಿಯನ್ನು ಕಡಿಮೆ ಮಾಡಿರುವುದನ್ನು ಖಂಡಿಸುವ ಮತ್ತು ವಿದ್ಯುತ್ ದರ ಏರಿಕೆಯನ್ನು ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಿ ಇದರ ಬಗ್ಗೆ ರಾಜ್ಯ ಸರಕಾರವನ್ನು ಒತ್ತಾಯಿಸಲು ನಿರ್ಧರಿಸಿತು.

ಈ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಸಿಐಟಿಯು ಮುಂದಾಳು ಡೇವಿಡ್ ಎ.ಕರ್ಕಡರವರು ಮಾತನಾಡುತ್ತಾ ಈ ಸಂಘವು ಹೆಚ್ಚು ಹೆಚ್ಚು ಅಸಂಘಟಿತ ವಿಭಾಗದ ಕಾರ್ಮಿಕರನ್ನು ಸಂಘಟಿಸುವ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಲಿ ಎಂದು ಕರೆ ನೀಡಿದರು. ಉಡುಪಿ ಬೀಡಿ ಅಂಡ್ ಟ್ಯುಬಾಕೋ ಲೇಬರ್ ಯೂನಿಯನ್‌ನ ಅಧ್ಯಕ್ಷ ಗುರುವ ಪೂಜಾರಿಯವರು ಮಾತಾಡಿ ಈ ಸಂಘಟನೆಯು ಇನ್ನೂ ವಿಸ್ತಾರವಾಗಿ ಬೆಳೆಯಲಿ ಎಂದು ಹಾರೈಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪಿ.ವಿಶ್ವನಾಥ ರೈಯವರು ಮಾತನಾಡುತ್ತಾ ಈ ಸಂಘಟನೆಯಲ್ಲಿ ಎಲ್ಲಾ ವಿಭಾಗಗಳ ಕೈಗಾರಿಕೆಗಳ ಕಾರ್ಮಿಕರು ಸದಸ್ಯರಾಗಿದ್ದಾರೆ. ಈಗ ಗೋಡಂಬಿ ಕೈಗಾರಿಕೆಯು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ಸರಕಾರದ ಧೋರಣೆಗಳು ಈ ಕೈಗಾರಿಕೆಗಳ ಬೆಳವಣಿಗೆಗೆ ಮಾರಕವಾಗಿದೆ. ಕಾರ್ಮಿಕರು ಈ ಕೈಗಾರಿಕೆಗಳನ್ನು ಉಳಿಸುವ ಬಗ್ಗೆಯೂ ಚಿಂತನೆ ಮಾಡಬೇಕು ಎಂದರು.

ಮುಂದಿನ ಅವಧಿಗೆ ಅಧ್ಯಕ್ಷರಾಗಿ ಪಿ.ವಿಶ್ವನಾಥ ರೈ, ಉಪಾಧ್ಯಕ್ಷರಾಗಿ ಶ್ರೀಮತಿ ಗೋಪಿ, ಕಾರ್ಯದರ್ಶಿಯಾಗಿ ರಮೇಶ ಮಂಡನ್, ಜತೆ ಕಾರ್ಯದರ್ಶಿಯಾಗಿ ಶಿಮತಿ ಇಂದಿರಾ, ಖಜಾಂಚಿಯಾಗಿ ಕುಮಾರಿ ಯಶೋಧ ಎಸ್. ಇವರು ಆಯ್ಕೆಯಾದರು.

ಕಾರ್ಮಿಕ ಮುಖಂಡರಿಗೆ ಕಿರುಕುಳ

ಪೋಲೀಸ್ ಇನ್ಸ್‌ಪೆಕ್ಟರ್ ಅಮಾನತಿಗೆ ಒತ್ತಾಯ

ಬೆಂಗಳೂರಿನ ಮಹದೇವಪುರ ಪೋಲೀಸ್ ಸ್ಟೇಶನ್ನಿನ ಪೋಲೀಸ್ ಇನ್ಸ್‌ಪೆಕ್ಟರ್ ಕಾರ್ಮಿಕ ಸಂಘಗಳ ಮುಖಂಡರಿಗೆ, ಕಾರ್ಯಕರ್ತರಿಗೆ ಸುಳ್ಳು ಅಪಾದನೆಗಳ ಮೇಲೆ ಕಿರುಕುಳ ಕೊಡುತ್ತಿದ್ದಾರೆ ಎಂದು ಕಾರ್ಮಿಕ ಮುಖಂಡರು ಆಪಾದಿಸಿದ್ದಾರೆ. ಜುಲೈ 8 ರಂದು ಆಂಧ್ರ ಅಂಡ್ ಮಿತ್ತಲ್ ಸ್ಟೀಲ್ ವರ್ಕರ್ಸ್‌ಯೂನಿಯನ್ನಿನ ಕಾರ್ಯದರ್ಶಿ ಸಿ.ರಮೇಶ್‌ರನ್ನು ಪೋಲೀಸ್ ಠಾಣೆಗೆ ಸುಳ್ಳು ದೂರಿನ ಮೇಲೆ ಕರೆಸಿ ಪೋಲೀಸ್ ಇನ್ಸ್‌ಪೆಕ್ಟರ್ ಅವಮಾನವೀಯವಾಗಿ ನಡೆಸಿಕೊಂಡಿದ್ದಾರೆ ಹಾಗೂ ಹೊಲಸು ಭಾಷೆಯಲ್ಲಿ ಬಯ್ದಿದ್ದಾರೆ. ಅವರನ್ನು ಬೆದರಿಸಿ ಸುಳ್ಳು ಕೇಸ್ ಹಾಕಿದ್ದಾರೆ ಎಂದು ತಿಳಿದುಬಂದಿದೆ. ಈ ಪೋಲೀಸ್ ಇನ್ಸ್‌ಪೆಕ್ಟರ್ ಬಹಿರಂಗವಾಗಿಯೇ ಕಾರ್ಮಿಕ-ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ಅಲ್ಲಿಯ ಕಾರ್ಮಿಕ ಸಂಘಗಳು ಪೋಲೀಸ್ ಕಮಿಶನರ್ ಕಛೇರಿಯೆದುರು ಪ್ರತಿಭಟನೆ ನಡೆಸಿ ಮಹದೇವಪುರ ಪೋಲೀಸ್ ಸ್ಟೇಶನ್ನಿನ ಪೋಲೀಸ್ ಇನ್ಸ್‌ಪೆಕ್ಟರ್‌ನ್ನು ಅಮಾನತು ಮಾಡಬೇಕೆಂದು ಒತ್ತಾಯಿಸುವುದಾಗಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಕಳೆದ ವಾರ

ಜುಲೈ 4

◆ 'ಮಂತ್ರಿಮಂಡಲದ ಎಲ್ಲ ಸದಸ್ಯರು ಪಟೇಲ್ ಅವರ ನೇತೃತ್ವದ ಆಡಳಿತದಲ್ಲಿ ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿ, ಅವರ ಕೈಗಳನ್ನು ಬಲಪಡಿಸುವ ದೃಢ ನಿರ್ಧಾರವನ್ನು ಕೈಗೊಂಡಿದ್ದಾರೆ" ಎಂದು ವಾರ್ತಾ ಮತ್ತು ಪ್ರಚಾರ ಖಾತೆಯ ಸಚಿವರು.

◆ ರಾಜ್ಯದಲ್ಲಿ ಕಾಲೇಜುಗಳಲ್ಲಿ ಪ್ರವೇಶ ಮತ್ತು ಪಾಠ-ಪ್ರವಚನ ಶುಲ್ಕ ಪರಿಷ್ಕರಣೆಯ ಆದೇಶವನ್ನು ಸರಕಾರ ತಡೆ ಹಿಡಿದಿದೆ.

◆ ಹುಬ್ಬಳ್ಳಿಯ ಮಹದೇವ ಜವಳಿ ಗಿರಣಿಯನ್ನು ಮುಚ್ಚಲು ರಾಜ್ಯ ಸಚಿವ ಸಂಪುಟ ನಿರ್ಧಾರ.

◆ ಬೀರೂರು ಶಾಸಕ ಮತ್ತು ಅವರ ಮೊಮ್ಮಗನ ಮೇಲೆ ದ್ವೇಷದಿಂದ ರೊಚ್ಚಿಗೆದ್ದ ಇಡೀ ಗ್ರಾಮವೊಂದರ ಜನರಿಂದ ಪೋಲೀಸ್ ಠಾಣೆಯ ಮೇಲೆ ಧಾಳಿ, ಧ್ವಂಸ ಕಾರ್ಯ.

ಜುಲೈ 5

◆ ಲಾಲೂ ಪ್ರಸಾದ್ ಯಾದವ್‌ರನ್ನು ಬೆಂಬಲಿಸಿದ್ದ ಕರ್ನಾಟಕದ ಆರು ಎಂ.ಪಿ.ಗಳು ಅವರ ಸಮಾವೇಶದಲ್ಲಿ ಭಾಗವಹಿಸಲಿಲ್ಲ. ಲಾಲೂರವರ ಹೊಸ ಪಕ್ಷದಿಂದ ರಾಜ್ಯ ಸರಕಾರದ ಸುಭದ್ರತೆಯ ಮೇಲೆ ಪರಿಣಾಮವಿಲ್ಲ ಎಂದು ಮುಖ್ಯಮಂತ್ರಿಗಳು.

ಜುಲೈ 6

◆ ಲಾಲೂ ಪಕ್ಷದ ಉದಯದ ಬಗ್ಗೆ ಪ್ರತಿಕ್ರಿಯಿಸಲು ಕೇಂದ್ರ ಸಚಿವ ಜಾಲಪ್ಪನವರ ನಿರಾಕರಣೆ

◆ 'ಏಷ್ಯನ್ ಏಜ್' ಬೆಂಗಳೂರು ಕಚೇರಿಯ ಮೇಲೆ 15-20 ಮಂದಿಯ ಧಾಳಿ, ಬೆಂಕಿ.

ಜುಲೈ 7

◆ ಕೃಷ್ಣಾ ನದಿಯಲ್ಲಿ ಮಹಾಪೂರ. ಆಲಮಟ್ಟಿ ಜಲಾಶಯದ ಸುತ್ತಲಿನ 50 ಗ್ರಾಮಗಳು ಹಿನ್ನೀರಿನ ಸೆಳೆತಕ್ಕೆ.

◆ 'ಏಶ್ಯನ್ ಏಜ್' ಪತ್ರಿಕಾ ಕಚೇರಿಯ ಮೇಲೆ ದಾಳಿ ಪ್ರಕರಣದ ತನಿಖೆಗೆ ಗೃಹ ಇಲಾಖೆ ರಾಜ್ಯ ಸಚಿವರ ಆದೇಶ.

◆ ಬಂಗಾರಪ್ಪ ವಿರುದ್ಧ ಸಿಬಿಐ ಆರೋಪ ಪಟ್ಟಿ ಸಲ್ಲಿಸುವಂತೆ ಆದೇಶಿಸಬೇಕೆಂದು ಕೋರಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ.

ಜುಲೈ 8

◆ ಬೆಂಗಳೂರು ನಗರದಲ್ಲಿ ರೌಡಿ ಹಾವಳಿ ತಡೆಗೆ 50 ಸಂಚಾರಿ ಪೋಲೀಸ್ ವ್ಯಾನ್ ಬಳಸುವುದಾಗಿ ಗೃಹ ಖಾತೆ ರಾಜ್ಯ ಸಚಿವರು.

◆ ಪಿ.ಯು.ಸಿ. ಮೌಲ್ಯಮಾಪನದಲ್ಲಿ ಅನಧಿಕೃತ ತಿದ್ದುಪಡಿ ಮತ್ತು ಅಸಮರ್ಪಕ ಮೌಲ್ಯಮಾಪನ ಮಾಡಿದ ಪ್ರಕರಣ ಬೆಳಕಿಗೆ. ಮೂವರ ಸಸ್ಪೆಂಡ್ ಸಂಭವ.

ಜುಲೈ 9

◆ ಲೋಕಶಕ್ತಿಯ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಜೀವರಾಜ ಆಳ್ವರನ್ನು ಪದಚ್ಯುತ ಗೊಳಿಸಬೇಕೆಂದು ಆರು ವಿಧಾನ ಪರಿಷತ್ ಸದಸ್ಯರ ಆಗ್ರಹ.

◆ ಬೆಂಗಳೂರಿನ ಜಯನಗರದಲ್ಲಿನ ವಿಜಯ ಮಹಾಗಣಪತಿ ಸ್ಥಾನಕ್ಕೆ ಹೊಂದಿಕೊಂಡ ಕಟ್ಟಡ ನಿರ್ಮಾಣಕ್ಕೆ ಹೈಕೋರ್ಟ್ ತಡೆ.

ಏಜೆನ್ಸಿದಾರರಿಗೆ ಸೂಚನೆ

ದುಡಿಯುವ ಜನರ ಪತ್ರಿಕೆ 'ಐಕ್ಯರಂಗ' ನಿರಂತರವಾದ ಬೆಲೆ ಏರಿಕೆಗಳಿಂದಾಗಿ ತೀವ್ರ ಹಣಕಾಸು ಮುಗ್ಗಟ್ಟು ಅನುಭವಿಸಬೇಕಾಗಿ ಬಂದಿದೆ. ಇದನ್ನು ಎದುರಿಸಲು ಏಜೆಂಸಿದಾರರ ಸಹಕಾರವನ್ನು ಮತ್ತೆ-ಮತ್ತೆ ಕೋರುತ್ತಿದ್ದರೂ ಬಹಳ ಮಂದಿ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಆದ್ದರಿಂದ ನಿರ್ವಾಹವಿಲ್ಲದೆ ವ್ಯವಸ್ಥಾಪಕ ಮಂಡಳಿ ಕೆಲವು ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ಧರಿಸಿದೆ. ಏಜೆಂಸಿ ಬಿಲ್ ಬಾಕಿಯನ್ನು ಜುಲೈ 31, 1997 ರೊಳಗೆ ಪಾವತಿ ಮಾಡದ ಏಜೆಂಸಿಗಳನ್ನು ರದ್ದು ಮಾಡಲಾಗುವುದು. ಇದನ್ನು ಎಲ್ಲಾ ಏಜೆಂಸಿದಾರರು ಗಮನಿಸಬೇಕಾಗಿ ಕೋರುತ್ತೇವೆ. ಸಂಬಂಧ ಪಟ್ಟ ಏಜೆಂಸಿದಾರರಿಗೆ ಕಳಿಸಿರುವ ಜೂನ್ ತಿಂಗಳ ಬಿಲ್‌ನಲ್ಲಿ ಹಿಂದಿನ ಬಾಕಿಯನ್ನು ಪ್ರತ್ಯೇಕವಾಗಿ ನಮೂದಿಸಲಾಗಿದೆ.

– ವ್ಯವಸ್ಥಾಪಕರು

ಹಾಂಕಾಂಗ್ ಮತ್ತು ಪಾಶ್ಚಿಮಾತ್ಯ ದೇಶಗಳ ಗೋಸುಂಬೆತನ

– ಪ್ರಕಾಶ್ ಕಾರಟ್

ಅಮೇರಿಕಾ ಮತ್ತಿತರ ಪಾಶ್ಚಿಮಾತ್ಯ ದೇಶಗಳು ಹಾಂಕಾಂಗ್‌ನಲ್ಲಿ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಬೊಬ್ಬೆ ಹೊಡೆಯುತ್ತಿವೆ. ಇತ್ತೀಚೆಗೆ ನಡೆದ ಇತರ ಎರಡು ಘಟನೆಗಳಲ್ಲಿ ಅವರ ಈ ಬೊಬ್ಬೆ ಎಷ್ಟು ಟೊಳ್ಳು ಎಂದು ಪ್ರದರ್ಶನಗೊಂಡಿದೆ ಎಂಬುದನ್ನೂ ಗಮನಿಸದೆ ಬೊಬ್ಬೆ ಹೊಡೆಯುತ್ತಿವೆ. ಆದರೆ ಹಾಂಕಾಂಗ್ ಕೊನೆಗೂ ಚೀಣಾಕ್ಕೆ ಮರಳಿರುವುದು ತಮಗೆ ಇದೆಯೆಂದು ಅವರು ನಂಬಿದ್ದ ಅಪಾರ ಶಕ್ತಿಗಳಿಗೂ ಮಿತಿಗಳಿವೆ ಎಂಬುದನ್ನು ನೆನಪಿಸಿಕೊಟ್ಟಿದೆ ಎನ್ನುತ್ತಾರೆ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್.



ಇತ್ತೀಚಿನ ಮೂರು ಅಂತರ್‍ರಾಷ್ಟ್ರೀಯ ಘಟನೆಗಳು ಪಾಶ್ಚಿಮಾತ್ಯ ಶಕ್ತಿಗಳ ಆ ಮೂಲಕ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಇಬ್ಬಂದಿತನ ಹಾಗೂ ಸುಳ್ಳುಕೋರತನವನ್ನು ಬಯಲಿಗೆಳೆದಿವೆ. "ಪ್ರಜಾಪ್ರಭುತ್ವ, ಮಾನವ ಹಕ್ಕುಗಳು" ಇತ್ಯಾದಿ ಅವರ ಬೊಗಳೆಗಳೆಲ್ಲಾ ವಾಸ್ತವವಾಗಿ ತಮ್ಮ ಸಾಮ್ರಾಜ್ಯಶಾಹಿ ಪ್ರಾಬಲ್ಯ ಮರೆಸುವುದಕ್ಕೆ ಹಾಗೂ ಲಾಭಕೋರತನಕ್ಕೆ ನೆಪಗಳಷ್ಟೆ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ. ಹಾಂಕಾಂಗ್ ಚೀಣಾಕ್ಕೆ ಮರಳಿರುವುದು, ಕಾಂಗೋದಲ್ಲಿ ಮೊಬುಟು ಪತನ ಮತ್ತು ಕಾಂಬೋಡಿಯಾದಲ್ಲಿ ಪೋಲ್ ಪೋಟ್ ಪ್ರಶ್ನೆ ಈ ಮೂರು ಇತ್ತೀಚಿನ ಘಟನೆಗಳು ಈ ಪಾಶ್ಚಿಮಾತ್ಯ ಶಕ್ತಿಗಳು ತಮ್ಮ ಮಾಜಿ ವಸಾಹತುಗಳ ಬಗ್ಗೆ ಹೊಂದಿರುವ ಕಣ್ಣೋಟ ಎಂತಹ ಮೋಸಗಾರಿಕೆಯಿಂದ ಕೂಡಿದೆ ಎಂಬುದಕ್ಕೆ ಇನ್ನಷ್ಟು ಉದಾಹರಣೆಗಳು. ಒಂದೂವರೆ ಶತಮಾನದ ನಂತರ ಹಾಂಕಾಂಗ್ ಚೀಣಾಕ್ಕೆ ಮರಳಿದೆ. ಜುಲೈ 1ರ ಈ ಐತಿಹಾಸಿಕ ಗಳಿಗೆಯ ಮೊದಲು ಡೆನ್ವರ್‌ನಲ್ಲಿ ನಡೆದ ಜಿ-7 ಶೃಂಗ ಸಭೆ ಪೂರ್ವದಲ್ಲಿನ ಬ್ರಿಟಿಷ್ ವಸಾಹತುಶಾಹಿಯ ಈ ಕೊನೆಯ ಠಾಣೆಯನ್ನು ಹಿಂದಿರುಗಿಸಿದ ನಂತರ ಅಲ್ಲಿ ಆದಷ್ಟು ಬೇಗನೇ ಪ್ರಜಾಸತ್ತಾತ್ಮಕ ಚುನಾವಣೆ ನಡೆಸಬೇಕು ಎಂದು "ಎಚ್ಚರಿಸಿತು!". ಈ ಹಿಂದೆ ಚೀಣಾವನ್ನು ಸುಲಿದು, ತುಂಡರಿಸಿ, ಹಾಳುಗೆಡವಿದ, ಅವರ ಮಾನವ ಹಕ್ಕುಗಳನ್ನು ತುಳಿದು ಹಾಕಿದ ಶಕ್ತಿಗಳೇ ಈಗ ಪ್ರಜಾಪ್ರಭುತ್ವದ ಮಾತನಾಡುತ್ತಿರುವುದು ನಿಜಕ್ಕೂ ಹಾಸ್ಯಾಸ್ಪದ. ಬ್ರಿಟನ್ನಿನ "ಹೊಸ" ಲೇಬರ್ ಪ್ರಧಾನಮಂತ್ರಿ ಟೋನಿ ಬ್ಲೇರ್ ಹಾಂಕಾಂಗ್ ಜನತೆಯ "ಪ್ರಜಾಪ್ರಭುತ್ವ ಹಕ್ಕುಗಳ ಬಗ್ಗೆ ತನ್ನ ಆತಂಕ" ವ್ಯಕ್ತಪಡಿಸಲು ಹಾಂಕಾಂಗ್‌ನಲ್ಲಿ ಹೊಸ ಸರಕಾರದ ಸ್ಥಾಪನೆಯ ಸಮಾರಂಭದಿಂದ ದೂರವುಳಿದರಂತೆ! ಬಂದೂಕಿನ ಬಲದಿಂದ ಅಫೀಮನ್ನು ಚೀಣಾದಲ್ಲಿ ಸುರಿದು ಚೀಣಾದ ಜನತೆಯ ಸಂಕಷ್ಟಗಳಿಂದ ಲಾಭ ದೋಚಿಕೊಂಡ ಬ್ರಿಟನ್ ಮತ್ತು ಇತರ ವಸಾಹತುಶಾಹೀ ಶಕ್ತಿಗಳು ಈಗ ಚೀಣಾಕ್ಕೆ "ಮಾನವ ಹಕ್ಕು"ಗಳ ಬಗ್ಗೆ ಉಪದೇಶ ಕೊಡಲು ಮುಂದಾಗುತ್ತಿರುವ ಭಂಡತನ ನಿಜಕ್ಕೂ ಉಸಿರು ಗಟ್ಟಿಸುವಂತದ್ದು.

ಹಾಂಕಾಂಗ್‌ನ ಹಸ್ತಾಂತರವನ್ನು ನಿಲ್ಲಿಸಲು ಸಾಧ್ಯವಿರಲಿಲ್ಲ. ಆದರೂ ಹಾಂಕಾಂಗ್‌ನ ಕೊನೆಯ ಬ್ರಿಟಿಶ್ ಗವರ್ನರ್ ಕ್ರಿಸ್ ಪ್ಯಾಟನ್ ಅದನ್ನು ನಿಲ್ಲಿಸಲು ತನ್ನ ಕೈಲಾದುದನ್ನೆಲ್ಲಾ ಮಾಡಿ ಸೋತ ನಂತರ 1984ರ ಒಪ್ಪಂದದ ಪ್ರಕಾರ ರಚಿಸಿದ ಹಾಂಕಾಂಗ್ ವಿಧಾನ ಮಂಡಳ ಸತ್ತುಹೋಗುತ್ತದೆ ಎಂದು ಗೋಳಾಡಿದ. "ಬಹುಶಃ ದಾಖಲಾದ ಇತಿಹಾಸದಲ್ಲಿ ವಸಾಹತುಶಾಹಿಯಿಂದ ಮುಕ್ತಿಯ ವೇಳೆಗೆ ಹೆಚ್ಚು ಪ್ರಜಾಪ್ರಭುತ್ವದ ಬದಲು ಕಮ್ಮಿ ಪ್ರಜಾಪ್ರಭುತ್ವದ ಏಕೈಕ ಉದಾಹರಣೆಯಿದು" ಎಂದು ಆತ ಸಂದರ್ಶನವೊಂದರಲ್ಲಿ ಹೇಳಿದ್ದಾನೆ. ಈ ಬಲಪಂಥೀಯ ಟೋರಿಯ ಇತಿಹಾಸದ ಸೀಮಿತ ಜ್ಞಾನದ ಬಗ್ಗೆ ಆತನನ್ನು ಕ್ಷಮಿಸಬಹುದಾದರೂ ಇತಿಹಾಸದ ಈ ಹೋಲಿಕೆ ಎಷ್ಟು ಹಾಸ್ಯಾಸ್ಪದ ಎಂಬುದು ವಸಾಹತುಶಾಹಿಯಿಂದ ಮುಕ್ತಿಯ ಇನ್ನೊಂದು ಇತ್ತೀಚಿನ ಕಥೆಯನ್ನು ಪರಿಶೀಲಿಸಿದಾಗ ಕಾಣುತ್ತದೆ. ಈ ಪಾಶ್ಚಿಮಾತ್ಯರ ಕಣ್ಣಲ್ಲಿ ಮಾಜಿ ವಸಾಹತುವೊಂದರಲ್ಲಿ ಪ್ರಜಾಪ್ರಭುತದ ಹೆಚ್ಚಳವೆಂದರೆ ನಿಜವಾಗಿ ಏನು ಎಂಬುದನ್ನು ಕಾಂಗೋದ ಘಟನೆಗಳು ಹಾಗೂ ಇತ್ತೀಚೆಗೆ ಅಲ್ಲಿನ ದುಷ್ಟ ಮೊಬುಟು ಆಳ್ವಿಕೆ ಕುಸಿದ ಪ್ರಕರಣ ಕಣ್ಣಿಗೆ ಕಟ್ಟುವಂತೆ ತೋರಿಸುತ್ತವೆ.

1960ರಲ್ಲಿ ಬೆಲ್ಜಿಯಂ ಕಾಂಗೋದಿಂದ ವಸಾಹತುಶಾಹಿಗಳು ಕಾಲ್ತೆಗೆದರು. ಆದರೆ ಅಲ್ಲಿ 'ಹೆಚ್ಚು ಪ್ರಜಾಪ್ರಭುತ್ವ' ಬಂತೇ? ಅಲ್ಲಿನ ವಿಮೋಚನಾ ಹೋರಾಟದ ನಿಜವಾದ ಮುಖಂಡ ಪ್ಯಾಟ್ರೆಸ್ ಲುಮುಂಬಾರವರ ಕೊಲೆ ನಡೆಸುವಂತೆ ಇದೇ ಪಾಶ್ಚಿಮಾತ್ಯ ದೇಶಗಳು ಕುಮ್ಮಕ್ಕು ನೀಡಿದವು. ಇದೇ ಅಮೇರಿಕಾದ ಗುಪ್ತಚರ ಪಡೆ ಸಿಐಎ ಇದೇ ಮೊಬುಟುರವರನ್ನು ಅಧಿಕಾರದಲ್ಲಿ ಕೂರಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಇದರ ಹಿಂದೆ ಅವರ ಮುಖ್ಯ ಉದ್ದೇಶ ಆಫ್ರಿಕಾದ ಈ ಅತ್ಯಂತ ಶ್ರೀಮಂತ ದೇಶದ ಕೊಳ್ಳೆಯನ್ನು ಮುಂದುವರೆಸಲು ಅವಕಾಶ ಕಲ್ಪಿಸಿಕೊಳ್ಳುವುದು. ಲುಮುಂಬಾ ಇದ್ದಿದ್ದರೆ ಅದು ಸಾಧ್ಯವಿರಲಿಲ್ಲ.

ಈಗ ಹಾಂಕಾಂಗ್ ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಬಗ್ಗೆ ಮಾತನಾಡುತ್ತಿರುವ ಯಾವ ಪಾಶ್ಚಿಮಾತ್ಯ ದೇಶಕ್ಕೂ ಆಗ ಮತ್ತು ನಂತರ ಮೂರು ದಶಕಗಳ ಕಾಲ ಮೊಬುಟುನ ರಾಕ್ಷಸೀ ಆಳ್ವಿಕೆಯಲ್ಲಿ ಕಾಂಗೋದ ಜನ ಅನುಭವಿಸಿದ ನರಕಯಾತನೆಗಳ ಬಗ್ಗೆ ಒಂದು ತೊಟ್ಟು ಕಣ್ಣೀರೂ ಬರಲಿಲ್ಲ. ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಗಣಿ ಕಂಪನಿಗಳು ಲಾಭದಲ್ಲಿ ತೇಲಾಡುವವರೆಗೆ "ಹೆಚ್ಚು ಪ್ರಜಾಪ್ರಭುತ್ವ"ದ ಅಗತ್ಯವಿಲ್ಲ!

ಕಾಂಗೋದ ಪ್ರಕರಣ ಹೀಗಾದರೆ, ಆಗ್ನೇಯ ಏಶ್ಯಾದಲ್ಲಿನ ಇನ್ನೊಂದು ಬೆಳವಣಿಗೆ ಕೂಡಾ ಪಾಶ್ಚಿಮಾತ್ಯ ಶಕ್ತಿಗಳಿಗೆ ಮುಜುಗರ ಉಂಟು ಮಾಡುವಂತದ್ದು. ಕಂಬೋಡಿಯಾದಲ್ಲಿ ಕುಖ್ಯಾತ ಪೋಲ್‌ಪೋಟ್ ಮತ್ತು ಆತನ ಅಳಿದುಳಿದ ಖ್ಮೇರ್‌ರೂಜ್ ಕೊನೆಗೂ ಮೂಲೆಗೊತ್ತಲ್ಪಟ್ಟಿದೆ. ಖ್ಮೇರ್‌ರೂಜ್ ಸಂಘಟನೆಯ ಆಂತರಿಕ ಒಡಕುಗಳಿಂದಾಗಿ ಪೋಲ್‌ಪೋಟ್‌ರನ್ನು ಆ ಸಂಘಟನೆಯ ಖಿಯು ಸಂಪನ್ ನೇತೃತ್ವದ ಬಂಡಾಯ ಗುಂಪು ಸೆರೆ ಹಿಡಿದಿದೆ. ಈ ಗುಂಪು ಕಾಂಬೋಡಿಯಾ ಸರಕಾರದೊಂದಿಗೆ ಮಾತುಕತೆ ನಡೆಸಲು ಸಿದ್ಧವಿದೆ. ಕಾಂಬೋಡಿಯಾ ಸರಕಾರ ಪೋಲ್ ಪೋಟ್‌ನ ನರಹತ್ಯಾಕಾರಿ ಆಡಳಿತದ ಅಪರಾಧಗಳ ವಿಚಾರಣೆಗೆ ಒಂದು ಅಂತರ್ರಾಷ್ಟ್ರೀಯ ನ್ಯಾಯ ಮಂಡಳಿಯನ್ನು ರಚಿಸಬೇಕು ಎಂದು ವಿಶ್ವ ಸಂಸ್ಥೆಯನ್ನು ಕೋರಿದೆ. ಆದರೆ ಆಶ್ಚರ್ಯಕರ ಸಂಗತಿಯೆಂದರೆ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್ ವಿಶ್ವಸಂಸ್ಥೆಯನ್ನು ಬದಿಗೊತ್ತಿ ಅದೇ ಉದ್ದೇಶಕ್ಕಾಗಿ ಬೇರೊಂದು ಅಂತರ್ರಾಷ್ಟ್ರೀಯ ನ್ಯಾಯ ಮಂಡಳಿಯನ್ನು ರಚಿಸುವ ಪ್ರಯತ್ನ ನಡೆಸಿದ್ದಾರೆ.

ಪೋಲ್‌ಪೋಟ್‌ರ ನೇತೃತ್ವದಲ್ಲಿ ಖ್ಮೇರ್ ರೂಜ್ ಸಂಘಟನೆ 1975ರಿಂದ 1979ರವರೆಗೆ ಕಾಂಬೋಡಿಯಾವನ್ನು ಆಳಿತು. ಈ ನಾಲ್ಕು ವರ್ಷಗಳಲ್ಲಿ 10 ಲಕ್ಷ ಕಾಂಬೋಡಿಯನ್ನರ ಸಾಮೂಹಿಕ ನರಹತ್ಯೆ ನಡೆಯಿತು. ವಿಯೆಟ್ನಾಂ ಗಡಿಯಾಚೆ ಆಕ್ರಮಣ ನಡೆಸಿತು. ಈ ಪೋಲ್‌ಪೋಟ್‌ನ ಹುಚ್ಚು ದರ್ಬಾರನ್ನು ವಿರೋಧಿಸುತ್ತಿದ್ದ ಶಕ್ತಿಗಳಿಗೆ ನೆರವಾಗಲು 1979ರಲ್ಲಿ ವಿಯೆಟ್ನಾಂ ಮಧ್ಯ ಪ್ರವೇಶಿಸಿತು. ಇದರಿಂದ ಕಾಂಬೋಡಿಯಾದಲ್ಲಿ ಹೆಂಗ್ ಸಮ್ರಿನ್ ನೇತೃತ್ವದಲ್ಲಿ ಹೊಸ ಸರಕಾರ ರಚನೆಯಾಯಿತು. ಆದರೆ ಅಮೇರಿಕಾ, ಮತ್ತಿತರ ಪಾಶ್ಚಿಮಾತ್ಯ ಶಕ್ತಿಗಳು, ಚೀಣಾ ಹಾಗೂ ಆಸಿಯಾನ್ ದೇಶಗಳು ಖ್ಮೇರ್ ರೂಜ್‌ನ ದೇಶಭ್ರಷ್ಟ ಸರಕಾರಕ್ಕೆ ತಮ್ಮ ಮಾನ್ಯತೆಯನ್ನು ಮುಂದುವರೆಸಿದವು. ಸೆಪ್ಟೆಂಬರ್ 1979ರಲ್ಲಿ ವಿಶ್ವ ಸಂಸ್ಥೆ 71-35 ಮತಗಳಿಂದ ಖ್ಮೇರ್ ರೂಜ್‌ನ್ನು ಕಾಂಬೋಡಿಯಾದ ಕಾನುನುಬದ್ಧ ಸರಕಾರ ಎಂದು ಮಾನ್ಯ ಮಾಡಿ ಅದಕ್ಕೆ ವಿಶ್ವ ಸಂಸ್ಥೆಯಲ್ಲಿ ಸ್ಥಾನ ನೀಡಿತು. ಹೀಗೆ ಪೋಲ್‌ಪೋಟ್‌ನ ಆಳ್ವಿಕೆಗೆ ಕಾನೂನು ಬದ್ಧತೆ ನೀಡುವಲ್ಲಿ ಅಮೇರಿಕಾ ಮತ್ತು ಪಾಶ್ಚಾತ್ಯ ದೇಶಗಳು ನೆರವಾದವು.

ನಂತರವೂ ಅಮೇರಿಕಾ ಥೈಲ್ಯಾಂಡ್ ಮೂಲಕ ಖ್ಮೇರ್ ರೂಜ್ ನೇತೃತ್ವದ ಕೂಟಕ್ಕೆ ಮಿಲಿಟರಿ ಸಾಮಗ್ರಿಗಳ ಪೂರೈಕೆ ಮಾಡುತ್ತಿತ್ತು. ಈ ಕೂಟದಲ್ಲಿ ಕಾಂಬೋಡಿಯಾದ ಮಾಜಿ ರಾಜ ಸಿಂಹನೌಕ್ ಕೂಡಾ ಇದ್ದರು. ಈ ನಡುವೆ ಕಾಂಬೋಡಿಯಾದಲ್ಲಿ ರಚನೆಯಾಗಿದ್ದ ಖ್ಮೇರ್ ರೂಜ್-ವಿರೋಧಿ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳೆಲ್ಲಾ ವಿಫಲವಾದ ಮೇಲೆ 1991ರಲ್ಲಿ ಒಂದು ಶಾಂತಿ ಒಪ್ಪಂದ ಏರ್ಪಟ್ಟಿತು. ಈಗ ಖ್ಮೇರ್ ರೂಜ್ ಕೊನೆಗೂ ಸಿಕ್ಕು ಬಿದ್ದ ಬೇಟೆಯಾಗಿರುವುದರಿಂದ ಅಮೇರಿಕಾ ತಾನು ಕಾಂಬೋಡಿಯಾದಲ್ಲಿ ನ್ಯಾಯ ವಿತರಕನಾಗಿ ಕಾಣಿಸಿಕೊಳ್ಳಬಯಸುತ್ತಿದೆ. 1970ರಲ್ಲಿ ವಿಯೆಟ್ನಾಂನ ಮೇಲೆ ಆಕ್ರಮಣದ ಭಾಗವಾಗಿ ಅಮೇರಿಕಾ ಕಾಂಬೋಡಿಯಾದಲ್ಲಿ ಮಿಲಿಟರಿ ಹಸ್ತಕ್ಷೇಪ ನಡೆಸಿದ್ದರಿಂದಾಗಿ ಅಲ್ಲಿಯ ಜನತೆ ಪಟ್ಟಪಾಡು ಏನು ಎಂಬುದನ್ನು ಇತ್ತೀಚಿನ ಇತಿಹಾಸದ ಅಧ್ಯಯನ ಮಾಡುವ ಯಾರೇ ಆಗಲಿ ಕಾಣದಿರಲು ಸಾಧ್ಯವಿಲ್ಲ.

ಈಗ ಪೋಲ್‌ಪೋಟ್ ಆಡಳಿತದ ಅಪರಾಧಗಳ ವಿಚಾರಣೆಗೆ ಅಂತರ್ರಾಷ್ಟ್ರೀಯ ನ್ಯಾಯ ಮಂಡಳಿಯನ್ನು ರಚಿಸ ಬಯಸುವ ಅಮೇರಿಕಾ ಮೊಬುಟುನ ದುಷ್ಕೃತ್ಯಗಳ ವಿಚಾರಣೆಗೆ ಇಂತಹುದೇ ಅಂತರ್ರಾಷ್ಟ್ರೀಯ ನ್ಯಾಯ ಮಂಡಳಿಯ ರಚನೆಗೆ ಸಹಜವಾಗಿಯೇ ಕರೆ ಕೊಡುವುದಿಲ್ಲ. ಏಕೆಂದರೆ ಹಲವು ಬಾರಿ ವಾಶಿಂಗ್ಟನ್ನಿನ ಶ್ವೇತ ಭವನದಲ್ಲಿ ಗೌರವಾನ್ವಿತ ಅತಿಥಿಯಾಗಿದ್ದಾತ, ಅಂಗೋಲ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಸಿಐಎ ಕ್ರಾಂತಿಕಾರಿ ಚಟುವಟಿಕೆಗಳ ವಿರುದ್ಧ ನಡೆಸುತ್ತಿದ್ದ ಗುಪ್ತ ಪ್ರತಿಕ್ರಿಯೆಗಳಲ್ಲಿ ಸಾಮ್ರಾಜ್ಯಶಾಹಿಯ ಏಜೆಂಟನಂತೆ ವರ್ತಿಸುತ್ತಿದ್ದ ವ್ಯಕ್ತಿಯಾತ.

ಈ ಶತಮಾನದ ಅಂತ್ಯದ ವೇಳೆಗೆ ತಮ್ಮ ಕೈಗಳಲ್ಲಿ ಕೇಂದ್ರೀಕೃತವಾಗಿರುವ ಅಪಾರ ಶಕ್ತಿಯಿಂದಾಗಿ ಸಾಮ್ರಾಜ್ಯಶಾಹಿ ದೇಶಗಳು ಅಂತರ್ರಾಷ್ಟ್ರೀಯ ರಂಗದಲ್ಲಿ ಬಹಿರಂಗವಾಗಿಯೇ ಗೋಸುಂಬೆತನವನ್ನು, ಇಬ್ಬಂದಿತನವನ್ನು ಪ್ರದರ್ಶಿಸುತ್ತಿವೆ. ತಮ್ಮ ಮರ್ಜಿಗನುಗುಣವಾಗಿ ವಸಾಹತುಶಾಹಿ ಅಂತ್ಯಗೊಂಡ ಇತಿಹಾಸವನ್ನು ಬರೆಯಬಹುದು ಎಂಬ ವಿಶ್ವಾಸ ಅವರಿಗೆ ಬಂದಿದೆ. ಆದರೆ ಹಾಂಕಾಂಗ್ ಮತ್ತೆ ಚೀಣಾಕ್ಕೆ ಮರಳಿರುವುದು ತಮ್ಮ ಈ ಶಕ್ತಿಗೂ ಮಿತಿಗಳಿವೆ ಎಂಬುದನ್ನೂ ಅವರಿಗೆ ನೆನಪಿಸಿಕೊಟ್ಟಿದೆ □

ಬಂದೂಕಿನ ಬಲದಿಂದ ಅಫೀಮನ್ನು ಚೀಣಾದಲ್ಲಿ ಸುರಿದು ಚೀಣಾದ ಜನತೆಯ ಸಂಕಷ್ಟಗಳಿಂದ ಲಾಭ ದೋಚಿಕೊಂಡ ಬ್ರಿಟನ್ ಮತ್ತು ಇತರ ವಸಾಹತುಶಾಹೀ ಶಕ್ತಿಗಳು ಈಗ ಚೀಣಾಕ್ಕೆ "ಮಾನವ ಹಕ್ಕು"ಗಳ ಬಗ್ಗೆ ಉಪದೇಶ ಕೊಡಲು ಮುಂದಾಗುತ್ತಿರುವ ಭಂಡತನ ನಿಜಕ್ಕೂ ಉಸಿರು ಗಟ್ಟಿಸುವಂತದ್ದು.

ಇತ್ತೀಚಿನವರೆಗೂ ಅಮೇರಿಕಾ ಮತ್ತಿತರ ಪಾಶ್ಚಾತ್ಯ ಶಕ್ತಿಗಳು ಬೆಂಬಲಿಸುತ್ತಿದ್ದ ಕಾಂಬೋಡಿಯಾದ ಮಾಜಿ ಹುಚ್ಚು ಆಡಳಿತಗಾರ ಪೋಲ್‌ಪೋಟ್ ಕೊನೆಗೂ ಸಿಕ್ಕಿ ಬಿದ್ದ ಮೇಲೆ ಈಗ ಆತನ ಅಪರಾಧಗಳ ವಿಚಾರಣೆಗೆ ಅಂತರ್ರಾಷ್ಟ್ರೀಯ ನ್ಯಾಯ ಮಂಡಳಿ ರಚಿಸಬೇಕೆಂದು ಕರೆ ನೀಡಿದೆ. ಆದರೆ ಮೂರು ದಶಕಗಳ ಕಾಲ ಕಾಂಗೋದ ಜನತೆಗೆ ನರಕಯಾತನೆ ನೀಡಿ ಈಗ ಕೊನೆಗೂ ಪತನ ಹೊಂದಿರುವ ಮೊಬುಟುನ ದುಷ್ಕೃತ್ಯಗಳ ಬಗ್ಗೆ ಇಂತಹುದೇ ವಿಚಾರಣೆಗೆ ಅದು ಕರೆ ನೀಡುವುದಿಲ್ಲ. ಈ ಎರಡು ಸರ್ವಾಧಿಕಾರಿಗಳ ಆಳ್ವಿಕೆ ನಡೆಯುತ್ತಿದ್ದಾಗ ನೆನಪಾಗದ ಪ್ರಜಾಪ್ರಭುತ್ವ ಹಕ್ಕುಗಳು, ಮಾನವ ಹಕ್ಕುಗಳು ಈಗ ಹಾಂಕಾಂಗ್ ಚೀಣಾಕ್ಕೆ ಮರಳುತ್ತಿರುವಾಗ ಮಾತ್ರವೇ ಏಕೆ ನೆನಪಾಗುತ್ತಿದೆ?

ಕರ್ನಾಟಕ ಸರಕಾರ ನೀಡಿದ ವಿದ್ಯುತಾಘಾತ

ಕರ್ನಾಟಕ ಸರಕಾರ ಹಿಂದೆ ಹೇಳಿದಂತೆ ವಿದ್ಯುತಾಘಾತ ನೀಡಿದೆ. ಜುಲೈ ಒಂದರಿಂದ ವಿದ್ಯುತ್ತಿನ ದರವನ್ನು ಶೇ. 10ರಿಂದ ಶೇ. 15ರಷ್ಟು ಹೆಚ್ಚಿಸುವ ತೀರ್ಮಾನವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ತೆಗೆದುಕೊಂಡು ಅದನ್ನು ಘೋಷಿಸಿದೆ. ಒಂದೇ ವ್ಯತ್ಯಾಸವೆಂದರೆ ಹಿಂದೆಲ್ಲಾ ಕತ್ತಲಿನ ಜೊತೆಗೆ ನೀಡುತ್ತಿದ್ದ ಈ ಶಾಕನ್ನು ಈ ಸಾರಿ ಬೆಳಕಿನಲ್ಲಿ ನೀಡಲಾಗಿದೆ. ಅಂದರೆ ವಿದ್ಯುತ್ ಕಡಿತವನ್ನು ಬಹುತೇಕ ಕಡೆ ತೆಗೆದು ಹಾಕಿ ಬಳಕೆದಾರರಿಗೆ ಈ ಶಾಕ್ ನೀಡಲಾಗಿದೆ.

ಈ ಕ್ರಮದಿಂದ ಕ.ವಿ. ಮಂಡಳಿಗೆ ಸುಮಾರು 300 ಕೋಟಿರೂಗಳಷ್ಟು ಹೆಚ್ಚು ವರಮಾನ ಬರುತ್ತದಂತೆ. ಈ ಬೆಲೆ ಏರಿಕೆ ಎಲ್ಲಾ ತರಹದ ಬಳಕೆದಾರರಿಗೆ ಅಂದರೆ ನೀರಾವರಿ, ಕೃಷಿ, ನೀರು ಸರಬರಾಜು, ಒಳಚರಂಡಿ ಮತ್ತು ತೋಟಗಳ ಬಳಕೆದಾರರಿಗೆ ಅನ್ವಯಿಸುತ್ತದೆ.

ನೀರಾವರಿ ಪಂಪ್‌ಸೆಟ್‌ಗಳ ಮೇಲಿನ ದರವನ್ನು ಈಗಿನ ವರ್ಷಕ್ಕೆ ಹೆಚ್.ಪಿ.ಯೊಂದಕ್ಕೆ ಒಂದು ನೂರು ರೂಗಳಿಂದ ಮನ್ನೂರು ರೂಗಳಿಗೆ ಏರಿಸಲಾಗಿದೆ.

ಈ ಬೆಲೆ ಏರಿಕೆಗೆ ವ್ಯಾಪಕ ವಿರೋಧ ಕಂಡು ಬಂದಿದೆ.

ವಿಶ್ವ ಬ್ಯಾಂಕ್/ಐಎಂಎಫ್ ಹೇರಿಕೆಯ ಉದಾರೀಕರಣ ಬಂದ ಮೇಲೆ ವಿದ್ಯುತ್ ನಿಗಮಗಳು ಹೆಚ್ಚಿನ ದರ ವಿಧಿಸಬೇಕು, ವಿದ್ಯುತ್ತಿಗೆ ಸಹಾಯಧನ ನೀಡಬಾರದು ಎಂಬ ಶರತ್ತನ್ನು ಅವು ಹೇರಿವೆ. ವಿಶ್ವ ಬ್ಯಾಂಕಿನ ಸಾಲದ ಪ್ರತಿ ಕಂತಿನ ಜೊತೆಗೂ ಷರತ್ತುಗಳು ಬರುತ್ತವೆ. ಈಗ ಈ ಷರತ್ತುಗಳ ಪರಿಣಾಮವೇ ಈ ಬೆಲೆ ಏರಿಕೆ.

ಕರ್ನಾಟಕದ ಜನತಾದಳದ ಸರಕಾರ ತಾನು ಕಾಂಗ್ರೆಸ್ಸಿಗಿಂತ ಭಿನ್ನ ಎಂದು ಹೇಳುವಾಗ ಜನತೆಯ ಹಿತರಕ್ಷಣೆ ಮಾಡುವ ಸಾಹಸವನ್ನು ಖಂಡಿತ ತೋರಬಹುದಾಗಿತ್ತು. ಆದರೆ ಅದು ತಾನು ಪೂರ್ತಿಯಾಗಿ ಜನವಿರೋಧಿ ಎಂದು ತೋರಿಸಿಕೊಂಡಿದೆ.

ಈ ಬೆಲೆಯೇರಿಕೆಯಿಂದಾಗಿ ಸಾಮಾನ್ಯವಾಗಿ ಎಲ್ಲಾ ವಸ್ತುಗಳ ಬೆಲೆ ಏರುತ್ತದೆ.

ಕರ್ನಾಟಕ ಸರಕಾರ ರಾಜ್ಯದ ಜನತೆಯ ಪ್ರತಿರೋಧವನ್ನು ಎದುರಿಸಲೇ ಬೇಕಾಗುತ್ತದೆ. ಅಲ್ಲವೇ?

ಭಾರತದ ಕತ್ತು ಕೊಯ್ಯುವ ಅಮೇರಿಕ

ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿ ಕೇಂದ್ರದ ಅಂದಿನ ಕಾಂಗ್ರೆಸ್ ಸರಕಾರ ಶೌರ್ಯದ ಪೋಸು ನೀಡಿತ್ತು. ಈಗ ಈ ಒಪ್ಪಂದದ ಪರಿಣಾಮಗಳನ್ನು ದೇಶದ ಜನತೆ ಅನುಭವಿಸಬೇಕಾದ ದಿನಗಳು ಬರತೊಡಗಿವೆ.

ವಿಶ್ವ ವ್ಯಾಪಾರ ಸಂಸ್ಥೆ(ಗ್ಯಾಟ್‌ನ ಹೊಸ ಹೆಸರು) ಈಗ ಭಾರತ ತನ್ನ ಆಮದಿನ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕಬೇಕೆಂದು ಒತ್ತಡ ಹೇರುತ್ತಿದೆ. ವಿಶ್ವ ವ್ಯಾಪಾರ ಸಂಸ್ಥೆಯೇ ಈ ಒತ್ತಡ ಹೇರುತ್ತಿಲ್ಲ. ಬದಲಿಗೆ ಸಾಮ್ರಾಜ್ಯಶಾಹಿ ದೇಶಗಳು ಈ ಒತ್ತಡ ಹೇರುತ್ತಿವೆ. ವಿಶ್ವ ವ್ಯಾಪಾರ ಸಂಸ್ಥೆ ಈ ವಿಷಯದಲ್ಲಿ ನ್ಯಾಯಗಾರ. ಅಮೇರಿಕ ಈ ಸಾಮ್ರಾಜ್ಯಶಾಹಿ ದೇಶಗಳಿಗೆ ನೇತೃತ್ವ ನೀಡುತ್ತಿರುವುದೇ ಅಲ್ಲದೆ ತಾನೂ ತೀವ್ರ ಒತ್ತಡ ಹೇರುತ್ತಿದೆ. ಪ್ರಮಾಣಾತ್ಮಕ ನಿರ್ಬಂಧಗಳನ್ನು ಅಂದರೆ ಆಮದಿನ ಪ್ರಮಾಣದ ಮೇಲಿರುವ ನಿರ್ಬಂಧವನ್ನು ಹಂತ ಹಂತವಾಗಿ ಒಂಭತ್ತು ವರ್ಷಗಳಲ್ಲಿ ತೆಗೆದುಹಾಕುವ ಪ್ರಸ್ತಾಪವನ್ನು ಭಾರತ ಮುಂದುವರಿಸಿತ್ತು. ಆದರೆ ಈ ದೇಶಗಳು ಒಪ್ಪಲಿಲ್ಲ. ನಂತರ ಭಾರತ ಇದೇ ಪ್ರಸ್ತಾಪವನ್ನು ಮಾರ್ಪಡಿಸಿ ಏಳು ವರ್ಷಗಳಲ್ಲಿ ನಿರ್ಬಂಧಗಳನ್ನು ತೆಗೆದು ಹಾಕುವ ಪ್ರಸ್ತಾಪವನ್ನು ಮುಂದುವರಿಸಿತ್ತು. ಇದನ್ನು ಈಗ ತಿರಸ್ಕರಿಸಲಾಗಿದೆ. ಇದರಲ್ಲಿ ಅಮೇರಿಕವೇ ಮಹತ್ತರ ಪಾತ್ರ ವಹಿಸಿದೆ.

ವ್ಯಾಪಾರ ಬಾಕಿಯ ಸಮಸ್ಯೆ ಇರುವ ಅಭಿವೃದ್ಧಿಶೀಲ ದೇಶಗಳಿಗೆ ನೀಡುವ ಈ ಅನುಕೂಲವನ್ನು ಭಾರತಕ್ಕೆ ನೀಡುವ ಅವಶ್ಯಕತೆಯಿಲ್ಲ ಎಂದು ಅಮೇರಿಕ ವಾದಿಸುತ್ತಿದೆ. ಆದ್ದರಿಂದಲೇ ಭಾರತದ ಪ್ರಸ್ತಾಪವನ್ನು ತಿರಸ್ಕರಿಸುವಲ್ಲಿ ಅಮೇರಿಕ ಪ್ರಮುಖ ಪಾತ್ರ ವಹಿಸಿದ್ದು ಯುರೋಪಿನ ಕೆಲ ದೇಶಗಳು ಮತ್ತು ಜಪಾನ್ ಅಲ್ಪಸ್ವಲ್ಪ ರಿಯಾಯಿತಿ ತೋರಿಸಲು ತಯಾರಾಗಿದ್ದರೂ ಅಮೇರಿಕ ಶುರುವಿನಿಂದಲೇ ಬಿಗಿ ನಿಲುವು ತಳೆದಿತ್ತು.

ಒಟ್ಟಾರೆಯಾಗಿ ಭಾರತಕ್ಕೆ ಈ ಷರತ್ತುಗಳನ್ನು ಒಪ್ಪಿಕೊಳ್ಳದೇ ಬೇರೆ ಗತ್ಯಂತರವೇ ಇಲ್ಲದಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡಲಾಗುತ್ತಿದೆ. ಹಾಗೆ ಮಾಡದೆ ಬೇರೆ ದಾರಿಯೇ ಇಲ್ಲವೆಂದಲ್ಲ. ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವಾಗಲೂ ಬೇರೆ ದಾರಿಗಳಿದ್ದವು. ಆದರೆ ನಮ್ಮ ಸರಕಾರಕ್ಕೆ ಸರಿಯಾದ ರೀತಿಯಲ್ಲಿ ಚೌಕಾಸಿ ಮಾಡುವ ಚಾಕಚಕ್ಯತೆ ಇರಲಿಲ್ಲ. ಈಗಲೂ ಹಾಗೇ ಆಗುತ್ತಿರುವುದು.

ಬಂಡವಾಳ ಖಾತೆಯ ಪರಿವರ್ತನೀಯತೆ ಸದ್ಯದಲ್ಲೇ ಬರುವುದರ ಜೊತೆಗೆ ಈ ಆಮದಿನ ನಿರ್ಬಂಧಗಳನ್ನು ತೆಗೆದು ಹಾಕಿದರೆ ಆಗ ಭಾರತದ ಆರ್ಥಿಕ ಸಾವಿರ ತೂತುಗಳಿರುವ ದೋಣಿಯಂತಾಗುತ್ತದೆ. ಮುಳುಗುವುದೊಂದೇ ದಾರಿಯಾಗುತ್ತದೆ. ನಮ್ಮ ಕೇಂದ್ರ ಸರಕಾರ ಈಗಲಾದರೂ ಎಚ್ಚೆತ್ತುಕೊಂಡು ಸರಿಯಾದ ನಿಲುವು ತಾಳುವ ಅವಶ್ಯಕತೆಯಿದೆ. ಆದರೆ ಉದಾರೀಕರಣದ ರಾಜಕೀಯದ ಗುಲಾಮರಾಗಿರುವ ಸಂಯುಕ್ತ ರಂಗ ಸರಕಾರ ದಿಟ್ಟವಾಗಿ ನಿಲುವು ತಳೆಯುವ ಧೈರ್ಯ ತೋರುತ್ತದೆಯೇ?

ಕಡಿಮೆ ನಷ್ಟ ತೋರಿದ ಹೆಚ್.ಎಂ.ಟಿ.

ಸಾರ್ವಜನಿಕ ವಲಯದ ಹೆಚ್.ಎಂ.ಟಿ. ಮಾರ್ಚ್ 1997ಕ್ಕೆ ಕೊನೆಯಾದ ಹಣಕಾಸು ವರ್ಷದಲ್ಲಿ ಕಡಿಮೆ ನಷ್ಟ ತೋರಿದೆ. 1996ರ ಸಾಲಿಗೆ 55.89 ಕೋಟಿ ರೂಗಳ ನಷ್ಟ ತೋರಿದ್ದ ಈ ಸಾರ್ವಜನಿಕ ವಲಯದ ಉದ್ದಿಮೆ 1997ರ ಸಾಲಿಗೆ 18.78 ಕೋಟಿ ರೂ.ಗಳ ನಷ್ಟ ತೋರಿದೆ. ಮುಂದಿನ ಸಾಲಿನಲ್ಲಿ ಅದು ಲಾಭ ಹೊಂದುವ ನಿರೀಕ್ಷೆಯಲ್ಲಿದೆ.

ಬೂರ್ಜ್ವಾ-ಭೂಮಾಲಕ ವರ್ಗದ ಕೇಂದ್ರ ಸರಕಾರ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗಿ ಬಂಡವಾಳಕ್ಕೆ ಲಾಭವಾಗುವ ರೀತಿಯಲ್ಲೇ ನಡೆಸಿಕೊಂಡು ಬಂದದ್ದರಿಂದ ಈ ಸಾರ್ವಜನಿಕ ವಲಯದ ಉದ್ದಿಮೆಗಳು ಹಾನಿ ಅನುಭವಿಸಬೇಕಾಗಿ ಬಂದದ್ದು ಈಗ ಎಲ್ಲರಿಗೂ ಗೊತ್ತಿದೆ. ಹೆಚ್.ಎಂ.ಟಿ.ಯ ವಾಚು ಉದ್ದಿಮೆಯನ್ನು ಹಿಂಡಿ ಖಾಸಗಿ ವಾಚ್ ಕಂಪನಿಯೊಂದು ಲಾಭ ಮಾಡಿಕೊಂಡಿದ್ದು ಈಗ ಜಾಹೀರಾಗಿರುವ ಗುಟ್ಟು.

ಉದಾರೀಕರಣ ಹರಡಿರುವ ಅನಾನುಕೂಲಕರ ಪರಿಸ್ಥಿತಿಯಲ್ಲಿ ಈ ಸಾರ್ವಜನಿಕ ವಲಯದ ಉದ್ದಿಮೆಗಳು ಉತ್ತಮ ಪರಿಣಾಮಗಳನ್ನು ತೋರಿಸುತ್ತಿರುವುದು ಅವುಗಳ ನಿಜ ಸಾಮರ್ಥ್ಯವನ್ನು ತೋರಿಸುತ್ತದೆ.

ವಿದೇಶೀ ಐಶಾರಾಮಿಗೆ ಪರವಾನಗಿ

ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶೀ ಪ್ರವಾಸ ಮತ್ತು ವ್ಯಾಪಾರಗಳಿಗೆ ವಿದೇಶೀ ವಿನಿಮಯ ಬಿಡುಗಡೆಯನ್ನು ಹೆಚ್ಚು ಸುಲಲಿತಗೊಳಿಸಿದೆ.

ಇದರರ್ಥ ವಿದೇಶೀ ಪ್ರವಾಸ ಮತ್ತು ವ್ಯಾಪಾರದ ಹೆಸರಿನಲ್ಲಿ ದೇಶದ ಅತ್ಯಮೂಲ್ಯ ವಿದೇಶೀ ವಿನಿಮಯವನ್ನು ದೇಶದ ಶ್ರೀಮಂತರು ಕೊಳ್ಳೆ ಹೊಡೆಯಲು ಪರವಾನಗಿ ನೀಡಿದಂತಾಗಿದೆ. ಔಷಧಗಳು ಅತ್ಯಾಧುನಿಕ ತಂತ್ರಜ್ಞಾನ ಇತರೆ ಅತ್ಯಾವಶ್ಯಕ ಯಂತ್ರೋಪಕರಣ ಇತ್ಯಾದಿ ಗಳನ್ನು ಕೊಳ್ಳಲು ಬಳಕೆಯಾಗಬೇಕಾದ ವಿದೇಶೀ ವಿನಿಮಯ ಈಗ ಶ್ರೀಮಂತರ ವಿದೇಶ ಪ್ರವಾಸ, ಭೋಗಗಳಿಗಾಗಿ ಬಳಕೆಯಾಗುತ್ತಿದೆ. ಇದಕ್ಕೇ ಉದಾರೀಕರಣವೆಂದು ಹೆಸರಲ್ಲವೇ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಏರುತ್ತಿರುವ ಶೇರು ಸೂಚ್ಯಂಕ

ಈಗ ಶೇರು ಸೂಚ್ಯಂಕ ಏರತೊಡಗಿದೆ. ಕಳೆದ ವಾರದಲ್ಲಿ ಒಂದು ವರ್ಷದಲ್ಲಿ ಅತಿ ಹೆಚ್ಚು ಅಂಕವಾದ 425ಕ್ಕೆ ಏರಿದ ಶೇರು ಬೆಲೆ ಸೂಚ್ಯಂಕ ಯಾಕೆ ಹೀಗೆ ವರ್ತಿಸತೊಡಗಿದೆ ಎಂಬುದು ಯಾರಿಗೂ ಸ್ಪಷ್ಟವಾಗಿ ಗೊತ್ತಿಲ್ಲ. ವಿದೇಶೀ ಸಾಂಸ್ಥಿಕ ಹೂಡಿಕೆದಾರರು ಸತತವಾಗಿ ಶೇರುಗಳನ್ನು ಕೊಳ್ಳತೊಡಗಿರುವುದರಿಂದ ಈ ಹೆಚ್ಚಳ ಆಗಿದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ಏನೇ ಇರಲಿ ಇದು ಆರ್ಥಿಕ ಬೆಳವಣಿಗೆಯ ಅಥವಾ ಆರ್ಥಿಕದಲ್ಲಿ ಇರುವ ಒಳ್ಳೆಯ ಪರಿಸ್ಥಿತಿಯ ಸೂಚನೆಯಂತೂ ಅಲ್ಲ. ಯಾಕೆಂದರೆ ಕಂಪನಿಗಳ ಲಾಭ ಕಳೆದ ವರ್ಷದಲ್ಲಿ ಕಡಿಮೆಯಾಗಿದೆ. ಔದ್ಯಮಿಕ ಬೆಳವಣಿಗೆಯ ದರವೂ ಕಡಿಮೆಯಾಗಿದೆ. ಅದರೂ ಶೇರುಗಳ ಬೆಲೆಗಳು ಏರುತ್ತಿವೆ ಎಂದರೆ ಈ ಶೇರು ಸೂಚ್ಯಂಕದ ಗುಣ ಅರ್ಥವಾಗಬಹುದು.

ಹಿಂದೆ ಶೇರುಗಳ ಬೆಲೆ ಹೀಗೆ ಏರುತ್ತಲೇ ಹೋಗಿ ಶೇರು ಹಗರಣದಲ್ಲಿ ಮುಕ್ತಾಯವಾದದ್ದು ನೆನಪಿದೆಯೇ? ಈಗಲೂ ಇಂತಹ ಹಗರಣ ಗರ್ಭದೊಳಗಿಲ್ಲ ಎಂದು ಆಶಿಸೋಣವೇ?

ಪಶ್ಚಿಮ ಬಂಗಾಳದಲ್ಲೂ 'ಹಣಕಾಸು ಅಶಿಸ್ತು' ಇದೆಯೇ?

ಕಾಂಗ್ರೆಸ್(ಐ) ಮತ್ತು ಬಿಜೆಪಿಯ ಬೊಬ್ಬೆಯ ಹಿಂದಿರುವ ಸತ್ಯ ಮತ್ತು ಮಿಥ್ಯೆಯ ಬಗ್ಗೆ ನಿಲೋತ್ಪಲ ಬಸುರವರ ಲೇಖನ

ಈಗಿನ ರಾಜಕೀಯ ಸನ್ನಿವೇಶದಲ್ಲಿ ಒಂದು ಸ್ಪಷ್ಟ ಮತ್ತು ಮುಚ್ಚುಮರೆಯಿಲ್ಲದ ಪಾರದರ್ಶಕ ಆಡಳಿತ, ಸಾರ್ವಜನಿಕ ಜೀವನದಲ್ಲಿ ಶುಚಿತ್ವ ಬಹಳ ಮಹತ್ವಪೂರ್ಣ ಸಂಗತಿಗಳಾಗುತ್ತಿವೆ. ಸಿಬಿಐ ಮತ್ತಿತರ ಸಂಸ್ಥೆಗಳು ಉನ್ನತ ರಾಜಕಾರಣಿಗಳ ಬಗ್ಗೆ ಮಾಡಿರುವ ತನಿಖೆಗಳು, ಅವುಗಳ ಆಧಾರದಲ್ಲಿ ಕೋರ್ಟುಗಳಲ್ಲಿ ವಿಚಾರಣೆಗಳು ಇವೆಲ್ಲಾ ಹಲವು ಪ್ರಭಾವೀ ವ್ಯಕ್ತಿಗಳನ್ನು ಕಟಕಟೆಯಲ್ಲಿ ತಂದು ನಿಲ್ಲಿಸಿವೆ. ಇದರಿಂದ ಬಹಳ ಜನಕ್ಕೆ ಮುಜುಗರವಾಗುತ್ತಿದೆ. ಹೆಚ್ಚಿನ ರಾಜಕೀಯ ಶಕ್ತಿಗಳು ಈ ಕಳಂಕ ಹಚ್ಚಿಕೊಂಡು ದೇಶದಲ್ಲಿ ನೈತಿಕ ಬಿಕ್ಕಟ್ಟನ್ನೇ ಸೃಷ್ಟಿಸುವ ಸಂದರ್ಭದಲ್ಲಿ ಎಡಶಕ್ತಿಗಳು ಮಾತ್ರ ಕಳಂಕರಹಿತವಾಗಿ ಕಾಣುತ್ತಿರುವುದು ಅದರಿಂದ ದೇಶದ ರಾಜಕೀಯದಲ್ಲಿ ಅವರ ಪ್ರತಿಷ್ಠೆ ಹೆಚ್ಚಿರುವುದು ಹಲವರ ಕಣ್ಣು ಕುಕ್ಕುತ್ತಿದೆ. ಸಹಜವಾಗಿಯೇ ಎಡಶಕ್ತಿಗಳ ಮೇಲೆ ಕೆಸರೆರಚುವ ಪ್ರಯತ್ನದಲ್ಲಿ ಅವರಿಗೆ ಮೊದಲು ಕಾಣುವುದು 20 ವರ್ಷಗಳ ಕಾಲ ನಿರಂತರ ಜನಗಳ ವಿಶ್ವಾಸ ಪಡೆದು ಬಲಿಷ್ಠಗೊಂಡಿರುವ ಪಶ್ಚಿಮಬಂಗಾಳದ ಎಡರಂಗದ ಸರ್ಕಾರ.

ಕಳೆದ ಕೆಲವು ವಾರಗಳಲ್ಲಿ ಎಡರಂಗ ಸರಕಾರ ಒಂದು ಪ್ರಮುಖ ಹಣಕಾಸು ಅನಿಯಮಿತತೆಯಲ್ಲಿ ಸಿಲುಕಿಕೊಂಡಿದೆ ಎಂಬ ಅಪಪ್ರಚಾರ ನಡೆಯುತ್ತಿದೆ. ಬಂಗಾಳದ ಒಂದು ಪ್ರಮುಖ ದೈನಿಕ ಈ ಅಪಪ್ರಚಾರವನ್ನು ಆರಂಭಿಸಿತು.

ಅದು ಮಾಡಿರುವ ಆಪಾದನೆಗಳೇನು?

ಭಾರತ ಸರ್ಕಾರ ನಿರ್ದಿಷ್ಟ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದ ಹಣವನ್ನು ವಿಭಿನ್ನ ಪಂಚಾಯತುಗಳು ತೆರೆದ ವೈಯುಕ್ತಿಕ ಲೆಡ್ಜರ್ ಖಾತೆ (ಪಿಎಲ್‌ಎ) ಗಳಿಗೆ ರಾಜ್ಯ ಸರಕಾರ ನಿಯಮ ಬಾಹಿರವಾಗಿ ಹಾಕುತ್ತಿದೆ, ಇದಕ್ಕೆ ಮಹಾಲೆಕ್ಕ ಪರಿಶೋಧಕ(ಸಿಎಜಿ) ಅನುಮತಿ ಪಡೆದಿಲ್ಲ, ಇದರಿಂದಾಗಿ ಪಂಚಾಯತುಗಳು ಲೆಕ್ಕ ತೋರಿಸದೆ ಖರ್ಚು ಮಾಡಲು ಅವಕಾಶವಾಗಿದೆ ಹಾಗೂ ರಾಜ್ಯದ ಖಜಾನೆ(ಟ್ರೆಝರಿ) ಲೆಕ್ಕಾಚಾರದಲ್ಲಿ ವ್ಯತ್ಯಯವಾಗಿದೆ ಎಂಬುದು ಅವರ ಆರೋಪ. ಒಟ್ಟಿನಲ್ಲಿ ಎಡರಂಗ ಸರಕಾರ ಹಣಕಾಸು ವ್ಯವಹಾರದಲ್ಲಿ ಏನೋ ಗೋಲ್‌ಮಾಲ್ ಮಾಡಿದೆ ಎಂಬುದು ಅವರು ಹೇಳಬಯಸುವ ಸಂಗತಿ. ತಮ್ಮ ಆರೋಪಕ್ಕೆ ಬೆಂಬಲವಾಗಿ ಅದು ಮಹಾಲೆಕ್ಕ ಪರಿಶೋಧಕರ ಕೆಲವು ಮಧ್ಯಂತರ ವರದಿಗಳನ್ನು ವಿಕೃತವಾಗಿ ಉದ್ಧರಿಸಿದೆ.

ಸಹಜವಾಗಿಯೇ ಪಶ್ಚಿಮ ಬಂಗಾಳದ ಕಾಂಗ್ರೆಸ್ ಮುಖಂಡರು ಅದರಲ್ಲೂ ಮುಖ್ಯವಾಗಿ 'ಬೊಬ್ಬೆಟ ಪಡೆ'ಗಳವರು ಇದರ ಆಧಾರದ ಮೇಲೆ ವಿಧಾನ ಸಭೆಯಲ್ಲಿ ಗಲಭೆ ಎಬ್ಬಿಸಿದರು. ಸತ್ಯ ಏನೆಂದು ತಿಳಿದುಕೊಳ್ಳುವುದು ಅವರಿಗೆ ಬೇಕಾಗಿಯೂ ಇಲ್ಲ. ಪಶ್ಚಿಮ ಬಂಗಾಳದಲ್ಲಿಯೂ ಬೇರೆಕಡೆಗಳಂತೆ ಹಗರಣಗಳು ನಡೆಯುತ್ತವೆ ಎಂದು ಬಿಂಬಿಸುವುದಷ್ಟೇ ಅವರ ಉದ್ದೇಶ. ಆದ್ದರಿಂದ ಸಿಬಿಐ ತನಿಖೆ ನಡೆಯಬೇಕೆಂದು ಅವರು ಒತ್ತಾಯಿಸಿದರು. (ಆದರೆ ಕಲ್ಕತ್ತ ಹೈಕೋರ್ಟ್‌ನಲ್ಲಿ ಮಮತಾಬ್ಯಾನರ್ಜಿ ಪರವಾಗಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದ ವಕೀಲರು ಸಿಬಿಐ ತನಿಖೆಯ ಪ್ರಸ್ತಾಪವನ್ನೂ ಮಾಡಲಿಲ್ಲ, ಹೈಕೋರ್ಟ್ ಅವರು ಬಯಸಿದಂತೆ ಮಧ್ಯಂತರ ಆದೇಶ ನೀಡಲು ನಿರಾಕರಿಸಿತು. ಬಿಜೆಪಿ ಕೂಡಾ ಇದರಲ್ಲಿ ಹಿಂದೆ ಬೀಳಲು ಹೇಗೆ ಸಾಧ್ಯ? ಅವರರಾಷ್ಟ್ರೀಯ ವಕ್ತಾರ ಹಿಂದೆ-ಮುಂದೆ ನೋಡದೆ ಇದು ಬಿಹಾರದಲ್ಲಿ ನಡೆದಿರುವುದಕ್ಕಿಂತಲೂ ದೊಡ್ಡ ಪ್ರಮಾಣದ ಹಗರಣ ಎಂದು ಹಾರಾಡಿದರು.

ಆದರೆ ರಾಜ್ಯದ ಪ್ರಮುಖ ಅಕೌಂಟೆಂಟ್ ಜನರಲ್ ಪತ್ರಿಕಾ ವರದಿಗಳಿಗೆ ಪ್ರತಿಕ್ರಿಯಿಸುತ್ತಾ ಆ ವರದಿಗಳಲ್ಲಿ ಹೇಳಿರುವ ದಸ್ತಾವೇಜುಗಳು ತನ್ನ ಬಳಿಯಂತೂ ಇಲ್ಲ ಎಂದರೂ ಇವರಬೊಬ್ಬಾಟ ನಿಲ್ಲಲಿಲ್ಲ. ಏಕೆಂದರೆ ಸತ್ಯ ಅವರಿಗೆ ಬೇಕಾಗಿಯೂ ಇಲ್ಲ. ಹಣಕಾಸು ಮಂತ್ರಿ ಅಸೀಮ್ ದಾಸ್ ಗುಪ್ತಾ ಜೂನ್ 10 ರಂದು ವಿಧಾನ ಸಭೆಯಲ್ಲಿ ವಿವರವಾದ ಸ್ಪಷ್ಟನೆ ನೀಡಿದ ಮೇಲೂ ಕಾಂಗ್ರೆಸ್, ಬಿಜೆಪಿಗಳ ಒದರಾಟ ನಿಂತಿಲ್ಲ.

ಹಾಗಿದ್ದರೆ ನಿಜಸಂಗತಿ ಏನು?

ಪಂಚಾಯತು ಸಂಸ್ಥೆಗಳ ಲೆಕ್ಕಪತ್ರಗಳ ಪರಿಶೋಧನೆ(ಆಡಿಟಿಂಗ್) ಯಾರಿಂದ ಮಾಡಿಸಬೇಕು ಎಂದು ನಿರ್ಧರಿಸುವ ಹಕ್ಕು ರಾಜ್ಯ ಸರಕಾರಕ್ಕಿದೆ. ಎಡರಂಗ ಸರ್ಕಾರ ಜಿಲ್ಲಾ ಪರಿಷತ್ತುಗಳು ಹಾಗೂ ಬ್ಲಾಕ್ ಪಂಚಾಯತುಗಳ ಲೆಕ್ಕ- ಪತ್ರಗಳನ್ನು ದೇಶದ ಮಹಾಲೆಕ್ಕ ಪರಿಶೋಧಕ(ಸಿಎಜಿ) ರಿಂದ ತಪಾಸಣೆ ನಡೆಸಬೇಕೆಂದು ನಿರ್ಧರಿಸಿರುವ ಏಕೈಕ ರಾಜ್ಯ ಸರಕಾರ ಎಂಬ ಅಂಶ ಗಮನಾರ್ಹ. ಗ್ರಾಮ ಪಂಚಾಯತುಗಳ ಲೆಕ್ಕ-ಪತ್ರಗಳನ್ನು ಮಾತ್ರವೇ ರಾಜ್ಯ ಸರಕಾರ ಸ್ವತಃ ಆಡಿಟ್ ಮಾಡುತ್ತದೆ.

ಸಿಎಜಿ ಆಡಿಟ್‌ನ ವಿಧಾನವನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಆರಂಭದಲ್ಲಿ ಸಿಎಜಿ ನೇಮಿಸಿದ ಲೆಕ್ಕಪರಿಶೋಧಕರು ಕೆಲವು ಸ್ಪಷ್ಟನೆಗಳನ್ನು ಕೇಳುತ್ತಾರೆ. ರಾಜ್ಯ ಸರಕಾರ ಅದಕ್ಕೆ ಸ್ಪಷ್ಟನೆ ನೀಡಿದ ಮೇಲೆ, ಅಥವಾ ಅಗತ್ಯ ಸರಿಪಡಿಕೆಗಳನ್ನು ಮಾಡಿದ ಮೇಲೆ ಸಿಎಜಿ ತನ್ನ ಅಂತಿಮ ವರದಿ ನೀಡುತ್ತಾರೆ. ಅದನ್ನು ವಿಧಾನ ಸಭೆಯ ಮುಂದಿಡಲಾಗುತ್ತದೆ. ವಿಧಾನ ಸಭೆ ತನ್ನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮೂಲಕ ಇದರ ಅಮೂಲಾಗ್ರ ಪರಿಶೀಲನೆ ಮಾಡಲು ಅವಕಾಶವಿದೆ. ಹೀಗಿರುವಾಗ ಆಡಿಟ್‌ಗಳ ಪ್ರಾಥಮಿಕ ವರದಿಗಳನ್ನು ತಮಗೆ ಬೇಕಾದ ಹಾಗೆ ಪತ್ರಿಕೆಗಳಿಗೆ ಪ್ರಕಟಿಸುವುದು ವಾಸ್ತವವಾಗಿ ವಿಧಾನಸಭೆಯ ಹಕ್ಕುಚ್ಯುತಿಯೂ ಆಗುತ್ತದೆ.

ಇರಲಿ, ರಾಜ್ಯದ ಹಣಕಾಸು ಮಂತ್ರಿಗಳು ವಿಧಾನಸಭೆಯಲ್ಲಿ ಸ್ಪಷ್ಟನೆ ನೀಡಿದರು. ಪಂಚಾಯತು ಫಂಡ್‌ಗಳನ್ನು ಪಿಎಲ್‌ಎ ಖಾತೆಯಲ್ಲಿ ಇಡುತ್ತಿಲ್ಲ ಲೋಕಲ್ ಫಂಡ್ ಖಾತೆ(ಎಎಫ್‌ಎ)ಗಳಲ್ಲಿ ಇಡಲಾಗುತ್ತದೆ. ಇದು ಹೊಸಕ್ರಮವೇನಲ್ಲ. ಎಡರಂಗ ಅಧಿಕಾರಕ್ಕೆ ಬರುವ ಮೊದಲೇ 1973 ರ ಪಶ್ಚಿಮ ಬಂಗಾಳ ಪಂಚಾಯತ್ ಕಾನೂನಿನಲ್ಲಿ ಹೇಳಿದ ನಿಯಮದ ಪ್ರಕಾರವೇ ಇಡುವ ಕ್ರಮ ಇದು. ಈಗ ಇಂತಹ 536 ಖಾತೆಗಳಿವೆ. ಸಿಎಜಿ ಇವು ಯಾವುದನ್ನೂ ಕಾನೂನು ಬಾಹಿರ ಎಂದಿಲ್ಲ. ಈ ಖಾತೆಗಳನ್ನು ತೆರೆಯಲು ಸಿಎಜಿ ಯ ಪೂರ್ವಾನುಮತಿಯೂ ಬೇಕಿಲ್ಲ. ಸಿಎಜಿಯ ಪರಿಶೋಧನೆಯಲ್ಲಿ ಈ ಖಾತೆಗಳ ಪರಿಶೋಧನೆಯೂ ಸೇರಿರುತ್ತದೆ. ಇನ್ನು ಆಪಾದನೆಯಲ್ಲಿರುವ ಪಿಎಲ್‌ಎ ಖಾತೆಯ ಬಗ್ಗೆ, ಆರೋಗ್ಯ ಆಸ್ಪತ್ರೆ ಇತ್ಯಾದಿಗಳಿಗೆ ಪ್ರತಿ ದಿನ ಹಣ ಬೇಕಾಗುತ್ತದೆ. ಇದನ್ನು ಟ್ರೇಜರಿಗಳ ಮೂಲಕ ಪಡೆಯುವುದು ಬಹಳ ಕಿರಿಕಿರಿಯ ಕೆಲಸವಾದ್ದರಿಂದ ಈ ಬಗ್ಗೆ ಈ ಪಿಎಲ್‌ಎ ಖಾತೆಗಳನ್ನು ತೆರೆಯಲಾಗುತ್ತದೆ. ಇಂತಹ ಒಟ್ಟು 666 ಖಾತೆಗಳಿವೆ. ಇವುಗಳಲ್ಲಿ ಹೆಚ್ಚಿನವನ್ನು ಸಿ.ಎ.ಜಿ. ಯ ಅನುಮತಿ ಪಡೆದೇ ತೆರೆಯಲಾಗಿದೆ. ಕೆಲವಕ್ಕೆ ತುರ್ತಿನ ಕಾರಣದಿಂದ ತೆರೆದ ಮೇಲೆ ಸಿಎಜಿಯ ಅನುಮೋದನೆ ಪಡೆಯಲಾಗಿದೆ. ಈ ಎಲ್ಲಾ ಖಾತೆಗಳಲ್ಲಿ ಒಟ್ಟು ಸೇರಿ ಇರುವ ಹಣ ರಾಜ್ಯದ ಬಜೆಟ್ಟಿನ 3.7% ಮಾತ್ರ. ಹೀಗಿರುವಾಗ ರಾಜ್ಯ ಸರಕಾರಿ ನೌಕರರಿಗೆ ಸಂಬಳ ನೀಡಲು ಇದನ್ನು ದುರುಪಯೋಗ ಮಾಡಲಾಗಿದೆ ಎಂಬುದ ಅರ್ಥಹೀನ. ಏಕೆಂದರೆ ಹೀಗೆ ಸಂಬಳ ನೀಡಬೇಕಾದರೆ ಬಜೆಟ್ಟಿನ 35% ತಮ್ಮ ಬೇಕಾಗುತ್ತದೆ.

ಇನ್ನು ಸಿ.ಎ.ಜಿ ಕೆಲವು ಆಕ್ಷೇಪಗಳನ್ನು ಎತ್ತಿದೆ ಎಂಬ ಆರೋಪದ ಬಗ್ಗೆ ಉತ್ತರಿಸುತ್ತಾ ಈ ಬಗ್ಗೆ ಆಮೂಲಾಗ್ರ ತನಿಖೆ ನಡೆಸಿ ಸ್ಪಷ್ಟೀಕರಣ ನೀಡಲಾಗಿದೆ ಎಂದು ಹಣಕಾಸು ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಸಿ.ಎ.ಜಿಯ ಅಂತಿಮ ವರದಿ ಬಂದ ಮೇಲೆ ಅದನ್ನು ಮೊದಲು ಸದನದಲ್ಲಿ ಮಂಡಿಸಲಾಗುವುದು. ರಾಜ್ಯದ ಹಣಕಾಸು ವ್ಯವಹಾರಗಳ ಬಗ್ಗೆ ಪರಿಶೀಲಿಸಬೇಕಾದ ವೇದಿಕೆ ಸಿ.ಎ.ಜಿ. ಮತ್ತು ನಂತರ ಸದನದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ. ಅದನ್ನು ಬಿಟ್ಟು ಸಿಬಿಐ ತನಿಖೆ ಮಾಡಬೇಕು ಎಂದೆಲ್ಲಾ ಹೇಳುವುದು ರಾಜ್ಯ ವಿಧಾನ ಮಂಡಲದ ಹಕ್ಕು-ಬಾಧ್ಯತೆಗಳನ್ನು ಬುಡಮೇಲು ಮಾಡುವ ಸಂಗತಿ.

ಹೀಗಿದ್ದರೂ ಕಾಂಗ್ರೆಸ್, ಬಿಜೆಪಿಗಳ, ಅವರ ಬೆಂಬಲಿಗರ ಬೊಬ್ಬಾಟ ಏಕೆ ನಿಂತಿಲ್ಲ?

ಸದ್ಯದಲ್ಲೇ ಹಳ್ಳಿ ಪಂಚಾಯತು ಚುನಾವಣೆಗಳು ನಡೆಯಬೇಕಾಗಿದೆ. ಇದರ ಮೇಲೆ ಕಣ್ಣಿಟ್ಟೇ ಈ ವಿಷಕಾರುವ ಅಪಪ್ರಚಾರ ಎಂದು ಬೇರೆ ಹೇಳಬೇಕಾಗಿಲ್ಲ. ಪಶ್ಚಿಮ ಬಂಗಾಳದ ಜನತೆಯ ಹಿತಾಸಕ್ತಿ ಕಾಪಾಡಲು ಒಂದು ಜವಾಬುದಾರಿಯಾದ ಹಾಗೂ ಮುಚ್ಚುಮರೆ ಮಾಡದ ಪಾರದರ್ಶಕ ಆಡಳಿತದ ಬಗ್ಗೆ ಮುತುವರ್ಜಿಯಂತೂ [illegible]

ದೇಶದೊಳಗೆ



ಕೇರಳ: 5 ಡಿವೈಎಫ್ಐ ಕಾರ್ಯಕರ್ತರ ಹತ್ಯೆಯ ಹೊಣೆಗಾರ ರಾಘವನ್ ಬಂಧನ

ಕೇರಳದ ಮಾಜಿ ಮಂತ್ರಿ ಹಾಗೂ ಕಮ್ಯುನಿಸ್ಟ್ ಮಾರ್ಕ್ಸಿಸ್ಟ್ ಪಕ್ಷದ(ಸಿಎಂಪಿ) ನಾಯಕ ಎಂ.ವಿ.ರಾಘವನ್‌ರನ್ನು ಜುಲೈ ನಾಲ್ಕರಂದು ಪೋಲೀಸರು ಬಂಧಿಸಿದರು. ಮಾಜಿ ಡಿವೈಎಸ್‌ಪಿ ಅಬ್ದುಲ್ ಹಕೀಂ ಬತೇರಿ ಮತ್ತು ಮಾಜಿ ಉಪ ಜಿಲ್ಲಾಧಿಕಾರಿ ಸಿ.ಪಿ.ಆಂತೋಣಿ ಅವರನ್ನು ಕೂಡ ಬಂಧಿಸಲಾಗಿದೆ.

ಪೋಲೀಸ್ ಗೋಲಿಬಾರಿನಲ್ಲಿ ಐವರು ಡಿವೈಎಫ್ಐ ಕಾರ್ಯಕರ್ತರು ಮೃತಪಟ್ಟ ಪ್ರಕರಣದ ಸಂಬಂಧದಲ್ಲಿ ಇವರನ್ನು ಬಂಧಿಸಲಾಯಿತು. ಈ ಮೂರು ಜನರನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿದೆ.

1994 ರ ನವೆಂಬರ್‌ನಲ್ಲಿ ಕೇರಳದ ಕೂತುಪರಂಬದಲ್ಲಿ ನಡೆದ ಗೋಲಿಬಾರಿನಲ್ಲಿ ಡಿವೈಎಫ್ಐನ ಐದು ಕಾರ್ಯಕರ್ತರು ಬಲಿಯಾಗಿದ್ದರು. ಈ ಪೋಲೀಸ್ ದೌರ್ಜನ್ಯಕ್ಕೆ ಪ್ರೇರಣೆಯಾದ ಘಟನೆಗಳಿಗೆ ರಾಘವನ್‌ರೇ ಕಾರಣರು ಎಂದು ಪೋಲೀಸ್ ವರದಿಯಲ್ಲಿ ಹೇಳಲಾಗಿದೆ.

ಗೋಲಿಬಾರ್ ಪ್ರಕರಣದ ಬಗ್ಗೆ ಪದ್ಮನಾಭನ್ ನಾಯರ್ ಆಯೋಗ ತನ್ನ ತನಿಖೆಯನ್ನು ಪೂರ್ಣಗೊಳಿಸಿದ ಬೆನ್ನಲ್ಲೆ ರಾಘವನ್ ಮತ್ತಿತರರನ್ನು ಪೋಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಯಿತು.

ಚಳುವಳಿ, ಹಿನ್ನೆಲೆ

1994 ರಲ್ಲಿ ಆಗ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರದಲ್ಲಿ ಮಂತ್ರಿಯಾಗಿದ್ದ ರಾಘವನ್‌ರ ವಿರುದ್ಧ ಡಿವೈಎಫ್ಐ ಚಳುವಳಿ ನಡೆಸುತ್ತಿತ್ತು. ಸಾರ್ವಜನಿಕ ಸಭೆ ಯೊಂದಕ್ಕೆ ಹೋಗಲು ಮಂತ್ರಿಗೆ ಬಿಡದೆ ರಸ್ತೆ ತಡೆ ಒಡ್ಡಿದ ಕಾರ್ಯಕರ್ತರ ಮೇಲೆ ಪೋಲೀಸರು ಗುಂಡು ಹಾರಿಸಿದ್ದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಐದು ಕಾರ್ಯಕರ್ತರ ಸಾವಿಗೆ ಕಾರಣವಾದ ಗೋಲಿಬಾರಿಗೆ ರಾಘವನ್‌ರೇ ಹೊಣೆಯೆಂದು ಪದ್ಮನಾಭನ್ ನಾಯರ್ ಆಯೋಗ ತನ್ನ ವರದಿಯಲ್ಲಿ ತಿಳಿಸಿದೆ.

ಸಿಪಿಐ(ಎಂ) ಕಣ್ಣೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಇ.ಪಿ.ಜಯರಾಜನ್ ಅವರ ಹತ್ಯೆ ಯತ್ನ ಪ್ರಕರಣದಲ್ಲಿ ಕೂಡ ರಾಘವನ್ ವಿರುದ್ಧ ಆರೋಪವಿದೆ.

ಬಂಧನ ಸ್ವಾಗತಕ್ಕೆ ಬಹಿರಂಗ ಸಭೆ

ಬಂಧಿತರನ್ನು ಜುಲೈ 5 ರಂದು ಕೂತು ಪರಂಬದಲ್ಲಿ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ್ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಬಂಧಿತರನ್ನು ಪೋಲೀಸ್ ಜೀಪಿನಲ್ಲಿ ಕರೆತಂದಾಗ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಡಿವೈಎಫ್ಐ ಕಾರ್ಯಕರ್ತರು ಬಂಧನವನ್ನು ಸ್ವಾಗತಿಸಿದರು.

ಗೋಲಿಬಾರ್ ಪ್ರಕರಣದ ಆರೋಪಿಗಳನ್ನು ಬಂಧಿಸಿರುವುದನ್ನು ಸ್ವಾಗತಿಸಲು ನ್ಯಾಯಾಲಯದ ಸಮೀಪದ ಒಂದು ಸ್ಥಳದಲ್ಲಿ ಡಿವೈಎಫ್ಐ ಸಾರ್ವಜನಿಕ ಸಭೆಯನ್ನು ಏರ್ಪಡಿಸಿತ್ತು.

ಅಸ್ಸಾಂನಲ್ಲಿ ಎ.ಜಿ.ಪಿ. ಕೂಟಕ್ಕೆ ಭಾರೀ ಜಯ

ಅಸ್ಸಾಂನಲ್ಲಿ ಜೂನ್ 16 ರಂದು ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಆಳುವ ಅಸ್ಸಾಂ ಗಣಸಂಗ್ರಾಮ ಪರಿಷತ್(ಎಜಿಪಿ) ಮತ್ತು ಅದರ ಮಿತ್ರ ಪಕ್ಷಗಳು ಭಾರೀ ಜಯವನ್ನು ಗಳಿಸಿವೆ.

ಒಟ್ಟು 62 ಸ್ಥಳೀಯ ಸಂಸ್ಥೆಗಳಿಗೆ ಮತದಾನ ನಡೆದಿತ್ತು. ಆ ಪೈಕಿ 24 ಮುನ್ಸಿಪಲ್ ಮಂಡಳಿಗಳು ಮತ್ತು 38 ಟೌನ್ ಸಮಿತಿಗಳು ಬಹುತೇಕ ನಗರ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಿಗೆ ಸುಮಾರು 20 ಅಥವಾ ಅದಕ್ಕೂ ಹೆಚ್ಚು ವರ್ಷಗಳ ಅಂತರದ ನಂತರ ಚುನಾವಣೆ ನಡೆಯಿತು. ಚುನಾವಣೆ ಶಾಂತಿಯುತವಾಗಿತ್ತು.

ಈ 62 ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು 541 ವಾರ್ಡ್‌ಗಳಿದ್ದು 539 ರಲ್ಲಿ ಮತದಾನ ನಡೆಯಿತು. ಎರಡು ವಾರ್ಡುಗಳ ಚುನಾವಣೆ ರದ್ದಾಗಿದೆ. ಮತದಾನದ ಮರುದಿನ ಅಂದರೆ ಜುಲೈ 17 ರಂದು ಫಲಿತಾಂಶ ಪ್ರಕಟವಾಯಿತು.

262 ವಾರ್ಡುಗಳಲ್ಲಿ ಅಸ್ಸಾಂ ಗಣಪರಿಷತ್ ಹಾಗೂ ಅದರ ಮಿತ್ರಪಕ್ಷಗಳಾದ ಸಿಪಿಐ(ಎಂ), ಸಿಪಿಐ ಜಯಭೇರಿ ಬಾರಿಸಿವೆ. ಚುನಾವಣೆಯಲ್ಲಿ ಕಾಂಗ್ರೆಸ್(ಐ)ಗೆ ಗಂಭೀರ ಹಿನ್ನಡೆಯಾಗಿದೆ. ಭಾರತೀಯ ಜನತಾ ಪಕ್ಷ ಸ್ವಲ್ಪ ಮಟ್ಟಿಗಿನ ಲಾಭವನ್ನು ಗಳಿಸಿದೆ.

ಗೆದ್ದ ಅಭ್ಯರ್ಥಿಗಳ ಪಕ್ಷದ ವಿವರ ಹೀಗಿದೆ.

ಎಜಿಪಿ-234, ಸಿಪಿಐ(ಎಂ)-23, ಸಿಪಿಐ-5, ಬಿಜೆಪಿ-109, ಕಾಂಗ್ರೆಸ್(ಐ)-38 ಮತ್ತು ಪಕ್ಷೇತರರು - 130.

ಬಹುತೇಕ ಸ್ಥಳಗಳಲ್ಲಿ ಕಾಂಗ್ರೆಸ್(ಐ) ಪಕ್ಷದ ಚಿಹ್ನೆ ಮೇಲೆ ಸ್ಪರ್ಧಿಸಿರಲಿಲ್ಲ. ಸ್ವತಂತ್ರ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಆದರೆ ಪಕ್ಷೇತರ ಅಭ್ಯರ್ಥಿಗಳ ಸೋಗುಹಾಕಿ ಕಣಕ್ಕಿಳಿದ ಕಾಂಗ್ರೆಸ್ ಅಭ್ಯರ್ಥಿಗಳು ಅಷ್ಟೇನೂ ಉತ್ತಮ ಸಾಧನೆ ತೋರಿಲ್ಲ.

ಮೂರು ಸಂಸ್ಥೆಗಳು ಸಿಪಿಐ(ಎಂ) ಮಡಿಲಿಗೆ

ಮೂರು ಸ್ಥಳೀಯ ಸಂಸ್ಥೆಗಳು ಕಮ್ಯುನಿಸ್ಟರ ಪಾಲಿಗೆ ಬಂದಿರುವುದು ಜೂನ್ 16 ರ ಚುನಾವಣೆ ಫಲಿತಾಂಶದ ಗಮನಾರ್ಹ ಅಂಶವಾಗಿದೆ.

ಬಾರ್ಪೆಟ್‌ರೋಡ್ ಮುನ್ಸಿಪಲ್ ಬೋರ್ಡ್ ಮತ್ತು ಸೊರ್‌ಭೋಗ್ ಹಾಗೂ ದಿಗ್‌ಬಾಯ್ ಟೌನ್ ಸಮಿತಿಗಳು ಸಿಪಿಐ(ಎಂ) ಮಡಿಲಿಗೆ ಬಿದ್ದಿವೆ.

ಬಾರ್ಪೆಟ್ ರೋಡ್ ಮುನ್ಸಿಪಲ್ ಮಂಡಳಿಯ 10 ವಾರ್ಡ್‌ಗಳಲ್ಲಿ ಐದು ಸಿಪಿಐ(ಎಂ) ಉಮೇದುವಾರರು ಗೆದ್ದಿದ್ದಾರೆ. ಸೊರ್‌ಭೋಗ್‌ನಲ್ಲಿ ನಾಲ್ಕು ಸ್ಥಾನಗಳ ಪೈಕಿ ಎರಡರಲ್ಲಿ ಸಿಪಿಐ(ಎಂ) ಗೆದ್ದಿದೆ. ದಿಗ್‌ಬಾಯ್‌ನಲ್ಲಿ ಕೂಡಾ ನಾಲ್ಕು ವಾರ್ಡ್‌ಗಳಲ್ಲಿ ಎರಡು ಸಿಪಿಐ(ಎಂ) ಪಾಲಿಗೆ ಬಂದಿದೆ.

ಈ ಮೂರು ಸಂಸ್ಥೆಗಳಲ್ಲಿ ಸಿಪಿಐ(ಎಂ) ಮತ್ತು ಅದರ ಮಿತ್ರ ಪಕ್ಷ ಎಜಿಪಿ ಸ್ಪಷ್ಟ ಬಹುಮತದಲ್ಲಿದೆ.

ಸಿಪಿಐ(ಎಂ) ಅಭ್ಯರ್ಥಿಗಳು ಜಯಗಳಿಸಿರುವ ಇತರ ಸ್ಥಳೀಯ ಸಂಸ್ಥೆಗಳು ಮತ್ತು ಸ್ಥಾನದ ವಿವರ: ರಂಗಿಯಾ-7, ಬೊಂಗಯ್‌ಗಾಂವ್-2 ಮತ್ತು ರಂಗಪಾರ, ಕೊಕ್ರಜಾರ್, ಲುಮ್‌ಡಿಂಗ್, ನಹರ್ ಕಟಿಯಾ, ಮೆರಿಯಬಿ, ಕರೀಂಗಂಜ್ ನಲ್ಲಿ ತಲಾ ಒಂದು ಸ್ಥಾನ.

ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ಎಜಿಪಿ, ಸಿಪಿಐ(ಎಂ) ಮತ್ತು ಸಿಪಿಐ ಮೈತ್ರಿ ಮಾಡಿಕೊಂಡಿತ್ತು. ಆದರೆ ಕೆಲವು ಕಡೆ ಕೂಟದ ಭಾಗೀದಾರ ಪಕ್ಷಗಳ ನಡುವೆ 'ಮೈತ್ರಿಯುತ ಸ್ಪರ್ಧೆ' ನಡೆಯಿತು.

ರಾಜ್ಯದ ಆಳುವ ಹಾಗೂ ಸಂಯುಕ್ತ ರಂಗದ ಅಂಗ ಪಕ್ಷವಾಗಿರುವ ಎಜಿಪಿ 31 ಸ್ಥಳೀಯ ಸಂಸ್ಥೆಗಳಲ್ಲಿ ಸ್ಪಷ್ಟ ಬಹುಮತ ಪಡೆದಿದೆ.

ಒಟ್ಟು 62ರ ಪೈಕಿ 11 ರಲ್ಲಿ ಮಾತ್ರ ಬಿಜೆಪಿ ಅಥವಾ ಕಾಂಗ್ರೆಸ್ ಆಡಳಿತ ಪಕ್ಷವಾಗಿ ಹೊರಹೊಮ್ಮಿವೆ. ಅವುಗಳನ್ನು ಬಿಟ್ಟು ಉಳಿದ ಎಲ್ಲಾ ಕಡೆ ಎಜಿಪಿ ಮಿತ್ರಕೂಟ ಆಡಳಿತ ನಡೆಸಲಿದೆ.

ಒಂಭತ್ತು ನಗರ ಸಂಸ್ಥೆಗಳಲ್ಲಿ ಬಿಜೆಪಿಗೆ ಬಹುಮತ ಸಿಕ್ಕಿದೆ. ಎರಡರಲ್ಲಿ ಮಾತ್ರ ಕಾಂಗ್ರೆಸ್ ಆಡಳಿತ.

ಅಭಿನಂದನೆ

ಶಾಂತಿಯುತ ಮತದಾನದಲ್ಲಿ ಭಾರಿ ಪ್ರಮಾಣದಲ್ಲಿ ಭಾಗವಹಿಸಿದ ರಾಜ್ಯದ ಜನರನ್ನು ಸಿಪಿಐ(ಎಂ) ಅಸ್ಸಾಂ ರಾಜ್ಯ ಸಮಿತಿ ಅಭಿನಂದಿಸಿದೆ.

ಸಿಪಿಐ(ಎಂ) ಮತ್ತು ಇತರ ಎಡ-ಜಾತ್ಯಾತೀತ ಶಕ್ತಿಗಳನ್ನು ಆಯ್ಕೆ ಮಾಡಿರುವುದನ್ನು ಅದು ಶ್ಲಾಘಿಸಿದೆ.

ಜಾತಿ ದೌರ್ಜನ್ಯಕ್ಕೆ ಸರಕಾರದ ಬೆಂಬಲ ಪ್ರತಿಭಟಿಸಿ ತಮಿಳುನಾಡು ಬಂದ್

ಈಚೆಗೆ ರಾಜ್ಯದಲ್ಲಿ ಸಂಭವಿಸಿದ ಜಾತೀಯ ಗಲಭೆಗಳನ್ನು ಪ್ರತಿಭಟಿಸಿ ಜುಲೈ ನಾಲ್ಕರಂದು ತಮಿಳುನಾಡು ಬಂದ್ ನಡೆಯಿತು.

ಜಾತಿ ಗಲಭೆಗಳ ಹಿನ್ನೆಲೆಯಲ್ಲಿ ರಾಜ್ಯದ ಡಿಎಂಕೆ ಸರಕಾರ ದೌರ್ಜನ್ಯ ನಡೆಸುವ ಶಕ್ತಿಗಳಿಗೆ ಬೆಂಬಲ ನೀಡುತ್ತಿದೆ ಎಂದು ಆರೋಪಿಸಿದ ದೇವೇಂದ್ರ ಕುಲ ವೆಲ್ಲಲರ ಒಕ್ಕೂಟ(ಡಿಕೆವಿಎಫ್) ಈ ಬಂದ್‌ಗೆ ಕರೆ ನೀಡಿತು.

ಬಂದ್ ಕರೆಯಿಂದ ಸಾಮಾನ್ಯ ಜನಜೀವನದ ಮೇಲೆ ಯಾವುದೇ ಪರಿಣಾಮ ಉಂಟಾಗಲಿಲ್ಲ ಎಂದು ವರದಿಗಳು ತಿಳಿಸಿವೆ.

ಜನವಿರೋಧಿ ನೀತಿಗಳಿಗೆ ಪ್ರತಿಭಟನೆ - ಆಂಧ್ರದಲ್ಲಿ ವ್ಯಾಪಕ ಪಿಕೆಟಿಂಗ್, ಬಂಧನ

ಆಂಧ್ರಪ್ರದೇಶದ ರಾಜ್ಯ ಸರಕಾರ ವಿಶ್ವಬ್ಯಾಂಕ್-ಐಎಂಎಫ್ ನಿರ್ದೇಶಿತ ಆರ್ಥಿಕ ನೀತಿಗಳನ್ನು ಹಾಗೂ ಜನವಿರೋಧಿ ಅನೀತಿಯನ್ನು ಅನುಸರಿಸುತ್ತಿರುವುದನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಜೂನ್ 10 ರಂದು ಸರಕಾರಿ ಕಚೇರಿಗಳ ಮುಂದೆ ಪಿಕೆಟಿಂಗ್ ನಡೆಸಲಾಯಿತು.

ಸಿಐಐ(ಎಂ)ರಾಜ್ಯ ಸಮಿತಿ ಚಳುವಳಿಗೆ ಕರೆ ನೀಡಿತ್ತು. ಜಿಲ್ಲಾಧಿಕಾರಿ ಕಚೇರಿಗಳು ಮತ್ತು ಮಂಡಲ ಕಂದಾಯ ಕಚೇರಿಗಳ ಮುಂದೆ ಪಿಕೆಟಿಂಗ್‌ನಲ್ಲಿ ಪಾಲ್ಗೊಂಡ ಸಾವಿರಾರು ಕಾರ್ಯಕರ್ತರು ಮತ್ತು ಮುಖಂಡರನ್ನು ಬಂಧಿಸಲಾಯಿತು.

ವಿದ್ಯುತ್ ಶುಲ್ಕ, ನೀರಿನ ದರ ಏರಿಕೆ, ಮದ್ಯಪಾನ ನಿಷೇಧವನ್ನು ವಾಪಸ್ ಪಡೆದಿರುವುದು, ಸಬ್ಸಿಡಿ ಅಕ್ಕಿಯ ಬೆಲೆಯೇರಿಕೆ, ಮತ್ತಿತರ ರಾಜ್ಯ ಸರಕಾರದ ಜನವಿರೋಧಿ ಕ್ರಮಗಳಿಗೆ ವಿರೋಧವನ್ನು ದಾಖಲಿಸಲಾಯಿತು.

ಹೈದರಾಬಾದಿನಲ್ಲಿ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಸತ್ಯನಾರಾಯಣ, ತೆಲುಗು ದೇಶಂ ಸರಕಾರಕ್ಕೆ ಎಚ್ಚರಿಕೆ ನೀಡಿದರು. ಹೈದರಾಬಾದ್ ಪಿಕೆಟಿಂಗ್‌ನಲ್ಲಿ ಭಾರಿ ಸಂಖ್ಯೆಯಲ್ಲಿ ಮಹಿಳೆಯರೂ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಮಹಿಳಾ ಪೋಲೀಸರನ್ನು ಬಳಸದೆಯೆ ಮಹಿಳಾ ಪ್ರದರ್ಶನಕಾರರನ್ನು ಬಂಧಿಸಲಾಯಿತು. ಚಳುವಳಿಕಾರರನ್ನು ಲಾಠಿಯಿಂದ ಹೊಡೆದು ನಿರ್ದಯವಾಗಿ ಪೋಲೀಸ್ ವ್ಯಾನಿಗೆ ಎಸೆಯ ಲಾಯಿತು.

ವಿಜಯವಾಡದಲ್ಲಿ ಚಳುವಳಿಕಾರರನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಎಂ.ಹನುಮಂತ ರಾವ್, ದೇಶಂ ಸರಕಾರ ಚುನಾವಣೆ ಆಶ್ವಾಸನೆಗಳನ್ನು ಗಾಳಿಗೆ ತೂರಿದೆ ಎಂದು ಆಪಾದಿಸಿದರು. ರಾಜ್ಯದ ಇನ್ನೂ ಹಲವು ಭಾಗಗಳಲ್ಲಿ ಚಳುವಳಿ ನಡೆದ ವರದಿಗಳು ಬಂದಿವೆ.

ಪಿಕೆಟಿಂಗ್ ಸಿದ್ಧತೆಯಾಗಿ ರಾಜ್ಯವ್ಯಾಪಿ ಪ್ರಚಾರಾಂದೋಲನ ಕೈಗೊಳ್ಳಲಾಗಿತ್ತು. ರಾಜ್ಯ ಸರಕಾರದ ಜನವಿರೋಧಿ ನೀತಿಗಳನ್ನು ವಿವರಿಸುವ 55000 ಪುಸ್ತಿಕೆಗಳನ್ನು ವಿತರಿಸಲಾಗಿತ್ತು. 25000 ಪೋಸ್ಟರುಗಳನ್ನು ಅಂಟಿಸಲಾಗಿತ್ತು. ಲಕ್ಷಾಂತರ ಕರಪತ್ರಗಳನ್ನು ಹಂಚಲಾಗಿತ್ತು.

ಕಾಲೇಜು ಶುಲ್ಕ ಏರಿಕೆ ಆದೇಶ ವಾಪಸ್‌ಗೆ ಎಸ್‌ಎಫ್‌ಐ ಸ್ವಾಗತ

1997-98 ನೇ ಸಾಲಿನಿಂದಲೇ ಜಾರಿ ಆಗುವಂತೆ ಆದೇಶ ಹೊರಡಿಸಿದ ಸರಕಾರಿ ಪಿಯುಸಿ ಮತ್ತು ಪದವಿ ವಿದ್ಯಾರ್ಥಿಗಳಿಗೆ ಧಿಡೀರನೆ 3-4 ಪಟ್ಟು ಪ್ರವೇಶ ಶುಲ್ಕವನ್ನು ಹೆಚ್ಚಿಸಿದ್ದನ್ನು ಕೂಡಲೇ ವಿದ್ಯಾರ್ಥಿಗಳ ಪ್ರತಿಭಟನೆಗೆ ಮಣಿದು ಹಿಂತೆಗೆದುಕೊಂಡದ್ದನ್ನು ಎಸ್‌ಎಫ್‌ಐ ಉತ್ತರ ಕನ್ನಡ ಜಿಲ್ಲಾ ಸಮಿತಿ ಸ್ವಾಗತಿಸಿ, ಮುಂದಿನ ದಿನಗಳಲ್ಲಿಯೂ ವಿದ್ಯಾರ್ಥಿ ವಿರೋಧಿ ನೀತಿಯನ್ನು ಜಾರಿಗೆ ತರಬಾರದೆಂದು ಸರಕಾರಕ್ಕೆ ಆಗ್ರಹಿಸಿದೆ.

ಸರಕಾರವು ಈ ನೀತಿಯನ್ನು ಹೊರಡಿಸಿದಾಕ್ಷಣ ಎಸ್‌ಎಫ್‌ಐ ರಾಜ್ಯದಾದ್ಯಂತ ಹೋರಾಟ ನಡೆಸಿತು. ಜುಲೈ 4 ರಂದು ದಾಂಡೇಲಿಯಲ್ಲಿಯೂ ನೂರಾರು ವಿದ್ಯಾರ್ಥಿಗಳು ಕೂಡಿದ ಮೆರವಣಿಗೆ ಮಾಡಿ ಪ್ರತಿಭಟಿಸಲಾಯಿತು.

ಎಲ್ಲರಿಗೂ ಉಚಿತವಾಗಿ ಶಿಕ್ಷಣ ನೀಡಬೇಕಾದ ಜವಾಬ್ದಾರಿ ಹೊಂದಿರುವ ಸರ್ಕಾರ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿದೆ. ಶಿಕ್ಷಣ ನೀಡಲು ಖಜಾನೆಯಲ್ಲಿ ಹಣ ಇಲ್ಲ ಎನ್ನುವ ಸರ್ಕಾರ ಖಜಾನೆಯ ಹಣವನ್ನು ತಮ್ಮ ಸ್ವಹಿತಾಸಕ್ತಿಗೆ ಬಳಸಿಕೊಳ್ಳುತ್ತಿದೆ. ಅನಾವಶ್ಯಕ ಖರ್ಚು ಮಾಡಲಾಗುತ್ತಿದೆ ಎಂದು ಆಪಾದಿಸಿದೆ. ಇದನ್ನು ನಿಲ್ಲಿಸಿ ಶಿಕ್ಷಣಕ್ಕೆ ಒತ್ತು ಕೊಡಬೇಕು ಎಂದು ಎಸ್‌ಎಫ್‌ಐ ಆಗ್ರಹಿಸಿದೆ.

ಸರಕಾರವು 1998-99 ನೇ ಸಾಲಿನಿಂದ ಕಾಲೇಜು ಶುಲ್ಕವನ್ನು ಏರಿಸುತ್ತೇನೆಂದು ಹೇಳಿದ್ದು ಖಂಡನೀಯ ಇಂತಹ ವಿದ್ಯಾರ್ಥಿ ವಿರೋಧಿ ನೀತಿಯನ್ನು ಕೈ ಬಿಡಬೇಕೆಂದು ಎಸ್‌ಎಫ್‌ಐ ಆಗ್ರಹಿಸಿದೆ.

ಇಂತಹ ಸರಕಾರದ ಯಾವುದೇ ಜನ ವಿರೋಧಿ ನೀತಿ ಬಂದರೂ ಕೂಡಲೇ ಅದರ ವಿರುದ್ಧ ವಿದ್ಯಾರ್ಥಿಗಳು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ಎಸ್‌ಎಫ್‌ಐ ಉ.ಕ. ಜಿಲ್ಲಾ ಕಾರ್ಯದರ್ಶಿ ಹಾಗೂ ಎಸ್‌ಎಫ್‌ಐ ನ ಕೇಂದ್ರ ಸಮಿತಿ ಸದಸ್ಯರಾದ ಯುವರಾಜ ಕಂಬಾಳಿಮಠ ವಿದ್ಯಾರ್ಥಿ ಸಮುದಾಯಕ್ಕೆ ಕರೆ ಕೊಟ್ಟಿದ್ದಾರೆ.

ಎಸ್‌ಎಫ್‌ಐ ದಾಂಡೇಲಿ ನಗರ ಸಮಿತಿ ಪದಾಧಿಕಾರಿಗಳ ಆಯ್ಕೆ: ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ದಾಂಡೇಲಿ ನಗರ ಸಮಿತಿಯ ಪದಾಧಿಕಾರಿಗಳನ್ನು ದಿನಾಂಕ ಜುಲೈ 4ರಂದು ನಡೆದ ಸಭೆಯಲ್ಲಿ ಆಯ್ಕೆಮಾಡಲಾಯಿತು.

ಅಧ್ಯಕ್ಷರಾಗಿ ಅತಿಕರ್ ರೆಹಮಾನ್, ಕಾರ್ಯದರ್ಶಿಯಾಗಿ ಶಶಿ ಮಾಂಜ್ರೇಕರ್, ಉಪಾಧ್ಯಕ್ಷರಾಗಿ ಸಾಗರ ನಾಯ್ಕ, ಆನಂದ ಚೌಗಲೆ, ಮನೋಜನಾಯ್ಕ ಹಾಗೂ ಸಹ ಕಾರ್ಯದರ್ಶಿಗಳಾಗಿ ರವಿ ಜಿ.ನಾಯ್ಕ, ಪ್ರಕಾಶ ಸಿ.ಎನ್. ಸದಾನಂದ ದಬಗಾರರನ್ನು ಆಯ್ಕೆ ಮಾಡಲಾಯಿತು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ರಾಮಚಂದ್ರ ಮಾಸಗೆ, ವಿನಾಯಕ ನಾಯ್ಕ, ಸುಶೀಲ ಹೊಸಪಟ್ಟಣ, ವಿಜಯ ನಾಯ್ಕರ್, ಸಂಜಯ ಚೌಹಾಣ ಆಯ್ಕೆಯಾದರು. 13 ವಿದ್ಯಾರ್ಥಿಗಳನ್ನೊಳಗೊಂಡ ಸಮಿತಿ ರಚಿಸ ಲಾಯಿತು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಉ.ಕ. ಜಿಲ್ಲಾ ಕಾರ್ಯದರ್ಶಿ ಯುವರಾಜ ಕಂಬಾಳಿಮಠ ಹಾಜರಿದ್ದರು.

ಶಿಕ್ಷಣದ ವ್ಯಾಪಾರೀಕರಣ ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಡೊನೇಷನ್ ಕ್ಯಾಪಿಟೇಷನ್ ಮೂಲಕ ಇಂದು ನಡೆಯುತ್ತಿರುವ ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಉತ್ತರ ಕನ್ನಡ ಜಿಲ್ಲಾ ಸಮಿತಿಯವರು ಜೂನ್ 30 ರಂದು ನಗರದ ಹುಬ್ಬಳ್ಳಿ ರಸ್ತೆಯಲ್ಲಿರುವ ಡಾನ್ ಬಾಸ್ಕೊ ಎದುರು ಕರಪತ್ರವನ್ನು ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗೆ ಹಂಚುವ ಮೂಲಕ ಪ್ರತಿಭಟನೆ ನಡೆಸಿದರು.

ಸುರಿಯುತ್ತಿರುವ ಮಳೆಯಲ್ಲಿಯೂ ಬೀಗ ಹಾಕಿದ ಪ್ರೌಢಶಾಲೆಯ ಗೇಟಿನ ಎದುರಿಗೆ ಎಸ್‌ಎಫ್‌ಐನ ಕಾರ್ಯಕರ್ತರು ಈ ಪ್ರತಿಭಟನೆ ನಡೆಸಿದರು.

ಭಾರತ ಸ್ವಾತಂತ್ರ ಪಡೆದು 50 ವರ್ಷಗಳಾದರೂ ಎಲ್ಲರಿಗೂ ಶಿಕ್ಷಣ ಸಿಕ್ಕಿಲ್ಲ. ಕೇವಲ ಉಳ್ಳವರಿಗೆ ಮಾತ್ರ ಶಿಕ್ಷಣ ಎನ್ನುವ ನೀತಿಯನ್ನು ಸರಕಾರ ತರುತ್ತಿದೆ. ಬಜೆಟ್‌ನಲ್ಲಿ ಶಿಕ್ಷಣಕ್ಕೆ ನೀಡುವ ಹಣವನ್ನು ಕಡಿತಗೊಳಿಸಲಾಗುತ್ತಿದೆ. ಸರ್ಕಾರದ ಬೇಜವಾಬ್ದಾರಿತನ ಒಂದೆಡೆಯಾದರೆ ಹಲವಾರು ಶಿಕ್ಷಣ ಸಂಸ್ಥೆಗಳು ಇಂದು ಡೊನೇಷನ್, ಕ್ಯಾಪಿಟೇಶನ್ ಹೆಸರಿನಲ್ಲಿ ಜನರನ್ನು ಸುಲಿಯುತ್ತಿವೆ. ಇಂತಹ ಜನ ವಿರೋಧಿ ನೀತಿಗಳ ವಿರುದ್ಧ ಈ ಪ್ರತಿಭಟನೆ ಹಮಿಕೊಳ್ಳಲಾಗಿತ್ತು.

ಪ್ರತಿಭಟನೆಯ ನೇತೃತ್ವವನ್ನು ಎಸ್‌ಎಫ್‌ಐ ಉ.ಕ. ಜಿಲ್ಲಾ ಕಾರ್ಯದರ್ಶಿ ಯುವರಾಜ ಕಂಬಾಳಿ ಮಠ ಸಹ ಕಾರ್ಯದರ್ಶಿ ಯಮುನಾಗಾಂವಕರ

ರೈತ ಸಹಕಾರಿ ಸಂಘಕ್ಕೆ ಆಯ್ಕೆ

ರೈತರ ಸೇವಾ ಸಹಕಾರಿ ಸಂಘ(ನಿ) ಜಾಲಹಳ್ಳಿಯ ಅಧ್ಯಕ್ಷರಾಗಿ ಸಿಪಿಐ(ಎಂ) ಮುಖಂಡ ಶ್ಯಾಮಸುಂದರ ಮಹೇಂದ್ರಕರ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಜನತಾದಳ ಹಾಗೂ ಸಿಪಿಐ(ಎಂ) ಹೊಂದಾಣಿಕೆಯಾಗಿತ್ತು. ಶ್ಯಾಮಸುಂದರ ಮಹೇಂದ್ರಕರ ಇವರ ಆಯ್ಕೆಯನ್ನು ತಾಲ್ಲೂಕು ಜನತಾದಳ ಮುಖಂಡರು ರೈತ ಸಂಘಟನೆಗೆ ಹಾಗೂ ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಸ್ವಾಗತಿಸುತ್ತ ಮಹೇಂದ್ರಕರರನ್ನು ಅಭಿನಂದಿಸಿದ್ದಾರೆ.

ವಾರ್ಷಿಕ ಮಹಾಸಭೆ

ಜೂನ್ 23 ರಂದು ರೈತರ ಸೇವಾ ಸಹಕಾರಿ ಸಂಘ(ನಿ) ಜಾಲಹಳ್ಳಿ ತಾ॥, ದೇವದುರ್ಗ ಜಿಲ್ಲಾ ರಾಯಚೂರು ಸಂಘದ ಕಾರ್ಯಾಲಯದಲ್ಲಿ ವಾರ್ಷಿಕ ಮಹಾಸಭೆ ಶ್ರೀ ಶ್ಯಾಮಸುಂದರ ಮಹೇಂದ್ರಕರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಗೆ ಸುಮಾರು 200 ಜನ ಭಾಗವಹಿಸಿದ್ದು ಸಭೆಯು ಸಂಘದ ಕಾರ್ಯಕಲಾಪಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಂಘದ ಕಟ್ಟು ಬಾಕೀದಾರರು ಸಂಘಕ್ಕೆ ಬೇಗನೆ ಮರುಪಾವತಿ ಮಾಡಬೇಕು, ಇದರಿಂದ ಸಂಘದ ಆರ್ಥಿಕ ಸ್ಥಿತಿ ಕೂಡ ಉತ್ತಮವಾಗಿ ಹೊಸ ಸದಸ್ಯರಿಗೂ ಸಾಲ ಸಿಗುವಂತಾಗುತ್ತದೆ. ಮರು ಪಾವತಿ ಮಾಡದಿದ್ದಲ್ಲಿ ಸಂಘದ ಕಾನೂನುಗಳನ್ನು ಬಳಸಿ ಜಪ್ತಿ ಮಾಡಲು ಸಹ ಹಿಂದೇಟು ಹಾಕುವುದಿಲ್ಲವೆಂದು ಹೇಳಿದರು.

ಎಸ್‌ಎಫ್‌ಐ ನಿಂದ ಪ್ರತಿಭಟನೆ

ಜೂನ್ 27 ರಂದು ಎಸ್‌ಎಫ್‌ಐ ಕರೆಯ ಮೇರೆಗೆ ಡೊನೇಶನ್-ಕ್ಯಾಪಿಟೇಶನ್ ಹಾವಳಿ ತಡೆಗಟ್ಟುವುದರ ವಿರುದ್ಧ ರಾಜ್ಯಾದ್ಯಂತ ನಡೆದ ಹೋರಾಟದ ಭಾಗವಾಗಿ ಗುಲ್ಬರ್ಗದಲ್ಲಿ ಎಸ್.ವಿ.ಶಿಕ್ಷಣ ಸಂಸ್ಥೆಯ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು

ಪ್ರದರ್ಶನಕಾರರನ್ನು ಉದ್ದೇಶಿಸಿ ಜಿಲ್ಲಾ ಅಧ್ಯಕ್ಷರಾದ ಜೈಲಾಲ್ ತೋಟದಮನಿಯವರು ಮಾತನಾಡಿದರು. ಈ ಕೂಡಲೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಡೊನೇಶನ್ ತೆಗೆದುಕೊಳ್ಳಬಾರದು ಎಂದು ಸರಕಾರ ಕಡಿವಾಣ ಹಾಕಬೇಕು. ಬಡವ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಸರ್ಕಾರ ನಿಗದಿಪಡಿಸಿದಷ್ಟು ಮಾತ್ರ ಶುಲ್ಕ ತೆಗೆದುಕೊಳ್ಳಬೇಕು, ಹೆಚ್ಚಿಗೆ ತೆಗೆದುಕೊಳ್ಳುವವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ವಿಪರೀತ ಡೊನೇಶನ್ ತೆಗೆದುಕೊಳ್ಳುವ ಸಂಸ್ಥೆಗಳನ್ನು ಕೂಡಲೇ ಮುಚ್ಚಿಸಲು ಆಗ್ರಹಿಸಿದರು.

ಹೋರಾಟದ ನೇತೃತ್ವವನ್ನು ಶಿವರಾಜ, ಸೂರ್ಯಕಾಂತ, ಚಂದ್ರಶೇಖರ್ ಮೇಟಿ, ಮಹಾದೇವಪ್ಪ, ಉಮೇಶ, ಜಗನ್ನಾಥ ವಹಿಸಿದ್ದಾರೆಂದು ಪತ್ರಿಕಾ ಹೇಳಿಕೆಯನ್ನು ಶಿವಶರಣಪ್ಪ ಮುಖರಂಭಿ ತಿಳಿಸಿದ್ದಾರೆ.

ಉಪದೇಶ ನೀಡುವ ಅಮೆರಿಕದಿಂದ ಅಣ್ವಸ್ತ್ರ ಪರೀಕ್ಷೆ
ಜಗತ್ತಿನಾದ್ಯಂತ ಪ್ರತಿಭಟನೆ

ಸೀಟಿಬೀಟಿಯ ಗದ್ದಲ ನೆನಪಿದೆಯೇ?

ಭಾರತ ಅದನ್ನು ಸಹಿ ಹಾಕಲು ನಿರಾಕರಿಸಿದಾಗ ಬಂದ ಒತ್ತಡಗಳು ನೆನಪಿದೆಯೇ? ಇದೇ ಸೀಟಿಬೀಟಿ ಯ ಸಾರವನ್ನು ಉಲ್ಲಂಘಿಸುವ ಅಣ್ವಸ್ತ್ರ ಪರೀಕ್ಷಣೆಯ ಸ್ಫೋಟವನ್ನು ಅಮೆರಿಕ ಇತ್ತೀಚೆಗೆ ಅದರ ಪರೀಕ್ಷಾ ಕ್ಷೇತ್ರವಾದ ನೆವಾಡದಲ್ಲಿ ನಡೆಸಿತು. ಜಗತ್ತಿಗೆ ಅಣ್ವಸ್ತ್ರ ಪರೀಕ್ಷಣೆ ಬಗ್ಗೆ ಉಪದೇಶಮಾಡುವ ಅಮೆರಿಕ ತಾನೇ ಒಪ್ಪಂದವನ್ನು ಮುರಿದಿದೆ. ಇದು ಒಂದೇ ಪರೀಕ್ಷಣಾ ಸ್ಫೋಟವಲ್ಲ ಇಂತಹ ಪರೀಕ್ಷಣಾ ಸ್ಫೋಟಗಳ ಸರಣಿಯನ್ನೇ ಅಮೆರಿಕ ಯೋಜಿಸಿದೆ.

ಅಮೆರಿಕೆಗೆ ರಾಶಿ ರಾಶಿ ಮಾರಕ ಅಣ್ವಸ್ತ್ರಗಳು ಇನ್ನೂ ಮಾರಕವಾಗಿವೆಯೆ ಎಂಬುದು ಪರೀಕ್ಷಣೆಯ ಅಧಿಕೃತ ಉದ್ದೇಶ. ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲೆಲ್ಲಾ ಶಾಖೆಗಳನ್ನು ಹೊಂದಿರುವ ಪರಿಸರವಾದಿ ಹಾಗೂ ಶಾಂತಿ ಚಳುವಳಿಯ ಸಂಘಟನೆ ಗ್ರೀನ್‌ಪೀಸ್ ಸಂಘಟನೆ ಪರೀಕ್ಷಣಾ ಸ್ಥಳದಲ್ಲಿ ಪ್ರತಿಭಟನಾ ಪ್ರದರ್ಶನ ಏರ್ಪಡಿಸಿತ್ತು. ಪ್ರದರ್ಶನದಲ್ಲಿ ಭಾಗವಹಿಸಿದವರನ್ನು ಬಂಧಿಸಲಾಯಿತು. ಗ್ರೀನ್‌ಪೀಸ್ ಹಾಗೂ ಇತರ ಪರಿಸರವಾದಿ ಶಾಂತಿ ಚಳುವಳಿಗಳು ಅಮೆರಿಕದ ಪರೀಕ್ಷಣಾ ಉದ್ದೇಶವನ್ನು ಪ್ರಶ್ನಿಸಿವೆ. ಅಣು ಸರಪಣಿ ಕ್ರಿಯೆಗೆ ಎಡೆ ಕೊಡದೆ ಅಣ್ವಸ್ತ್ರಗಳನ್ನು ಪರೀಕ್ಷೆ ಮಾಡುವ ಹೊಸ ತಂತ್ರಜ್ಞಾನ, ಹೊಸ ಅಣ್ವಸ್ತ್ರ ವಿನ್ಯಾಸಕ್ಕೆ ಅನುವು ಮಾಡಿ ಕೊಡುವುದು ಈ ತಂತ್ರಜ್ಞಾನ ಎಂದು ಹೇಳಿದ್ದಾರೆ. ಈ ಸಂಘಟನೆಗಳು ಕೋರ್ಟ್ ಮೂಲಕ ಪರೀಕ್ಷಣೆ ತಡೆಹಿಡಿಯಲೂ ಪ್ರಯತ್ನಿಸಿವೆ. 44 ಅಮೇರಿಕನ್ ಜನಪ್ರತಿನಿಧಿಗಳು ಸಹ ಈ ಪರೀಕ್ಷಣೆಗಳು ನಡೆಸದಂತೆ ಸಾರ್ವಜನಿಕವಾಗಿ ಮನವಿ ಮಾಡಿದರು. ಅಣ್ವಸ್ತ್ರ ಪರೀಕ್ಷಣೆಗಳು ಅಣು ಸರಪಣಿ ಕ್ರಿಯೆಗೆ ಎಡ ಕೊಡಲಿಲ್ಲ ಎಂಬ ಅಮೇರಿಕನ್ ಸರಕಾರದ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ ಇದನ್ನು ಅಂತರ್ರಾಷ್ಟ್ರೀಯ ಸಮುದಾಯಕ್ಕೆ ಮನವರಿಕೆ ಮಾಡಲು ಅಂತರ್ರಾಷ್ಟ್ರೀಯ ವೀಕ್ಷಕರನ್ನು ಪರೀಕ್ಷಣಾ ಕ್ಷೇತ್ರಕ್ಕೆ ಆಹ್ವಾನಿಸಬೇಕಾಗಿತ್ತು ಎಂದಿದ್ದಾರೆ. ಚೀನಾದ ಅಧಿಕೃತ ವಕ್ತಾರರು ಅಮೇರಿ ಕಾದ ಈ ಅಣ್ವಸ್ತ್ರ ಸ್ಫೋಟ ಪರೀಕ್ಷಣೆಯನ್ನು ಖಂಡಿಸಿ, ಇದು ಸೀಟಿಬೀಟಿಯನ್ನು ಉಲ್ಲಂಘಿಸಿದೆ ಎಂದಿದ್ದಾರೆ. ಜಪಾನು ಅಣು ಸರಪಣಿ ಕ್ರಿಯೆಗೆ ಎಡೆಗೊಡದ ಅಣ್ವಸ್ತ್ರ ಪರೀಕ್ಷಣೆಗಳು ಸೀಟಿಬೀಟಿ ಒಪ್ಪಂದದಲ್ಲಿ ಸೇರಿಲ್ಲದಿದ್ದಲ್ಲಿ, ಅವನ್ನು ಸೇರಿಸಬೇಕು ಎಂದಿದೆ.

ಲೋಕಸಂಚಾರ

ಶರತ್‌ಚಂದ್ರ

ಇರಾಕಿ ಮಕ್ಕಳಿಗೆ ಪೌಷ್ಟಿಕತೆಯ ಅಭಾವ ಅಮೇರಿಕನ್ ದಿಗ್ಬಂಧನದಿಂದ

ಇರಾಕ್‌ನ ಕೇಂದ್ರ ಮತ್ತು ದಕ್ಷಿಣ ಭಾಗದ ಮಕ್ಕಳ ಪೌಷ್ಟಿಕತೆಯ ಅಂಶ ಕಡಿಮೆ ಇರುವ ಮಕ್ಕಳ ಸಂಖ್ಯೆ 1991ರಲ್ಲಿ ಶೇಕಡಾ 9.2 ರಿಂದ 1995ಕ್ಕೆ ಶೇಕಡಾ 25ಕ್ಕೆ ಏರಿದೆ. ಈ ಏರಿಕೆ ಅಮೇರಿಕ ಇರಾಕಿಗೆ ಎಲ್ಲಾ ಥರದ ವಸ್ತುಗಳ ಮೇಲೆ ಹೊರಿಸಿರುವ ದಿಗ್ಬಂಧನದ ನೇರ ಫಲ ಎಂದಿದೆ ವಿಶ್ವ ಸಂಸ್ಥೆಯ ಮಕ್ಕಳ ಕಲ್ಯಾಣ ವಿಭಾಗವಾದ ಯುನಿಸೆಫ್‌ನ ಒಂದು ಅಧ್ಯಯನ. ಈ ಅಂಶ ಹೊರಗೆಡವಿರುವ ಅಧ್ಯಯನ ಯುನಿಸೆಫ್, ಇರಾಕ್‌ನ ದಕ್ಷಿಣ ಹಾಗೂ ಮಧ್ಯ ಭಾಗದ 15 ಪ್ರಾಂತ್ಯಗಳಲ್ಲಿ 87 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಡೆಸಲಾಯಿತು. 15 ಸಾವಿರ 5 ವರ್ಷದ ಕೆಳಗಿನ ಮಕ್ಕಳನ್ನು ಈ ಅಧ್ಯಯನಕ್ಕಾಗಿ ಪರೀಕ್ಷಿಸಲಾಯಿತು. ಅಧ್ಯಯನ ಹೊರಗೆಡಹಿದ ಇನ್ನೊಂದು ಅಂಶವೆಂದರೆ ಎರಡು ವರ್ಷದ ಕೆಳಗಿನ ಮಕ್ಕಳು ಅತ್ಯಂತ ಅಪಾಯದಲ್ಲಿರುವವರು ಎಂದು.

ಅಮೇರಿಕಾದ ಆರೋಗ್ಯ ಸೇವೆಯ ದುಸ್ಥಿತಿ

ಮಾರುಕಟ್ಟೆ ಆರ್ಥಿಕದ ಸ್ವರ್ಗ ಅಮೇರಿಕಾದಲ್ಲಿ ಬಡವರ, ಆರೋಗ್ಯವಂತರಲ್ಲದವರ ಸ್ಥಿತಿಯ ಅಂಕಿ-ಅಂಶಗಳೇನು?

✦ ಆರೋಗ್ಯ ಸೇವೆಗಳು ಎಷ್ಟು ದುಬಾರಿಯಾಗಿವೆ. ಜನರ ಆದಾಯ ಎಷ್ಟು ಕಡಿಮೆಯಾಗಿದೆಯೆಂದರೆ.

✦ ಶೇಕಡಾ 31 ಅಮೇರಿಕನ್ನರು, ಆರೋಗ್ಯ ಸೇವೆಗೆ ಬೇಕಾದ ಹಣ ತೆರುವ ಸ್ಥಿತಿಯಲ್ಲಿಲ್ಲ.

✦ ವೈದ್ಯಕೀಯ ವಿಮೆ ತೆರಲಾರದ ಅಮೇರಿಕಾದಲ್ಲಿ ಶೇಕಡಾ 75 ಜನಗಳು ಅನಾರೋಗ್ಯದಿಂದ ಬಳಲುತ್ತಿದ್ದಾರೆ.

✦ ವಯಸ್ಕರಲ್ಲಿ ವೈದ್ಯಕೀಯ ವಿಮೆ ಇಲ್ಲದವರಲ್ಲಿ ಶೇಕಡಾ 59 ಜನ ಕಳೆದ ವರ್ಷ ಕನಿಷ್ಟ ಒಂದು ಬಾರಿಯಾದರೂ ವೈದ್ಯಕೀಯ ಸೇವೆಯ ಅಗತ್ಯ ಇತ್ತು. ವೈದ್ಯಕೀಯ ವಿಮೆ ಇರುವವರಲ್ಲೂ ಶೇಕಡಾ 19 ಜನ ತಮಗೆ ಬೇಕಾದ ವೈದ್ಯಕೀಯ ಸೇವೆ ಕಳೆದ ವರ್ಷ ಒಂದು ಬಾರಿಯಾದರೂ ಒದಗಲಿಲ್ಲ ಎಂದಿದ್ದಾರೆ.

✦ ವೈದ್ಯಕೀಯ ವಿಮೆ ಇಲ್ಲದ ಅಮೇರಿಕನ್ನರಲ್ಲಿ ಶೇಕಡಾ 70 ಜನ ತಮ್ಮ ಅನಾರೋಗ್ಯ 'ತೀವ್ರ' ಅಥವಾ 'ಸಾಕಷ್ಟು ಗಂಭೀರ ಸ್ವರೂಪದ್ದು ಎಂದಿದ್ದಾರೆ.

✦ ಸೇವೆಯಿಂದ ನಿವೃತ್ತಿಯಾದವರಲ್ಲಿ ವೈದ್ಯಕೀಯ ವಿಮೆ ಹೊಂದಿರುವವರ(ಮಾಜಿ ಮಾಲಿಕರು ಒದಗಿಸಿರುವ) ಸಂಖ್ಯೆ 1985ರಲ್ಲಿ ಶೇಕಡಾ 37ರಿಂದ 1994ರಲ್ಲಿ ಶೇಕಡಾ 27ಕ್ಕೆ ಇಳಿದಿದೆ. ನಿವೃತ್ತಿ ಹೊಂದಿದವರ ಸಂಖ್ಯೆ ಇದೇ ಅವಧಿಯಲ್ಲಿ ಶೇಕಡಾ 50ರಷ್ಟು ಏರಿದೆ.

✦ ವೈದ್ಯಕೀಯ ವಿಮೆಗಳು ಕೆಲವು ಕಾಯಿಲೆಗಳ ಉಪಚಾರ ವೆಚ್ಚವನ್ನು ಭರಿಸುವುದಿಲ್ಲ. ಇಂತಹ ನಾಲ್ಕು ಅತಿ ಸಾಮಾನ್ಯ ಹಾಗೂ ದುಬಾರಿ ಕಾಯಿಲೆಗಳಲ್ಲಿ 3 ಮಹಿಳೆಯರಿಗೆ ಮಾತ್ರ ಬರುವಂತಹವು. ಮಹಿಳೆಯರಲ್ಲಿ ಪೂರ್ಣಾವಧಿಯ ಉದ್ಯೋಗ ಇರುವವರು ಕಡಿಮೆಯಾದ್ದರಿಂದ ಪೂರ್ಣ ಪ್ರಮಾಣದ ವೈದ್ಯಕೀಯ ಉಪಚಾರ ಸಿಗುವವರು ಅತಿ ಕಡಿಮೆ.

✦ 1979ರಿಂದ 1995ರ ನಡುವೆ ಶೇಕಡಾ 20 ಅತಿ ಬಡವ ಅಮೇರಿಕನ್ನರ ಆದಾಯ ಶೇಕಡಾ 9ರಷ್ಟು ಇಳಿದಿದೆ. ಶೇಕಡಾ 20 ಅತಿ ಶ್ರೀಮಂತರ ಅಮೇರಿಕನ್ನರ ಆದಾಯ ಅದೇ ಅವಧಿಯಲ್ಲಿ ಶೇಕಡಾ 26ರಷ್ಟು ಏರಿದೆ.

✦ ಇದರರ್ಥ ವೈದ್ಯಕೀಯ ಉಪಚಾರದಲ್ಲಿ ವೆಚ್ಚ ಕಡಿಮೆ ಆಗಿದೆ ಎಂದಲ್ಲ. 1995ರಲ್ಲಿ ಶೇಕಡಾ 5ರಷ್ಟು ಏರಿದೆ. ಆದರೆ ಇವೆಲ್ಲಾ ಖಾಸಗಿ ಆಸ್ಪತ್ರೆ ಹಾಗೂ ಔಷಧಿ ಕಂಪನಿಗಳು ಲಾಭ ಹೆಚ್ಚಿಸಲು ವೆಚ್ಚವಾಗಿದೆ. ಇಂತಹ ಆಸ್ಪತ್ರೆಗಳ ಲಾಭ 1994ರಿಂದ 1995ಕ್ಕೆ ಶೇಕಡಾ24ರಷ್ಟು ಏರಿದೆ. 1995ರಲ್ಲಿ ಆಸ್ಪತ್ರೆಗಳ ಲಾಭ 1985ರ ನಂತರ ಅತಿ ಹೆಚ್ಚು ಲಾಭಾಂಶ. ಹತ್ತು ಅತಿ ದೊಡ್ಡ ಔಷಧಿ ಕಂಪನಿಗಳ ಲಾಭಾಂಶ ಶೇಕಡಾ 12.

ರಶ್ಯದ ದುಸ್ಥಿತಿ: ಕೆಲವು ಅಂಕಿ ಅಂಶಗಳು

ಇತ್ತೀಚೆಗೆ ನಡೆದ ರಶ್ಯನ್ ಫೆಡರೇಶನ್ ಕಮ್ಯುನಿಸ್ಟ್ ಪಕ್ಷದ(ಸಿಆರ್‌ಪಿಎಫ್) 4ನೆ ಕಾಂಗ್ರೆಸ್‌ನಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹಾಗೂ ಮೃದುಲ್ ಡೇ ಭಾಗವಹಿಸಿದ್ದರು. ಸಿಆರ್‌ಪಿಎಫ್ ಕಾಂಗ್ರೆಸ್‌ನಲ್ಲಿ ಮಂಡಿಸಲಾದ ವರದಿಯಲ್ಲಿ ರಶ್ಯದ ಆರ್ಥಿಕ ದುಸ್ಥಿತಿ ಬಗ್ಗೆ ದಂಗುಬಡಿಸುವ ಸತ್ಯಗಳನ್ನು ಬೆಳಕಿಗೆ ತಂದಿದೆ.

■ *1987ರಿಂದ 1997ರವರೆಗಿನ ಹತ್ತು ವರ್ಷಗಳಲ್ಲಿ ಬೆಲೆ ಸುಧಾರಣೆಗಳು, ಮಾರುಕಟ್ಟೆ ಆರ್ಥಿಕದ ಹೆಸರಿನಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಗಗನ ಮುಟ್ಟಿವೆ.*

☆ *1987ರಲ್ಲಿ ಒಂದು ರೂಬಲ್‌ಗೆ ಎರಡೂವರೆ ಕಿಲೋ ಬ್ರೆಡ್ ಸಿಕ್ಕುತ್ತಿದ್ದರೆ ಈಗ ಒಂದು ಕಿಲೋ ಬ್ರೆಡ್‌ಗೆ ರೂ. 2600 ರೂಬಲ್‌ಗಳು!*

☆ *1987ರಲ್ಲಿ ಒಂದು ರೂಬಲ್‌ಗೆ ಮೂರು ಲೀಟರ್ ಹಾಲು ಸಿಗುತ್ತಿತ್ತು. ಈಗ ಒಂದು ಲೀಟರ್ ಹಾಲಿಗೆ 3600 ರೂಬಲ್!*

☆ *1987ರಲ್ಲಿ ಒಂದು ರೂಬಲ್‌ಗೆ 13 ಮೊಟ್ಟೆ ಅಥವಾ ಒಂದು ಕೇಜಿ ಸಕ್ಕರೆ ಸಿಗುತ್ತಿತ್ತು. ಈಗ ಒಂದು ಮೊಟ್ಟೆಗೆ 600 ರೂಬಲ್‌ಗಳು ಒಂದು ಕೇಜಿ ಸಕ್ಕರೆಗೆ 3800 ರೂಬಲ್‌ಗಳು!*

☆ *ಇಂತಹ ಏರುತ್ತಿರುವ ಬೆಲೆಗಳ ಪರಿಸ್ಥಿತಿಯಲ್ಲಿ ರಶ್ಯದ ಕಾರ್ಮಿಕರಿಗೆ, ನೌಕರರಿಗೆ ಸಂಬಳ ತಿಂಗಳುಗಟ್ಟಲೆ ಕೊಡಲಾಗುತ್ತಿಲ್ಲ.*

■ *ರಶ್ಯದ ಕಾರ್ಮಿಕರಿಗೆ, ನೌಕರರಿಗೆ ಬಾಕಿ ಇರುವ ಸಂಬಳದ ಒಟ್ಟು ಮೊತ್ತ 48 ಲಕ್ಷ ಶತಕೋಟಿ ರೂಬಲ್‌ಗಳು(8.6 ಶತಕೋಟಿ ಡಾಲರುಗಳು)*

☆ *ಸರಕಾರ ಕೊಡದೆ ಬಾಕಿ ಇಟ್ಟಿರುವ ಪೆನ್‌ಶನ್ ಮೊತ್ತ 15 ಲಕ್ಷ ಶತಕೋಟಿ ರೂಬಲ್‌ಗಳು(3 ಶತಕೋಟಿ ಡಾಲರುಗಳು)*

☆ *ಸರಕಾರ ಪೆನ್‌ಶನ್ ನಿಧಿಯಿಂದ ತೆಗೆದುಕೊಂಡ ಸಾಲ 14.5 ಲಕ್ಷ ಶತಕೋಟಿ ರೂಬಲ್‌ಗಳು(2.8 ಶತಕೋಟಿ ಡಾಲರುಗಳು).*

☆ *89 ಪ್ರದೇಶಗಳಲ್ಲಿ 30 ಪ್ರದೇಶಗಳಲ್ಲಿ ಪೆನ್‌ಶನ್ ಒಂದೂವರೆ ವರ್ಷಗಳಿಂದ ಕೊಡಲಾಗಿಲ್ಲ. 29 ಪ್ರದೇಶಗಳಲ್ಲಿ ಆರು ತಿಂಗಳುಗಳಿಂದ ಪೆನ್‌ಶನ್ ಕೊಡಲಾಗಿಲ್ಲ.*

☆ *ಬಡತನದ ರೇಖೆಯ ಕೆಳಗಿರುವ ಜನಸಂಖ್ಯೆ(22.3 ಶೇಕಡಾ).*

■ *ರಶ್ಯದಲ್ಲಿ ಮಾರುಕಟ್ಟೆ ಆರ್ಥಿಕ ಸುಧಾರಣೆಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಬೆಳೆಸುತ್ತಿದೆ ಎಂದರೆ ಅದೂ ಇಲ್ಲ. ಕಳೆದ ಹಲವು ವರ್ಷಗಳಿಂದ ಬಂಡವಾಳ ರಶ್ಯದಿಂದ ವಿದೇಶಗಳಿಗೆ ಓಡಿ ಹೋಗುತ್ತಿದೆ-ಕಾನೂನು ಬಾಹಿರವಾಗಿ.*

☆ *ಪ್ರತಿ ತಿಂಗಳು ಎರಡು ಶತ ಕೋಟಿ ಡಾಲರುಗಳಷ್ಟು, ಬಂಡವಾಳ ವಿದೇಶಗಳಿಗೆ ಕಾನೂನುಬಾಹಿರವಾಗಿ ಕಳಿಸಲಾಗುತ್ತಿದೆ.*

☆ *1991ರಲ್ಲಿ ಸೋವಿಯತ್ ಒಕ್ಕೂಟದ ಪತನದ ಸಮಯದಲ್ಲಿ ಒಟ್ಟು 150ರಿಂದ 3000 ಶತಕೋಟಿ ಡಾಲರು ರಶ್ಯ ಬಿಟ್ಟಿವೆ.*

☆ *ಪ್ರತಿ ತಿಂಗಳು ರಶ್ಯ ಬಿಡುತ್ತಿರುವ ಎರಡು ಶತಕೋಟಿ ಡಾಲರುಗಳಲ್ಲಿ ಶೇಕಡಾ 40 ಮಾಫಿಯಾ ಗುಂಪುಗಳಿಗೆ ಸೇರಿದ್ದು.*

ಸ್ವಾಮೀ ಇದು ಹತ್ತು ವರ್ಷಗಳ ಮಾರುಕಟ್ಟೆ ಸುಧಾರಣೆಗಳ ನೇರ ಫಲ!!

ಇರಾಕ್ ಜತೆ ಸಹಕಾರಕ್ಕೆ ರಶ್ಯನ್ ಪಾರ್ಲಿಮೆಂಟಿನ ನಿರ್ಧಾರ

ಜೂನ್ 4ರಂದು ರಶ್ಯದ ಪಾರ್ಲಿಮೆಂಟ್ 'ಡೂಮಾ', 'ಇರಾಕ್ ಗಣರಾಜ್ಯದ ಜತೆ ಸಹಕಾರ ಬೆಳೆಸಲು ಕ್ರಮ' ಎಂಬ ಕಾನೂನನ್ನು ಅವಿರೋಧವಾಗಿ ಅಂಗೀಕರಿಸಿತು. ರಶ್ಯನ್ ಡ್ಯೂಮಾದ ಭೂರಾಜಕೀಯ ಸಮಿತಿ ತಯಾರಿಸಿದ ಕರಡು ಮಸೂದೆಯ ಮೂರನೇ ಓದುವಿಕೆ ನಂತರ ಅದು ಕಾನೂನಾಗಿ ಮಂಜೂರು ಮಾಡಲ್ಪಟ್ಟಿತು.

ಈ ಕಾನೂನಿನ ಪ್ರಕಾರ ರಶ್ಯನ್ ಕೇಂದ್ರ ಸರಕಾರದ ಬಜೆಟ್‌ನ ಯಾವ ಭಾಗವೂ, ಭದ್ರತಾ ಸಮಿತಿ ವಿಧಿಸಿರುವ ದಿಗ್ಬಂಧನ ಜಾರಿ ಮಾಡಲು ಬಳಸುವಂತಿಲ್ಲ. ಇರಾಕಿನ ಸರಕಾರ ಹಾಗೂ ಇತರ ಸಂಸ್ಥೆಗಳೊಡನೆ ವಾಣಿಜ್ಯ ಸಂಬಂಧ ಆರಂಭಿಸಲು, ತೈಲ ಹಾಗೂ ತೈಲ ಉತ್ಪನ್ನಗಳನ್ನು ಕೊಳ್ಳಲು, ನಿಲ್ಲಿಸಲಾಗಿರುವ ಪ್ರಾಜೆಕ್ಟ್‌ಗಳನ್ನು ಪುನರಾರಂಭಿಸಲು ಹೊಸ ಪ್ರಾಜೆಕ್ಟುಗಳನ್ನು ಆರಂಭಿಸಲು, ಹಾಗೂ ಬಿಡಿ ಭಾಗಗಳು ಮತ್ತು ಉಪಕರಣಗಳನ್ನು ರಫ್ತು ಮಾಡಲು, ರಶ್ಯನ್ ಸರಕಾರದ ವಿಭಾಗಗಳು, ಕಂಪನಿಗಳು, ರಶ್ಯದಲ್ಲಿ ಕೆಲಸ ಮಾಡುತ್ತಿರುವ ವಿದೇಶೀ ಕಂಪನಿಗಳು, ಮತ್ತು ವ್ಯಕ್ತಿಗಳಿಗೆ ಈ ಕಾನೂನು ಅನುವು ಮಾಡಿಕೊಡುತ್ತದೆ. ಇರಾಕಿನ ಜತೆ ಇತರ ಆರ್ಥಿಕ ಸಂಬಂಧಗಳನ್ನು ಆರಂಭಿಸಲು, ವೈದ್ಯಕೀಯ, ಮಾನವೀಯ ಆಹಾರ ನೆರವು ನೀಡಲು, ಸರಕಾರ ವಿಭಾಗಗಳಿಗೆ ಈ ಕಾನೂನಿನ ಪ್ರಕಾರ ಸಾಧ್ಯವಾಗುತ್ತಿದೆ. ಈ ಕಾನೂನನ್ನು ಡ್ಯೂಮಾದ ಮುಂದೆ ತರುವಲ್ಲಿ ಹಾಗೂ ಅದನ್ನು ಅವಿರೋಧವಾಗಿ ಮಂಜೂರು ಮಾಡಿಸುವ ಪರಿಸರ ನಿರ್ಮಾಣ ಮಾಡು ವಲ್ಲಿ ಕಮ್ಯುನಿಸ್ಟ್ ಹಾಗೂ ಅವರ ಸಹವರ್ತಿ ಪಕ್ಷಗಳ ಸದಸ್ಯರು ದೊಡ್ಡ ಪಾತ್ರ ವಹಿಸಿದ್ದರು.

ಆಫ್ರಿಕಾದ ಮೂರನೇ ಒಂದು ಭಾಗ ಬಡವರು

ವಿಶ್ವ ಸಂಸ್ಥೆ ಬಡತನದ ಬಗ್ಗೆ ನಡೆಸಿರುವ ಒಂದು ಅಧ್ಯಯನದ ಪ್ರಕಾರ ಆಫ್ರಿಕಾದಲ್ಲಿ ಬಡತನ ದಂಗು ಬಡಿಸುವ ಪ್ರಮಾಣದಲ್ಲಿ ಏರುತ್ತಿದೆ. ಆಫ್ರಿಕಾದ ಮೂರನೇ ಒಂದು ಭಾಗ ಜನ ಸುಮಾರು 22 ಕೋಟಿ ಜನ ತೀರಾ ಬಡತನದಲ್ಲಿ ಇದ್ದಾರೆ.

ಜಗತ್ತಿನಲ್ಲಿ ಅತಿ ಬಡ ದೇಶಗಳು ಎಂದು ಪರಿಗಣಿಸಲಾದ 47 ದೇಶಗಳಲ್ಲಿ 32 ದೇಶಗಳು ಆಫ್ರಿಕಾದಲ್ಲಿ ಇವೆ. ದಕ್ಷಿಣ ಆಫ್ರಿಕಾದಲ್ಲಿ ಬಡತನ ನಿವಾರಣೆಯ ಯೋಜನೆಗಳ ಬಗ್ಗೆ ನಡೆದ ಪ್ರಾದೇಶಿಕ ವೇದಿಕೆಯಲ್ಲಿ ಈ ಅಧ್ಯಯನದ ಬಗ್ಗೆ ವಿಚಾರ ವಿಮರ್ಶೆ ನಡೆಯಿತು. ಈ ವೇದಿಕೆಯ ಸಭೆಯನ್ನು ನಮೀಬಿಯಾದ ರಾಜಧಾನಿ ವಿಂಡ್ ಹೋಕ್‌ನಲ್ಲಿ ನಡೆಸಲಾಯಿತು. ಆಫ್ರಿಕಾ ಈಗ 320 ಶತ ಕೋಟಿ ಡಾಲರುಗಳ ಹೊರೆ ಹೊತ್ತಿದೆ. ಆಫ್ರಿಕಾದ ಬಡತನಕ್ಕೆ ಕಾರಣವಾದ ಅಂಶಗಳು ಇನ್ನೂ ಹಾಗೆ ಹದಗೆಡುತ್ತಿದ್ದು, ಈ ಶತಮಾನದ ಕೊನೆ ಹೊತ್ತಿಗೆ 30 ಕೋಟಿ ಬಡವರು ಆಫ್ರಿಕಾದಲ್ಲಿ ಇರುತ್ತಾರೆ ಎಂದಿದೆ ಈ ಅಧ್ಯಯನ.

ಹಳಿಯಾಳ ಪದವಿ ಕಾಲೇಜ್ ಸಮಸ್ಯೆಗಳ ಪರಿಹಾರಕ್ಕೆ ಎಸ್‌ಎಫ್‌ಐ ಆಗ್ರಹ

ಹಳಿಯಾಳ ಸರ್ಕಾರಿ ಪದವಿ ಕಾಲೇಜು ಹಲವು ಸಮಸ್ಯೆಗಳಿಂದ ಕೂಡಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಎಲ್ಲ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಎಸ್‌ಎಫ್‌ಐ ಹಳಿಯಾಳ ನಗರ ಸಮಿತಿ ಸರಕಾರಕ್ಕೆ ಆಗ್ರಹಿಸಿದೆ.

ಸರಕಾರ ಕೂಡಲೇ ಸಮಸ್ಯೆ ಪರಿಹರಿಸದಿದ್ದರೆ, ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಸ್‌ಎಫ್‌ಐ ನ ಮುಖಂಡರಾದ ರಾಜು ಮಾಥರ, ಕೇಶವ ಭೈ ಸರಕಾರವನ್ನು ಎಚ್ಚರಿಸಿದ್ದಾರೆ.

ಇತ್ತೀಚೆಗೆ ನಡೆದ ಹಳಿಯಾಳ ನಗರ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ಶಿಕ್ಷೆ: ಹಳಿಯಾಳದ ಶಿವಾಜಿ ಕಿರಿಯ ಮಹಾವಿದ್ಯಾಲಯದ ಉರ್ದು ಪ್ರೌಢಶಾಲೆಯ 8ನೇ ವರ್ಗದ ವಿದ್ಯಾರ್ಥಿ ಮಹಮ್ಮದ್ ಯೂಕೂಬ್ ಎಂ.ಕಿತ್ತೂರ ಅವನಿಗೆ ಜುಲೈ 3 ರಂದು ಅಲ್ಲಿಯ ಶಿಕ್ಷಕರೊಬ್ಬರು ಕಪಾಳಕ್ಕೆ ಜೋರಾಗಿ ಹೊಡೆದರಲ್ಲದೆ 150 ಬೈಟಕ್ ತೆಗೆಸಿದರು. ಇದರಿಂದ ತೊಂದರೆಗೊಳಗಾದ ವಿದ್ಯಾರ್ಥಿ ನಿತ್ರಾಣನಾದನಲ್ಲದೇ ವಾಂತಿಯನ್ನು ಸಹ ಮಾಡಿಕೊಂಡ. ನಂತರ ವಿದ್ಯಾರ್ಥಿಯನ್ನು ಶಿಕ್ಷಕ ವೃಂದ, ಪ್ರಾಂಶುಪಾಲರು ಆಸ್ಪತ್ರೆಗೆ ಸೇರಿಸಿದರು.

ಈ ಘಟನೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಹಳಿಯಾಳ ಸಮಿತಿ ತೀವ್ರವಾಗಿ ಖಂಡಿಸಿದ್ದು ಇಂತಹ ಘಟನೆಗಳು ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯಗಳು ಮರುಕಳಿಸದಂತೆ ಸಂಬಂಧಿಸಿದವರು ನೋಡಿಕೊಳ್ಳಬೇಕೆಂದು ಎಚ್ಚರಿಸಿದೆ. ಅಂತಹ ಘಟನೆಗಳು ಎಸ್‌ಎಫ್‌ಐಗೆ ಕಂಡು ಬಂದಲ್ಲಿ ಅದರ ವಿರುದ್ಧ ತೀವ್ರ ಹೋರಾಟ ನಡೆಸಬೇಕಾಗುವುದೆಂದು ಎಸ್‌ಎಫ್‌ಐ ಘಟಕ ಎಚ್ಚರಿಸಿದೆ.

ಹೆಗ್ಗಡದೇವನ ಕೋಟೆಯಲ್ಲಿ ಅಕ್ರಮಗಳ ವಿರುದ್ಧ ಪ್ರತಿಭಟನೆ

ಇಲ್ಲಿನ ತಾಲ್ಲೂಕು ಪಂಚಾಯಿತಿಯಲ್ಲಿ ನಡೆದಿರುವ ಅಕ್ರಮಗಳ ಕುರಿತು 'ಸಿಓಡಿ ತನಿಖೆ'ಗಾಗಿ ಒತ್ತಾಯಿಸಿ ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ಬಿಡಿಓ ನವರನ್ನು ವರ್ಗಾವಣೆ ಮಾಡುವಂತೆ ಆಗ್ರಹಿಸಿ ತಾಲ್ಲೂಕು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು, ತಾ. ಪಂ. ಸದಸ್ಯರೂ ಆದ ಸಿ.ಮಾರುತಿ ಹಾಗೂ ಕಾರ್ಯದರ್ಶಿ ಬಿ.ಎಂ.ಶಿವಣ್ಣರವರ ನೇತೃತ್ವದಲ್ಲಿನ ಪ್ರತಿಭಟನಾ ರ್‍ಯಾಲಿ ಜುಲೈ 1 ರಂದು ನಡೆಯಿತು. ತಾಲ್ಲೂಕು ತಹಶೀಲ್ದಾರ್ ರವರಿಗೆ ಪ್ರತಿಭಟನಾ ಮನವಿ ಪತ್ರ ಸಲ್ಲಿಸಲಾಯಿತು.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಸಿ.ಮಾರುತಿ ಅವರು ಇಲ್ಲಿನ ಕಛೇರಿಯಲ್ಲಿ ನಡೆದಿರುವ ಅಕ್ರಮಗಳ ಕುರಿತು ತನಿಖೆ ಶೀಘ್ರ ಪ್ರಾರಂಭವಾಗಬೇಕು. ಹಾಗೂ ತಾಲ್ಲೂಕಿನ ಅಭಿವೃದ್ಧಿಗೆ ಮಾರಕವಾಗುತ್ತಿರುವ ಅಸಮರ್ಥ, ಕಾರ್ಯ ನಿರ್ವಾಹಕ ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಕೂಡಲೇ ವರ್ಗ ಮಾಡ ಬೇಕೆಂದು ಆಗ್ರಹಪಡಿಸಿದರು. ತನಿಖೆ ಕಾರ್ಯ ಪ್ರಾರಂಭವಾಗಲು ಹಿಂದೇಟು ಹಾಕಿದರೆ ಮುಂದಿನ ಹಂತವಾಗಿ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿ ಎದುರು ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆಂದು ಅವರು ಎಚ್ಚರಿಸಿದರು. ನಂತರ ಪ್ರತಿಭಟನಾ ರ್‍ಯಾಲಿಯು ತಾಲ್ಲೂಕು ಕಛೇರಿ ತಲುಪಿ, ತಾಲ್ಲೂಕು ತಹಶೀಲ್ದಾರ್ ರವರ ಗೈರು ಹಾಜರಿಯಲ್ಲಿ ಶಿರಸ್ತೇದಾರ್ ರವರಿಗೆ ಮನವಿ ಪತ್ರವನ್ನು ನೀಡುತ್ತಾ ಪಂಚಾಯತ್ ರಾಜ್ ಸಚಿವರು, ಹಾಗೂ ಮುಖ್ಯಮಂತ್ರಿಗಳಿಗೆ ತಲುಪಿಸಿ ಕೂಡಲೇ ತನಿಖೆ ನಡೆಸುವಂತೆ ಆಗ್ರಹಿಸಿದರು.

ಪಿಯುಸಿ ಕಂಪ್ಯೂಟರ್ ಸೈನ್ಸ್ ಫಲಿತಾಂಶವನ್ನು ಪರಿಶೀಲಿಸಲು ಎಸ್‌ಎಫ್‌ಐ ಆಗ್ರಹ

ಈ ಬಾರಿಯ ದ್ವಿತೀಯ ಪಿಯುಸಿ ಕಂಪ್ಯೂಟರ್ ಸೈನ್ಸ್ ವಿಷಯದ ಫಲಿತಾಂಶವನ್ನು ಪುನರ್ ಪರಿಶೀಲಿಸಿ ಸೂಕ್ತ ಕ್ರಮಾಂಕ ನೀಡಿ, ವಿದ್ಯಾರ್ಥಿಗಳಿಗಾದ ಅನ್ಯಾಯವನ್ನು ಸರಿಪಡಿಸಬೇಕೆಂದು ಎಸ್‌ಎಫ್‌ಐ ದ.ಕ. ಜಿಲ್ಲಾ ಸಮಿತಿ ಮೂಲಕ ಸರಕಾರವನ್ನು ಆಗ್ರಹಿಸಿದೆ. ಕಂಪ್ಯೂಟರ್ ಸೈನ್ಸ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸಂಪೂರ್ಣವಾಗಿ ಸಿಲಬಸ್‌ಗಿಂತ ಹೊರತಾದ ಪ್ರಶ್ನೆಗಳನ್ನು ಹೊಂದಿರುವುದೇ ಇದಕ್ಕೆ ಮೂಲ ಕಾರಣವಾಗಿದೆ.

ಈ ಬಗ್ಗೆ ಈಗಾಗಲೇ ಶಿಕ್ಷಣ ಸಚಿವರಾದ ವಿ.ಸೋಮಶೇಖರ್‌ರವರಿಗೆ ಮನವಿಯನ್ನು ಅರ್ಪಿಸಲಾಗಿದೆ. ಜೂನ್ 17 ರಂದು ಎಸ್‌ಎಫ್‌ಐ ನಿಯೋಗವೊಂದು ಶಿಕ್ಷಣ ನಿರ್ದೇಶಕರನ್ನು (ಡಿಡಿಪಿಐ) ಭೇಟಿಯಾಗಿ, ಫಲಿತಾಂಶವನ್ನು ಪುನರ್‌ಪರಿಶೀಲಿಸಿ ಸೂಕ್ತ ಕ್ರಮಾಂಕವನ್ನು ನೀಡಿ, ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದೆ.

ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ಹೇಗೆ?

– ಇ.ಎಂ.ಎಸ್. ಸಲಹೆ



ಜನತಾದಳ ಕಾಂಗ್ರೆಸ್ಸನ್ನು ಹಿಂದೆ ಹಾಕಿದೆ. ತನ್ನನ್ನು ಬಂಧಿಸಿ ಜೈಲಿಗ ಕಳಿಸಿದರೆ ಅಲ್ಲಿಂದ ಲೇ ಆಳುತ್ತೇನೆ ಎನ್ನುವ ಒಬ್ಬ ಮುಖ್ಯಮಂತ್ರಿಯನ್ನು ಅದು ದೇಶಕ್ಕೆ ಕೊಟ್ಟಿದೆ ಎನ್ನುತ್ತಾರೆ ಸಿಪಿಐ(ಎಂ)ಯ ಹಿರಿಯ ಮುಖಂಡ ಇ.ಎಂ.ಎಸ್. ನಂಬೂದರಿಪಾಡ್. ನಿಜ, ಈಗ ಲಾಲೂ ಪ್ರಸಾದ್ ಯಾದವ್ ಜನತಾದಳದಲ್ಲಿಲ್ಲ, ಆದರೆ ಕಾಂಗ್ರೆಸ್‌ನ ಸಾಧನೆ ಇಲ್ಲಿಯೂ ಕಮ್ಮಿಯೇನಲ್ಲ. ಲಾಲೂ ಜತೆಗೆ ಅವರ ಮೊದಲು ಮುಖ್ಯಮಂತ್ರಿಯಾಗಿದ್ದ ಕಾಂಗ್ರೆಸ್‌ನ ಜಗನ್ನಾಥ್ ಮಿಶ್ರಾ ಕೂಡಾ ಈ ಹಗರಣದಲ್ಲಿ ಇದ್ದಾರೆ ತಾನೆ! ಈ ವಿಷಯದಲ್ಲಿ ಕಾಂಗ್ರೆಸ್ ಸ್ವಲ್ಪ ಹಿಂದಿದ್ದರೂ ಒಟ್ಟಾರೆಯಾಗಿ ಭ್ರಷ್ಟಾಚಾರದ ವಿಷಯದಲ್ಲಿ ಅದು ಈಗಲೂ ಎಲ್ಲರಿಗಿಂತಲೂ ಮುಂದಿದೆ ಎನ್ನುತ್ತಾರೆ ಇ.ಎಂ.ಎಸ್. ಏಕೆಂದರೆ ಭ್ರಷ್ಟಾಚಾರದ ಆಪಾದನೆ ಹೊತ್ತ ಇಬ್ಬರು ಕಾಂಗ್ರೆಸ್ ಅಧ್ಯಕ್ಷರು, ಇಬ್ಬರು ಪ್ರಧಾನ ಮಂತ್ರಿಗಳನ್ನು ಕೊಟ್ಟ 'ಕೀರ್ತಿ' ಅದರದ್ದು.

ಇತರ ಬಂಡವಾಳಶಾಹಿ ಪಕ್ಷಗಳೂ ಬಹಳ ಹಿಂದೆ ಬಿದ್ದಿಲ್ಲ. ಬಿಜೆಪಿ ಅಧ್ಯಕ್ಷರು ತಾಂತ್ರಿಕ ಕಾರಣದಿಂದಷ್ಟೆ. ಒಂದು ಕ್ರಿಮಿನಲ್-ಭ್ರಷ್ಟಾಚಾರ ಕೇಸಿನಿಂದ ತಪ್ಪಿಸಿಕೊಂಡಿದ್ದಾರೆ. ಅವರ ಇತರ ಮುಖ್ಯ ನಾಯಕರ ಮೇಲೂ ಇಂತಹ ಆಪಾದನೆಗಳಿವೆ. ಕೇವಲ ಎಡಪಕ್ಷಗಳ ಮುಖಂಡರ ಮೇಲಷ್ಟೆ ಇಂತಹ ಆಪಾದನೆಗಳಿಲ್ಲ. ಆದರೆ ಅವರೂ ಒಂದು ಭ್ರಷ್ಟ ವಾತಾವರಣಗಳಲ್ಲಿ ಕೆಲಸ ಮಾಡಬೇಕಾದ್ದರಿಂದ ಈ ರೋಗ ಆ ಪಕ್ಷಗಳನ್ನು ತಟ್ಟುವ ಸಾಧ್ಯತೆಯೂ ಇದೆ. ಆದ್ದರಿಂದಲೇ ಸಿಪಿಐ(ಎಂ) ಒಂದು ಸರಿಪಡಿಕೆ ಆಂದೋಲನವನ್ನು ಆರಂಭಿಸಿದೆ ಎನ್ನುತ್ತಾರೆ ಇ.ಎಂ.ಎಸ್.


ಸಿಪಿಐ(ಎಂ)ನಂತೆ ಇತರ ಪಕ್ಷಗಳೂ ಭ್ರಷ್ಟಾಚಾರ ಮತ್ತು ಇತರ ದುರಾಚಾರಗಳ ವಿರುದ್ಧ ಹೋರಾಟ ನಡೆಸಲು ಸಾಧ್ಯ ಎನ್ನುತ್ತಾ ಇ.ಎಂ.ಎಸ್. ಈ ವಿಷಯದಲ್ಲಿ ಎಲ್ಲಾ ಪಕ್ಷಗಳು ಒಂದು ನೀತಿ ಸಂಹಿತೆಯನ್ನು ರೂಪಿಸಬೇಕು ಎನ್ನುತ್ತಾರೆ. ಅವರ ಸಲಹೆಗಳು ಹೀಗಿವೆ -

1. ಯಾವುದೇ ರಾಜಕೀಯ ಪಕ್ಷದ ಮುಖಂಡ ಅಥವಾ ಸದಸ್ಯರ ಮೇಲೆ ಸಾರ್ವಜನಿಕವಾಗಿ ಗಂಭೀರ. ಆಪಾದನೆಗಳು ಬಂದಾಗ ಆ ಪಕ್ಷವೇ ಅಂತವರನ್ನು ತನಿಖೆಗೆ ಗುರಿಪಡಿಸಬೇಕು-ಅಧಿಕೃತವಾಗಿ ಕ್ರಮ ಕೈಗೊಳ್ಳುವ ಮೊದಲೇ.
2. ಈ ತನಿಖೆಯಲ್ಲಿ ಆಪಾದನೆ ನಿಜವೆಂದು ಕಂಡು ಬಂದರೆ ಅಧಿಕೃತವಾಗಿ ಕಾನೂನು ಕ್ರಮ ಜರುಗಿಸಲಿ ಬಿಡಲಿ ಪಕ್ಷ ಅದಕ್ಕೆ ಮೊದಲೇ ಆ ಸದಸ್ಯ ಜವಾಬ್ದಾರಿಯುತ ಸ್ಥಾನಗಳಿಂದ ಕೆಳಗಿಳಿಯುವಂತೆ ಹೇಳಬೇಕು.
3. ಇಂತಹ ವ್ಯಕ್ತಿಗಳನ್ನು ಸಮರ್ಥಿಸುವವರ ವಿರುದ್ಧವೂ ಪಕ್ಷ ಕ್ರಮ ಕೈಗೊಳ್ಳಬೇಕು. ಏಕೆಂದರೆ ಭ್ರಷ್ಟ ನಡುವಳಿಕೆಯ ಅಪರಾಧಿಯನ್ನು ರಕ್ಷಿಸುವುದು ಕೂಡಾ ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ನಂಬಿರುವ ನೀತಿಗಳಿಗೆ, ಧೋರಣೆಗಳ ವಿರುದ್ಧ ಎಸಗುವ ಅಪರಾಧವಾಗುತ್ತದೆ.

ಆದರೆ ಇದು ಇಂತಹ ನೀತಿ ಸಂಹಿತೆಯ ಪ್ರಶ್ನೆಯಷ್ಟೇ ಅಲ್ಲ ಎಂದೂ ಇ.ಎಂ.ಎಸ್. ಎಚ್ಚರಿಸುತ್ತಾರೆ. ಏಕೆಂದರೆ ಇಂತಹ ಭ್ರಷ್ಟ ಆಚರಣೆಗಳ ಹಿಂದೆ ಇರುವುದು ಬಂಡವಾಳಶಾಹಿ ಸಮಾಜದ ಒಂದು ತತ್ವಶಾಸ್ತ್ರ. ಬಂಡವಾಳಶಾಹಿ ಸಮಾಜದಲ್ಲಿ ಹಣ ಮಾಡಲಾರದವನನ್ನು ಹುಚ್ಚ ಎಂದು ಭಾವಿಸಲಾಗುತ್ತದೆ. ತನ್ನ ಸಾಮಾಜಿಕ-ರಾಜಕೀಯ ಸ್ಥಾನಮಾನಗಳನ್ನು ಬಳಸಿ ಹೇಗಾದರೂ ಹಣ ಮಾಡುವವನೇ ಬುದ್ಧಿವಂತ ಎಂದು ಬಗೆಯಲಾಗುತ್ತದೆ. ಆದ್ದರಿಂದ ಮೇಲೆ ಹೇಳಿದ ನೀತಿ ಸಂಹಿತೆಯನ್ನು ಜಾರಿ ಮಾಡಬೇಕಾದರೆ ಬಂಡವಾಳಶಾಹಿ ಸಮಾಜದ ಈ ತತ್ವಶಾಸ್ತ್ರದ ವಿರುದ್ಧ ಒಂದು ವೃಥ ಹೋರಾಟ ಅನಿವಾರ್ಯ ಎನ್ನುವ ಇ.ಎಂ.ಎಸ್. ಈ ಆಧಾರದ ಮೇಲೆ ಒಂದು ವಿಶಾಲ ಹೋರಾಟವನ್ನು ಬೆಳೆಸಬಹುದಾದರೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಇದರಲ್ಲಿ ಮೊದಲ ಹೆಜ್ಜೆ ಇಡಬೇಕು ಎನ್ನುತ್ತಾರೆ. ○

ಇದು ನಿಮಗೆ ಗೊತ್ತೆ?

ಸಿಪಿಐ(ಎಂ)ನ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿನ ಒಂದು ವ್ಯಂಗ್ಯ ಚಿತ್ರ



■ ಸಿಬಿಐನ ನಿರ್ದೇಶಕರಾಗಿದ್ದ ಜೋಗಿಂದರ್ ಸಿಂಗ್‌ಗೆ 'ಬಡ್ತಿ' ನೀಡಲಾಯಿತು ಎನ್ನಲಾಗುತ್ತಿದೆ. ದೊಡ್ಡ ದೊಡ್ಡ ಹಗರಣಗಳ ತನಿಖೆಯಿಂದ 'ಬಡ್ತಿ' ನೀಡಿದ ಮೇಲೆ ಅವರಿಗೀಗ ಕೊಟ್ಟಿರುವ ಕೆಲಸ ಸ್ವಾತಂತ್ರ್ಯ ಹೋರಾಟಗಾರರ ಪೆನ್ಷನ್ ನೋಡಿಕೊಳ್ಳುವುದು ಹಾಗೂ ಭಾರತದಲ್ಲಿ ವಿದೇಶಿ ನಾಗರೀಕರ ಮೇಲೆ ಕಣ್ಣಿಡುವುದು!

■ ಜೋಗಿಂದರ್ ಸಿಂಗ್‌ರವರ ನಿವೃತ್ತಿಗೆ ಇನ್ನೂ ನಾಲ್ಕು ತಿಂಗಳಿದ್ದವು. ಅವರ ಸ್ಥಾನಕ್ಕೆ ಬಂದ ಆರ್.ಸಿ.ಶರ್ಮಾ ಜನವರಿ 31 ರಂದೇ ನಿವೃತ್ತರಾಗಬೇಕಿತ್ತು. ಒಂದು ವರ್ಷದ ವಿಸ್ತರಣೆಯನ್ನು ಅವರಿಗೆ ನೀಡಲಾಗಿತ್ತು. ವಿಸ್ತರಣೆಯ ಅವಧಿಯಲ್ಲಿ 'ಬಡ್ತಿ' ನೀಡಬಾರದು ಎಂಬುದೊಂದು ಸಂಪ್ರದಾಯ. ಆದರೆ ಶರ್ಮಾರಿಗೆ ಬಡ್ತಿ ನೀಡಲಾಯಿತು.

■ ಬೊಫೋರ್ಸ್ ತನಿಖೆ ಒಂದು ನಿರ್ಣಾಯಕ ಹಂತದಲ್ಲಿದ್ದಾಗ ಅದರ ಜವಾಬ್ದಾರಿ ಹೊತ್ತಿದ್ದ ಕೆ.ಮಾಧವನ್‌ರನ್ನು ಸಾರಾಸಗಟು ಕಿತ್ತುಹಾಕಲಾಯಿತು. ಇದನ್ನು ಜನತಾದಳವೂ ತೀವ್ರವಾಗಿ ವಿರೋಧಿಸಿತ್ತು. ಆಗ ಮಾಧವನ್ ಸ್ಥಾನಕ್ಕೆ ಕಾಂಗ್ರೆಸ್ ಸರಕಾರ ತಂದ ವ್ಯಕ್ತಿ ಇದೇ ಆರ್.ಸಿ.ಶರ್ಮಾ.

■ ಬೊಫೋರ್ಸ್ ಹಗರಣದಲ್ಲಿ ಕ್ವಟ್ರೋಚಿ ಎಂಬ ಇಟಾಲಿಯನ್ ನಾಗರೀಕ ಸಿಲುಕಿದ್ದ ಎಂಬ ಗುಮಾನಿಯಿತ್ತು. ಈ ಬಗ್ಗೆ ದೀರ್ಘಕಾಲ ಕ್ರಮ ಕೈಗೊಳ್ಳದೆ ಆ ವ್ಯಕ್ತಿ ಭಾರತವನ್ನು ಬಿಟ್ಟು ಹೋಗಲು ಅವಕಾಶ ನೀಡಲಾಯಿತು. ಇದಕ್ಕೆ ಈ ಆರ್.ಸಿ.ಶರ್ಮಾರೇ ಕಾರಣ ಎಂದು ಹೇಳಲಾಗುತ್ತಿದೆ. ಸಿಬಿಐ ನಿರ್ದೇಶಕರ ಸ್ಥಾನ ವಹಿಸಿಕೊಂಡ ನಂತರದ ಆತನ ಹೇಳಿಕೆಗಳೂ ಆತನ ಬಗ್ಗೆ ಗುಮಾನಿ ಹೆಚ್ಚಿಸುವಂತಹವೇ ವಿನಹ ಕಮ್ಮಿ ಮಾಡುವಂತಹುದಲ್ಲ.

ಸಂಯುಕ್ತ ರಂಗ ಜನರ ವಿಶ್ವಾಸವನ್ನು ಉಳಿಸಿಕೊಳ್ಳಬೇಕಾದರೆ, ಬೆಳೆಸಿಕೊಳ್ಳಬೇಕಾದರೆ ಈ ಭ್ರಷ್ಟಾಚಾರದ ಹಗರಣಗಳ ತನಿಖೆಯ ಹಾಗೂ ತಪ್ಪಿತಸ್ಥರನ್ನು ಪತ್ತೆ ಹಚ್ಚುವ ಪ್ರಯತ್ನವನ್ನು ದ್ವಿಗುಣಗೊಳಿಸಬೇಕು. ಈ ಹಿಂದೆ ಎರಡು ಸಂದರ್ಭಗಳಲ್ಲಿ ಜನ ರಾಜೀವ್ ಗಾಂಧಿ ಹಾಗೂ ನರಸಿಂಹರಾವ್‌ರನ್ನು ಚುನಾವಣೆಯಲ್ಲಿ ಸೋಲಿಸಿದರು. ಎರಡು ಬಾರಿಯೂ ಅವರ ಮೇಲೆ ಇತರ ಆಪಾದನೆಗಳೊಂದಿಗೆ ನಿರ್ದಿಷ್ಟ ಭ್ರಷ್ಟಾಚಾರದ ಆಪಾದನೆಗಳಿದ್ದವು.

ಭ್ರಷ್ಟರನ್ನು ರಕ್ಷಿಸುವುದು ಭ್ರಷ್ಟಾಚಾರಕ್ಕಿಂತ ಭಿನ್ನವಾದ ಅಪರಾಧವೇನಲ್ಲ. ಸಂಯುಕ್ತ ರಂಗ ಸರಕಾರಕ್ಕೆ ಕಾಂಗ್ರೆಸ್ ರೀತಿಯಲ್ಲಿ ಪಾಠ ಕಲಿಯುವ ಇಚ್ಛೆ ಇಲ್ಲದಿದ್ದರೆ ಈಗಲೇ ಎಚ್ಚೆತ್ತು ಕೊಳ್ಳುವುದು ಒಳ್ಳೆಯದು ಎಂದು ಸಿಪಿಐ(ಎಂ) ಕೇಂದ್ರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ತನ್ನ ಸಂಪಾದಕೀಯದಲ್ಲಿ ಎಚ್ಚರಿಸಿದೆ.

ಪುಸ್ತಕ ಪರಿಚಯ - ಡಾ. ಆರ್.ವಿ.ಭಂಡಾರಿ.

"ರಾಷ್ಟ್ರೀಯತೆ ಮತ್ತು ಮುಸ್ಲಿಮರು"

ಲೇ: ಫಕೀರ್ ಮಹ್ಮದ್ ಕಟ್ಪಾಡಿ
ಕೊಟ್ಟೂರ ಪ್ರಕಾಶನ,
ಬೆಲೆ: ರೂ. 15. ಪುಟ 52
ವರ್ಷ 1997

ಫಕೀರ ಮಹ್ಮದ್ ಕಟ್ಪಾಡಿಯವರ ಹೆಸರು ಅಕ್ಷರಲೋಕಕ್ಕೆ ಹೊಸದಲ್ಲ. ಅವರು ಕನ್ನಡದ ಉತ್ತಮ ಶ್ರೇಣಿಯ ಕಥೆಗಾರರು. ಬಹಳ ಮುಖ್ಯ ಚಿಂತಕರು. "ರಾಷ್ಟ್ರೀಯತೆ ಮತ್ತು ಮುಸ್ಲಿಮರು" ಒಂದು ಚಿಕ್ಕ ಪುಸ್ತಕ. ಆದರೆ ಬಹಳ ಮುಖ್ಯ ಪುಸ್ತಕ.

ಸಮಸ್ಯೆಯನ್ನು ಅವರು ಸಾಹಿತ್ಯಿಕ ಆಪ್ತತೆಯಿಂದ, ನ್ಯಾಯಶೀಲವಾದ ತಾರ್ಕಿಕತೆಯಿಂದ, ಮಾನವೀಯವಾದ ಆರ್ತತೆಯಿಂದ ಚಿತ್ರಿಸುತ್ತಾರೆ. ಇದನ್ನು ನಮ್ಮ ಯುವಜನರು ವಿದ್ಯಾರ್ಥಿಗಳು, ರಾಜಕಾರಣಿಗಳು ಹಿಂದೂ-ಮುಸ್ಲಿಂ ಧಾರ್ಮಿಕರು ಎಲ್ಲರೂ ಓದಬೇಕು. ಸಮಸ್ಯೆಯ ಸುತ್ತ ಕ್ಯಾಂಪು ಹಾಕಿರುವ ರಾಜಕಾರಣದ ಆಷಾಡಭೂತಿತನ, ಧಾರ್ಮಿಕ ಹುಂಬತನ, ಕೋಮುವಾದಿ ಮೂಲಭೂತವಾದಿತ್ವದ ಅಮಾನವೀಯತೆಗಳ ಹುನ್ನಾರ ಬಯಲಾಗುತ್ತದೆ.

ಮೊದಲ ಪ್ರಬಂಧದಲ್ಲಿ 'ರಾಷ್ಟ್ರೀಯತೆ ಎಂದರೇನು?' ಎಂಬ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಾರೆ. ರಾಷ್ಟ್ರೀಯತೆಯೆಂದರೆ ದೇಶಪ್ರೇಮ, ಸರಿಯೆ. ಆದರೆ ಒಬ್ಬ ಸ್ಮಗ್ಲರ್, ಒಬ್ಬ ಭಯೋತ್ಪಾದಕ ದೇಶಪ್ರೇಮಿಯೇ? ಅಲ್ಲ. ಆತ ದೇಶದ್ರೋಹಿಯೇ ಎಂದು ನಮ್ಮ ತೀರ್ಮಾನ. ಸರಿ. ಆದರೆ ಇದೇ ಜನ ರಾಜಕೀಯ ಪಕ್ಷದ ಫಂಡಿಗೆ ಹಣ ಕೊಟ್ಟಾಗ, ರಾಷ್ಟ್ರೀಯವಾದಿಗಳ ದೇಶ ಸೇವೆಗೆ ಹಣ ಕೊಟ್ಟಾಗ ಏನಾಗುತ್ತಾರೆ? ಹೀಗೆ ರಾಷ್ಟ್ರೀಯವಾದಿಗಳ ಗೋಸುಂಬೆತನವನ್ನು ಬಿಡಿಸಿಟ್ಟಿದ್ದಾರೆ. 'ರಾಷ್ಟ್ರೀಯತೆ ಎನ್ನುವುದು ಯಾವಾಗಲೂ ಯುದ್ಧ ಅಥವಾ ಘರ್ಷಣೆಯ ಪರಿಸ್ಥಿತಿಯಲ್ಲಿ ಉದ್ರೇಕಗೊಳ್ಳುವ ಮಾನಸಿಕ ಕ್ರಿಯೆ' ಎನ್ನುತ್ತಾರೆ ಲೇಖಕರು. ಉದಾಹರಣೆಗೆ ಭಾರತ ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ, ಅಯೋಧ್ಯೆಯ ಮಂದಿರ-ಮಸೀದಿಯ ವಿವಾದ ಸಂದರ್ಭದಲ್ಲಿ, ಗಂಗಾ ಕಾಲುವೆಗೆ ಸಹಸ್ರಾರು ಮುಸ್ಲಿಮ್ ಗಂಡಸರನ್ನು ಕತ್ತರಿಸಿ ಹಾಕಿ ರಕ್ತದ ಕಾಲುವೆಯನ್ನಾಗಿಸಿದ ಸಂದರ್ಭದಲ್ಲಿ, ಬದಾವುನ್‌ನಲ್ಲಿ ರೈಲನ್ನು ನಿಲ್ಲಿಸಿ ಮುಸ್ಲಿಂ ಗಂಡಸರನ್ನು ಮಕ್ಕಳನ್ನು, ಬುರ್ಖಾದಾರಿ ಹೆಂಗಸರನ್ನು ಸಾಲಾಗಿ ನಿಲ್ಲಿಸಿ ಕಚಕಚನೆ ಕತ್ತರಿಸಿ ಹಾಕಿದ ವಾತಾವರಣದ ಹಿನ್ನೆಲೆಯಲ್ಲಿ ರಾಷ್ಟ್ರೀಯವಾದ ಹೇಗೆ ಉದ್ರೇಕಗೊಳ್ಳುತ್ತದೆ ಎಂಬ ರಾಷ್ಟ್ರೀಯತೆಯ ಕರಾಳ ಮುಖವನ್ನು ಅವರು ಅನಾವರಣಗೊಳಿಸುತ್ತಾರೆ. ಆಮೇಲೆ ಭಾರತ ಮಾತಾ ಎಂದರೆ ಯಾರು? ಎಂಬ ನೆಪದೂ ಅವರ ವಿವರಣೆಯನ್ನು ಕೊಡುತ್ತಾರೆ. ಭಾರತ ಮಾತಾ ಎಂದರೆ ಈ ನೆಲ, ಈ ಜಲ, ಈ ದೇಶ ಯಾವುದೂ ಅಲ್ಲ. ಈ ದೇಶದ ವಿವಿಧ ಭಾಷೆಯ, ವಿವಿಧ ಸಂಸ್ಕೃತಿಯ, ವಿವಿಧ ಧರ್ಮದ ಜನಸಮೂಹ" ಎನ್ನುತ್ತಾರೆ.

ಭಾರತದ ಮುಸ್ಲಿಮರು ಈ ದೇಶಕ್ಕೆ ನಿಷ್ಠರಲ್ಲ, ಪಾಕಿಸ್ತಾನಕ್ಕೆ ನಿಷ್ಠರು. "ಇವರು ಭಾರತ ಮತ್ತು ಪಾಕಿಸ್ತಾನಕ್ಕೆ ಕ್ರಿಕೆಟ್ ಪಂದ್ಯ ನಡೆಯುತ್ತಿದ್ದಾಗ ಪಾಕಿಸ್ತಾನ ಗೆದ್ದರೆ ಪಟಾಕಿಹಚ್ಚಿ ಸಂಭ್ರಮಿಸುತ್ತಾರೆ, ಭಾರತ ವಿಭಜನೆಗೆ ಮುಸ್ಲಿಮರೇ ಕಾರಣ, ತಮ್ಮ ಜನಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಭಾರತವನ್ನು ಮುಸ್ಲಿಂ ರಾಷ್ಟ್ರವನ್ನಾಗಿ ಮಾಡುವುದಕ್ಕಾಗಿ ಕುಟುಂಬ ಯೋಜನೆಯನ್ನು ಪಾಲಿಸದೆ ನಾಲ್ಕು ನಾಲ್ಕು ಮದುವೆಯಾಗಿ ಡಜನ್ ಗಟ್ಟಲೆ ಮಕ್ಕಳನ್ನು ಹುಟ್ಟಿಸುತ್ತಾರೆ, ಮುಸ್ಲಿಮರಿಗೆ ಸರಕಾರ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ - ಮುಂತಾದ ಪಟ್ಟಿಯನ್ನಿಡುತ್ತಾರೆ ಎಂಬ ಆರೋಪ, ಸಂಶಯ, ಮುಗ್ಧ ಮತ್ತು ಮೋಸದ-ಕುತಂತ್ರದ ಪ್ರಶ್ನೆಗಳ ಪಟ್ಟಿಯನ್ನು ಎತ್ತಿಕೊಂಡು ಅದು ಹೇಗೆ ಆಧಾರರಹಿತ ಎಂಬುದನ್ನ ವಿಶ್ಲೇಷಣೆ ಸಹಿತ ಸಿದ್ಧ ಮಾಡುತ್ತಾರೆ. ಬಹುಪತ್ನಿತ್ವದಲ್ಲಿ ಹಿಂದುಗಳು ಹೇಗೆ ಮುಸ್ಲಿಮರಿಗಿಂತ ಮುಂದೆ ಎಂಬುದನ್ನು ಹೇಳುತ್ತಾರೆ. "ಹಾಗೆ ಹೇಳುತ್ತಾ ಹೋದರೆ ಮುಸ್ಲಿಮರಿಗೆ ಈ ದೇಶದಲ್ಲಿ ನೀಡಿರುವ ಒಂದೇ ಒಂದು ಸವಲತ್ತೆಂದರೆ ಈ ನೆಲದಲ್ಲಿ ಮುಸ್ಲಿಮನಾಗಿ ಬದುಕಲು ಬಿಟ್ಟಿರುವುದು" ಎಂದು ಮನ ಕಲಕುವ ಮಾತು ಹೇಳುತ್ತಾರೆ. 'ಹಿಂದುವಾಗಲಿ ಮುಸ್ಲಿಮನಾಗಲಿ ಮಗುವೊಂದು ಹುಟ್ಟಿ ಬೆಳೆಯುವುದು ಧಾರ್ಮಿಕ ಮತಾಂಧತೆಯ ವಾತಾವರಣದಲ್ಲೇ' ಎಂಬ ಸಮಸ್ಯೆಯ ತಲಸ್ಪರ್ಶಿ ದರ್ಶನ ಮಾಡಿಸುತ್ತಾರೆ. "ಭಾರತದಲ್ಲಿ ಹಿಂದುವಾಗಲಿ ಮುಸ್ಲಿಮರಾಗಲಿ ಬಹುಪಾಲು ಜನರು ಕೋಮುವಾದಿಗಳ ಹಿಡಿತದಲ್ಲಿರದೆ ಸೌಹಾರ್ದತೆಯನ್ನು ಬಯಸುವವರಾಗಿದ್ದಾರೆ" ಎಂಬ ನಂಬಿಕೆ ಅವರದು.

ಹಿಂದು ಮುಸ್ಲಿಮ್ ಪರಸ್ಪರ ಜೀವನ ಮಾರ್ಗಗಳು, ಧರ್ಮ-ತತ್ವಜ್ಞಾನಗಳು ಹೇಗೆ ಪ್ರಭಾವಗೊಂಡವು ಎಂಬುದನ್ನು ಕಾಣಿಸುತ್ತಾರೆ. ದಿಲ್ಲಿ ಬಾದಶಹರನ್ನು ಅವರ ಕ್ರೌರ್ಯ ಮತ್ತು ಮತಾಂಧತೆಯನ್ನು ಪ್ರತಿಭಟಿಸಿ ಜೀವ ಕೊಟ್ಟವರ ಉದಾಹರಣೆ ದಾಖಲಿಸಿದ್ದಾರೆ. ಇವೆಲ್ಲದರ ಕುರಿತು ವೈಜ್ಞಾನಿಕ ಪ್ರಜಾಪ್ರಭುತ್ವವಾದಿ ದೃಷ್ಟಿಯ ಬೆಳವಣಿಗೆಯ ಅವಶ್ಯಕತೆಯನ್ನು ಹೇಳುತ್ತಾರೆ.

ಎರಡನೆಯ ಪ್ರಬಂಧ "ಬಾಬರಿ ಮಸೀದಿ-ರಾಮಜನ್ಮ ಭೂಮಿ ವಿವಾದ". ಈ ಪ್ರಬಂಧದಲ್ಲಿ ಬಾಬರಿ ಮಸೀದಿ-ರಾಮಜನ್ಮ ಭೂಮಿಯ ವಿವಾದ ಬೆಳೆದು ಬಂದ ಬಗೆಯನ್ನು ಐತಿಹಾಸಿಕ ಆಧಾರದಿಂದ ವಿವರಿಸುತ್ತಾರೆ: ಹಾಗೆ ವಿವರಿಸುತ್ತಾ ಅದರಲ್ಲಿ ಅಂದರ ಇತಿಹಾಸದಲ್ಲಿನ ರಾಜಕೀಯ ಕುತಂತ್ರವನ್ನು, ಕೋಮುವಾದಿ ದೃಷ್ಟಿಯನ್ನು ಎಳೆ ಎಳೆಯಾಗಿ ಬಿಡಿಸಿಡುತ್ತಾರೆ. ಇಲ್ಲಿಯೇ ಹಿಂದೂ ಮುಸ್ಲಿಮ್ ಸೌಹಾರ್ದತೆಯನ್ನು ಒಡೆದು ಹಾಕಿದ ಇಂಗ್ಲೀಷರ ಕುತಂತ್ರವನ್ನು ದಾಖಲಿಸುತ್ತಾರೆ. ಆರಕ್ಷಕರ(ಪೋಲೀಸ್ ಮತ್ತು ಅಧಿಕಾರಿಗಳು) ಕೋಮುವಾದಿ ಸ್ವರೂಪವನ್ನು ದಾಖಲಿಸುತ್ತಾರೆ.

ಮೂರನೆಯದು 'ಮುಸ್ಲಿಮ್ ಲೋಕ ಮತ್ತು ಸಾಹಿತ್ಯಾನುಭವ'. ಮುಸ್ಲಿಮರ ಮೇಲಿನ ಈ ಸಂಶಯ ಸೃಷ್ಟಿಗೆ ಹಿಂದೂ ಮತಾಂಧರು ಹೇಗೆ ಕಾರಣರೋ ಅಷ್ಟೇ ಮುಸ್ಲಿಮರು ಕಾರಣರು. ಯಾಕೆಂದರೆ ಮುಸ್ಲಿಮರು ಹೇಗೆ ಬದುಕುತ್ತಿದ್ದಾರೆಂದು ಹಿಂದುಗಳು ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲವೋ ಅಷ್ಟೇ ಮುಸ್ಲಿಮರು ತಮ್ಮ ಬದುಕಿನ ಬಗ್ಗೆ ಇನ್ನೊಬ್ಬರು ತಿಳಿದುಕೊಳ್ಳುವ ಅವಕಾಶ ಕಲ್ಪಿಸಿಕೊಡಲಿಲ್ಲ ಎನ್ನುತ್ತಾರೆ.

'ಬದಾವುನ್', ಮೀರತ್, ಭಿವಂಡಿ, ಮೊರದಾಬಾದ್, ಅಹ್ಮದಾಬಾದ್‌ನಲ್ಲಿ ನಡೆದ ಭೀಕರ ಹತ್ಯಾಕಾಂಡಗಳ, ನರಮಾಂಸದ ರುಚಿ ಹಚ್ಚಿಕೊಂಡ ಮತಾಂಧರ ಬಿಳಿ ಕೋರೆಯ ಹಲ್ಲುಗಳು ಇನ್ನೂ ನಮ್ಮ ಹಳ್ಳಿಗಳ ಮೇಲೆ ಧಾಳಿ ನಡೆಸದೆ ಇರುವುದು ನಮ್ಮ ದೇಶದ ಭಾಗ್ಯವೆಂದೇ ತಿಳಿದಿದ್ದೇನೆ. ಆದರೆ ಇದೂ ಕೂಡಾ ಇಂದು ಕೊನೆಯಾಗುತ್ತದೆ ಎಂದು ತಿಳಿದಂತೆ ದಿಗಿಲಾಗುತ್ತದೆ. ಇಟ್ಟಿಗೆ, ಪಾದುಕೆಯ ಮೆರವಣಿಗೆ ಹಳ್ಳಿಹಳ್ಳಿಗಳ ಮನೆಗಳ ಬಾಗಿಲು ತಟ್ಟಿದಾಗ, ಕಾನೂನು ಕಟ್ಟಳೆಯ ಸುಪ್ರೀಂಕೋರ್ಟ್‌ನ ತೀರ್ಪಿನ ವಿರುದ್ಧ ಮನೆ ಮನೆಯ ಬುರ್ಖಾದೊಳಗಿನ ಕೈಗಳ ಹೆಬ್ಬೆಟ್ಟನ್ನು ಬಿಳಿ ಹಾಳೆಯ ಮೇಲೆ ಒತ್ತಿಸಿದಾಗ ನನ್ನ ಎದೆಯೊಡೆದಂತಾಗುತ್ತದೆ" ಎಂದು ಆರ್ತತೆಯಿಂದ ಹೇಳುತ್ತಾರೆ. 'ಅಯೋಧ್ಯೆಯ ಮಂದಿರ ಮಸೀದಿಯ ವಿವಾದದಿಂದ ದೇಶದ ಅಮೂಲ್ಯ ಜನಶಕ್ತಿ, ಸೊತ್ತು, ಆಸ್ತಿಪಾಸ್ತಿ ನಷ್ಟವಾದರೂ ಲಾಭವಾದದ್ದು ಎರಡೂ ಪಂಗಡಗಳ ಕೋಮುವಾದಿ ಶಕ್ತಿಗಳಿಗೆ" ಎಂಬುದನ್ನು ನಿಚ್ಚಳವಾಗಿ ಹೇಳುತ್ತಾರೆ.

ಬಾಬರಿ ಮಸೀದಿ ನಾಶದಿಂದ ಮುಸ್ಲಿಂ ಸಮುದಾಯದಲ್ಲಿ ಉಂಟಾದ ಭಯ, ಆತಂಕವನ್ನು ವಸ್ತುನಿಷ್ಠತೆಯೊಂದಿಗೆ ಹೀಗೆ ಚಿತ್ರಿಸಿದ್ದಾರೆ-"ಇಡೀ ಸಮಾಜಕ್ಕೇ ಈ ದೇಶದ ಕಾನೂನು, ವ್ಯವಸ್ಥೆ ತಮ್ಮನ್ನು ಹಿಂದೂ ಫ್ಯಾಸಿಸ್ಟರಿಂದ ರಕ್ಷಿಸಲಾರದೇನೋ ಎಂಬ ಭಯ ಆವರಿಸಿಕೊಂಡಿದೆ. ಮುಸ್ಲಿಮ್ ಮಹಿಳೆಯರು ತಮ್ಮ ಮನೆಗಳಲ್ಲಿ ನಿದ್ದೆ ಬಿಟ್ಟು ಶೋಕತಪ್ತರಾಗಿ ಈ ದೇಶದ ಮಸೀದಿಗಳನ್ನು, ಮುಸ್ಲಿಮರನ್ನು ರಕ್ಷಿಸು ಸೃಷ್ಟಿಕರ್ತನೆ" ಎಂದು ದುವಾ ಸಲ್ಲಿಸುತ್ತಿದ್ದಾರೆ.

ಮುಸ್ಲಿಮರು ಈ ನಾಡಿನ ಇತರ ಪ್ರಜೆಗಳಂತೆಯೇ ಕೇವಲ ಮನುಷ್ಯ ಮಾತ್ರರು ಎಂಬ ಅತ್ಯಂತ ಮೂಲಭೂತವಾದ ಸತ್ಯ, ಈ ಸಂಕಲನದ ಲೇಖನಗಳಲ್ಲಿ ಮತ್ತೆ ಮತ್ತೆ ಮಾರ್ದನಿಗೊಳ್ಳುತ್ತದೆ. ಮುಸ್ಲಿಮರ ಬಡತನ, ಅವಿದ್ಯೆ ಮತ್ತು ಅವರಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಫಕೀರ ಮಹ್ಮದ್ ಮುಲಾಜಿಲ್ಲದೆ ಬರೆಯುತ್ತಾರೆ. ಆದರೆ ಅವರು ಮುಸ್ಲಿಮ್ ಕೋಮುವಾದಿ ರಾಜಕೀಯ ಹಿಂದೂ ಕೋಮುವಾದದಷ್ಟೇ ಕೆಟ್ಟದ್ದು ಎಂಬುದನ್ನು ಯಾವ ಅನುಮಾನವೂ ಉಳಿಯದಂತೆ ಸಾಬೀತು ಪಡಿಸುತ್ತಾರೆ. ನಂಬಿದ ದೈವ ಬೇರೆಯಾದ ಮಾತ್ರಕ್ಕೆ ಮುಸ್ಲಿಮರು ಇತರರಿಗಿಂತ ಒಳ್ಳೆಯವರೂ ಅಲ್ಲ, ಕೆಟ್ಟವರೂ ಅಲ್ಲ, ಮನುಷ್ಯನ ದುಃಖ ದುಮ್ಮಾನಗಳನ್ನು ನಾವೆಲ್ಲರೂ ಹಂಚಿಕೊಂಡಿರುವವರು, ಅಂತಿಮವಾಗಿ ನಮ್ಮೆಲ್ಲರ ಪಾಡೂ ಒಂದೇ ಎನ್ನುವುದು ಫಕೀರ ಮಹ್ಮದ್‌ರ ಆಳವಾದ ನಂಬಿಕೆ, ಪುಡಾರಿಗಳಿಗೆ ಮತ್ತು ಪತ್ರಕರ್ತರಿಗೆ ದಕ್ಕದ ಸತ್ಯ ಇದು ಎಂದು ಖ್ಯಾತ ಚಿಂತಕ ಜಿ.ರಾಜಶೇಖರ ಪುಸ್ತಕದ ಮುನ್ನುಡಿಯಲ್ಲಿ ಹೇಳುವ ಸತ್ಯ ಪುಸ್ತಕದ ಪುಟ ಪುಟದಲ್ಲೂ ಪಡಿಮೂಡಿದೆ.

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ.
2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಪಿ.ವಿ. ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು